UNIVERSAL LIBRARY
OU_198403
UNIVERSAL LIBRARY

OSMANIA UNIVERSITY LIBRARY

Call No. Accession No.

Author

Title

This book should be returned on or before the date last marked below.

ಶ್ರೀ.

ಶ್ರೀಮತ್ಪರಮಹಂಸ ಪರಿವ್ರಾಜಕ ಸದ್ಗುರು.
ಸತ್ಸಂಪ್ರದಾಯಕ ಸಿದ್ಧಯೋಗೀಂದ್ರ,
ಶ್ರೀ ಅಖಂಡೇಶ್ವರ ಸ್ವಾಮಿಗಳವರಿಂದ,
ಜ್ಞಾನಾಪೇಕ್ಷೆಗಳಿಗತ್ಯಂತೋಪ ಯುಕ್ತವಾಗಿರು
ವಂತೆ ವೇದಾಂತ ರಹಸ್ಯಗಳೆಲ್ಲವನ್ನು ಸಂಗ್ರಹಿಸಿ,
ವಿವರವಾಗಿ,
ವಚನ ರೂಪದಿಂದ ರಚಿಸಲ್ಪಟ್ಟು
ಪಂಡಿತ ಪಾಮರರಿಗೂ ಸಾಧಾರಣವಾಗಿ ಪ್ರಕಟಿಸಲ್ಪಡುವ,

# ಅಖಂಡೇಶ್ವರ
# ವಚನಶಾಸ್ತ್ರ

ಅಶುದ್ಧಗಳನ್ನು ಪಂಡಿತರಿಂದ ಚೆನ್ನಾಗಿ
ತಿದ್ದಿ ಶುದ್ಧಪ್ರತಿಯಾಗಿ ಛಾಪಿಸಲ್ಪಟ್ಟಿ.
(೨ನೇ ಛಾಪಾ ೨೦೦೦ ಪ್ರತಿಗಳು.)

ಬಳ್ಳಾರಿ ಕರ್ನಾಟಕ ಬುಕ್ ಡಿಪೋ ಏಜಂಟ್,
ಶ್ರೀ ಶಿವಲಿಂಗಂ ಶೆಟ್ಟರಿಗಾಗಿ,
ಶ್ರೀ ಸದ್ವಿಶ ಭಾರತೀ ವಿಲಾಸ ಮುದ್ರಾಕ್ಷರಶಾಲೆಯೊಳ್
ಮುದ್ರಿಸಲ್ಪಟ್ಟಿತು.
ಬೆಂಗಳೂರು - ಸಿಟಿ.

1911

[Registered copyright.]



ಶ್ರೀಗಣಾಧಿಪತಯೇನಮಃ.

# ಅಖಂಡೇಶ್ವರ ವಚನಶಾಸ್ತ್ರವು.

ಷಣ್ಮುಖದೇವರು ನಿರೂಪಿಸಿದ ಶೂನ್ಯನಿರಾಲಂಬ ಶರಣನ ಷಡುಸ್ಥಲ
ವಚನ ಪಿಂಡಸ್ಥಲ ಆ ಸ್ಥಲದ ವಚನ.

ಆದಿಅನಾದಿಯಿಲ್ಲದಂದು । ನಾದಬಿಂದುಕಳೆಗಳಿಲ್ಲದಂದು । ವೇದಶಾಸ್ತ್ರಾಗಮತಂತ್ರಂಗಳಿಲ್ಲದಂದು। ಚೌಷಷ್ಟಿವಿದ್ಯಕಲೆಗಳಿಲ್ಲದಂದು। ಭೇದಾಭೇದಂಗಳಿಂದೆತೋರುವತೋರಿಕೆಗಳೇನುಇಲ್ಲದಂದು ॥ ಅಖಂಡೇಶ್ವರಾನಿಮ್ಮನೀವರಿಯದ। ಅನಂತಕಾಲವಿರ್ದರಂದು ॥೧॥ ಪೃಥ್ವಿಆಕಾಶವಿಲ್ಲದಂದು । ತತ್ವಮಸ್ಯಾದಿವಾಕ್ಯಂಗಳಿಲ್ಲದಂದು । ದಿಕ್ಕುವಿದಿಕ್ಕುಗಳಿಲ್ಲದಂದು । ಸಪ್ತದ್ವೀಪಸಪ್ತಸಮುದ್ರಂಗಳಿಲ್ಲದಂದು । ನಿತ್ಯಾನಿತ್ಯಂಗಳೇನುಇಲ್ಲದಂದು।ಅಖಂಡೇಶ್ವರಾನಿಮ್ಮನೀವರಿಯದೆಅನಂತಕಾಲವಿರ್ದರಂದು॥೧॥ ಕಾಲಕಲ್ಪಿತಂಗಳಿಲ್ಲದಂದು । ಲೀಲೆಇಪ್ಪತ್ತೈದುನಟಿಸದಂದು । ಬಾಲಚಂದ್ರನಸೂಡದಂದು। ಕಾಲನಾಸ್ತಿಕಪಾಲೆಯಧರಿಸದಂದು । ಕಾಲಕಾಮವಾಯುದಕ್ಷಾದಿಗಳಿಲದಂದು । ಅಖಂಡೇಶ್ವರನಿಮ್ಮನೀವರಿಯದೆಅನಂತಕಾಲವಿರ್ದರಂದು ॥ ೨ ॥ ಪ್ರಕೃತಿವಿಕೃತಿಗಳಿಲದಂದು । ಮಹಾಶೇಷಕಮಠಾದಿಗ್ಗಜಗಳಿಲ್ಲದಂದು।ಅಷ್ಟಕುಲಗಿರಿಗಳಿಲ್ಲದಂದು । ಷಡಧ್ವಷಡುರುತುಗಳಿಲ್ಲದಂದು । ಶಶಿರವಿಗಳಬೆಳಗುವಸರಿಸದಂದು । ಅಖಂಡೇಶ್ವರಾನಿಮ್ಮನೀವರಿಯದೆ । ಅನಂತಕಾಲವಿರ್ದರಂದು॥೩॥ ಹಗಲಿರುಳಿಲ್ಲದಂದು। ಯುಗಜುಗಂಗಳಿಲ್ಲದಂದು । ಮರಳತಿರುಗದಂದು. ಗಗನಮೇರುಕೈಲಾಸಂಗಳಿಲ್ಲದಂದು। ಖಗಮೃಗಶೈಲವೃಕ್ಷಂಗಳಿಲ್ಲದಂದು। ಅಜಹರಿಸುರಾಸುರಮನುಮುನಿಗಳಿಲ್ಲದಂದು । ಜಗದಲೀಲಾವೈಭವಂಗಳೇನುಇಲ್ಲದಂದು । ಅಖಂಡೇಶ್ವರಾನಿಮ್ಮನೀವರಿಯದೆ । ಅನಂತಕಾಲವಿರ್ದರಂದು ॥೪॥ ಇಂತುಪಿಂಡಸ್ಥಲ

ಇಂತುಪಿಂಡಜ್ಞಾನಸ್ಥಲ— ನೀವುನಿಮ್ಮಸ್ವಲೀಲೆಇಂದ । ಜಗದವೈಭವಂಗಳನುನಟಿಸಬೇಕೆಂದು । ನಿಮ್ಮಲ್ಲಿನೆನಹುದೋರಲುಆನೆನಹುನಿರ್ಮಾಣಿಸಿತ್ತೆನಿಸಿತು. ಆಚಿತ್ತಿನಿಂದಚಿನ್ನಾದಚಿದ್ಬಿಂದುಚಿತ್ಕಳೆಗಳೊಗೆದವು, ಆಚಿನ್ನಾದಚಿದ್ಬಿಂದುಚಿತ್ಕಳೆ ಅನುಕೂಲಚಿತ್ತುಸಹಿತವಾಗಿ, ಘಟ್ಟಗೊಂಡು ಅಖಂಡಗೋಳಕಾಕಾರತೇಜೋಮೂರ್ತಿಯಪ್ಪ ಮಹಾಲಿಂಗವಾಯಿತು ಆಮಹಾಲಿಂಗವೇಪಂಚಮುಖವನ್ನೈದಿಸದಾಶಿವನೆನಿಸಿತು, ಆ ಸದಾಶಿವನಿಂದೆ

ಬ್ರಹ್ಮವಿಷ್ಣುರುದ್ರರೆಂಬ ತ್ರೈಮೂರ್ತಿಗಳುದಯಿಸಿದರು ಆ ತ್ರೈಮೂರ್ತಿಗಳಿಂದೆ ಸ್ವರ್ಗ, ಮರ್ತ್ಯ, ಪಾತಾಳಂಗಳೆಂಬ ಲೋಕಂಗಳು ಜನಿಸಿದವು ಆ ತ್ರೈಲೋಕಂಗಳ ಮಧ್ಯದಲ್ಲಿ ಸಚರಾಚರ, ಹೆಣ್ಣು ಗಂಡು ನಾಮ ರೂಪು ಕ್ರಿಯಾದಿ ಸಕಲ ವಿಸ್ತಾರವಾಯಿತು ಇಂತಿವೆಲ್ಲ ನಿಮ್ಮ ನೆನಹುಮಾತ್ರದಿಂದಾದ್ವಯ್ಯ ಅಖಂಡೇಶ್ವರಾ ॥ ೧ ॥ ಎನ್ನ ತನುವಿನ ಮರೆಯಲ್ಲಿರ್ದ ಚಿನ್ಮಯನ ಅರಿಯುವ ಬಲ್ಲಿರೆ ಯೆನ್ನ ಮನದ ಮರೆಯಲ್ಲಿರ್ದ ಮಹಾಘನ ವಸ್ತುವನು ಹುಡುಕುವ ಬಲ್ಲಿರೆ ಯೆನ್ನ ಪ್ರಾಣದ ಮರೆಯಲ್ಲಿರ್ದ ಪರಬ್ರಹ್ಮವೆಂಬ ಅಖಂಡೇಶ್ವರನ ನೋಡುವ ಬಲ್ಲಿರೆ । ೨ ॥ ಬೀಜದ ಮರೆಯಲ್ಲಿ ಅಡಗಿರ್ದ ಅಂಕುರವು ಬಹಿರ್ಗತವಾದಂತೆ । ಮುಗಿಲ ಮರೆಯಲಿರ್ದ ಕ್ಷಣಿಕವು । ಸ್ಫುರಿಸಿದಂತೆಯೆನ್ನ ಮನದಲ್ಲಿ ನಿಜದರ್ ಮಹಾಘನವಸ್ತು ಲೀಲೆಯಿಂದ ತಾನೆ ಪ್ರಗಟವಾಗಲು । ನಿಮ್ಮ ಆದಿಯ ಅನಾದಿಯ ನಿಲವು ಕಂಡೆನಯ್ಯಾ ಅಖಂಡೇಶ್ವರಾ ॥ ೩ ॥ ಭಾವಕ್ಕೆ ಬಾರದ ವಸ್ತುವ ನೆನೆಯಬಹುದೆಂತೊ । ನೆನಹಿಂಗೆ ಬಾರದ ವಸ್ತುವನೆ ನೆನೆವುದಿನ್ನೆಂತೊ । ನೆನೆಯದೆ ಭಾವಿಸದೆ ಪ್ರಸನ್ನೊಳು । ಬಯಲರೂಪಾಗಿ ತೋರಿದನು ನೋಡಾ ಅಖಂಡೇಶ್ವರಾ ॥ ೪ ॥ ಅನಂತಕಾಲವೆನ್ನ ಪಟಲದೊಳೆನ್ನ ಪಟಮರೆಯೊಳಗಿರ್ದು ಯೆನಗೆ ಕಾಣಿಸದೆ ಇರ್ದೆಯಿಂದು । ಇನ್ನು ನಾ ಸಿಕ್ಕಿ ಗಾರುದವಯ್ಯಾ । ನೀವು ನಿಮ್ಮ ಕರುಣದಿಂದ ಯೆನ್ನ ಪಡಲ ಮರೆಯನು ಪಡೆದೆಯೆನ್ನ ಕಣ್ಣಮುಂದಣ ಸತ್ತ್ವರಪತ್ರ ತೆರೆದ ಪರದೆಯನು ಹರಿಗೊಳಿಸಿದನೆ ನಿಮ್ಮ ನಿತ್ಯ ನಿಲವ ಕಂಡೆನಯ್ಯ ಅಖಂಡೇಶ್ವರಾ ॥ ೫ ॥ ಎನ್ನಂಗದ ಮನ್ನಣೆಯೊಳಗೆ ಮಂಗಳಾಂಗನ ಬೆಳಗು ಥಳಥಳನೆ ಹೊಳೆವ ಪ್ರತಿಬಿಂಬದಾಗ, ಎನ್ನ ಕಂಗಳ ಕಾಳಿಕೆಯು ಕಡೆಗಾಯಿತು. ಎನ್ನ ಮನದ ಮುಂದಣ ಮರವೆ ಹರಿದೋಯಿತು. ಅಖಂಡೇಶ್ವರನ ನಿಲವು ನಿಶ್ಚಳವಾಗಿ ಕಾಣಬಂತು ॥ ೬ ॥ ಅಂಜನದ ಬಲದಿಂದ ನೆಲದ ಮರೆಯ ದ್ರವ್ಯ ಕಾಣಬಂದಿತು । ಎನ್ನ ಚಿತ್ತಮಧ್ಯದಲ್ಲಿ ತ್ರೈಶಿವಜ್ಞಾನಾಂಜನ ಪ್ರಜ್ವಲಿಸಲಾಗಿ । ತತ್ತ್ವಾತತ್ತ್ವಂಗಳು ಏಕಾಕಾರವಾದ ಅಖಂಡೇಶ್ವರನೆಂಬ ಪರವಸ್ತು ಹೊಳೆದುಗೆಲು ಕಣ್ಣಿಗೆ ಕಾಣಬಂದಿತು ॥ ೭ ॥

ಇತಿ ಪಿಂಡಜ್ಞಾನಸ್ಥಲ ಸಂಪೂರ್ಣಂ.

ಸಂಸಾರ ಹೇಯಸ್ಥಲ.

ಎನ್ನ ಭವಭವದಲ್ಲಿ ತೊಳಲಿ ಬಳಲಿಸಿದ ಕಾರಣವೇನಯ್ಯಾ । ನಾನು ಮಾಡಿದ ಅಪರಾಧವೇನಯ್ಯಾ । ನೀವು ಮಾಡೆಂಬುದ ನಾನು ಮಾಡಿದೆನು । ಎನಗೆ ಬೇರೆ ಸ್ವತಂತ್ರವುಂಟೆ । ಹೇಳಾ ಅಖಂಡೇಶ್ವರಾ ॥ ೧ ॥ ಅಡವಿಯೊಳಗಿರ್ದ ಗೋವು । ಮನೆಯಲ್ಲಿರ್ದ ಕರುವಿಗೆ ಚಿಂತಿಸಿ ಬಂದು ಮೊಲೆಯನೀದು ಮೋಹವ ಮಾಡುವುದಲ್ಲದೆ । ಆ ಕರುವೆತ್ತ ಬಲ್ಲುದಯ್ಯಾ । ನಾನು ಜನ್ಮದೇಹವಿಡಿದು ಪಂಚಭವದಲ್ಲಿ ತೊಳ

ಲುತ್ತಿರಲು । ನೀನುದಯಹುಟ್ಟಿ ಯನ್ನ ಮರೆವೆಯಸಂಸಾರವಂತೊಲಗಿಸಿ ಕರುಣದಿಂದಾ ಸಲಹಬೆ ಕೆಂಬ ಚಿಂತೆ ನಿನಗಲ್ಲದೆ ನಾನೇನ ಬಲ್ಲನಯ್ಯಾ ಅಖಂಡೇಶ್ವರಾ ॥೨॥ ಎಂದುಅ ಷ್ಟತನುಗಳುನಿಮ್ಮಿತವಪಗಿ । ಪಿಂಡಾಂಡವಾದವು ಅಂದುಮೊಂದುಪರಿಯಂತರಬಂಗೆನಯ್ಯಾ ಸಂಸಾರಘಳ್ಳರಿಯಲ್ಲಿ । ಅಖಂಡೇಶ್ವರ ಈಸಂಸಾರದಂದುಗುವತೆತ್ತೊಲಗಿಸಿನಿಮ್ಮಂತಯಾಳದುಕೊಳ್ಳಯ್ಯಾ । ಯಂನನಿಮ್ಮಧರ್ಮನೀಮ್ಮಧರ್ಮ ॥ ೩ ॥ ಘ್ರಾಣೇಂದ್ರಿಯವಿಷಯದಿಂದ ಭ್ರಮರಕೆಡುವದು । ಸಂಪಿಗೆಯಪ್ರಷ್ಪದಲ್ಲಿ ರಸನೇಂದ್ರಿಯ ವಿಷಯದಿಂದ ಮತ್ಸ್ಯಕೆಡುವದು । ಜಾಲಗಾರನಬಲೆಯಲ್ಲಿನಯನೇಂದ್ರಿಯವಿಷಯದಿಂದ ಪತಂಗಗಕೆಡುವದು । ದ್ವೀಪಜ್ವಾಲೆಯಲ್ಲಿತ್ವಗೇಂದ್ರಿಯವಿಷಯದಿಂದ ಗಜ ಕೆಡುವದು । ರಾಜನಕ್ಷತ್ರಕದಲ್ಲಿಶ್ರವಣೇಂದ್ರಿಯವಿಷಯದಿಂದ ಯಗಳಕೆಡವದು । ಬೇಟಕಾರನ ಸರಳನಲ್ಲಿ ಇಂತಿಪ್ರಾಣಿಗಳು ಪ್ರೊಂದೊಂದುವಿಷಯದಿಂದು ಬಂದನಕೊಳ್ಳಗಾದವು । ಇಂತಪ್ಪಪಂಚೇಂದ್ರಿಯ ವಿಷಯವ್ಯಾಪಾರದಲ್ಲಿ ಲಂಪಟರಾದಮನುಜರು ಕೆಟ್ಟಕೇಡನೇನೆಂಬೆನಯ್ಯಾ ಅಖಂಡೇಶ್ವರಾ ॥ ೪ ॥ ವಿಷಯವೆಂಬಕಾಲಾಗ್ನಿಜ್ವಾಲೆಯಲ್ಲಿ ಈ ಮೂರುಲೋಕವೆಲ್ಲಾ ಹತವಾಗಿಪ್ಪುದುನೋಡಾ । ಅದೆಂತೆಂದೊಡೆ—ಕುಂಡಲಿಯೆಂಬ ಮಾಯಾಸರ್ಪದು ತನ್ನ ಬಾಲವಬ್ರಹ್ಮರಂಧ್ರಕ್ಕೆಸೇರಿಸಿ । ನಾಭಿಚಕ್ರವಸುತ್ತಿಕೊಂಡು ಅಧೋಮುಖವಾಗಿ ಇಂದ್ರಿಯಮೆಂಬವಿಷವಕಾರುತಿಪ್ಪುದುನೋಡಾ । ಆ ವಿಷಯುವಸಂಜಾತಲೆಗೇರಿದಲ್ಲಿ । ಅಸಿಯುವಸ್ತ್ರೀಯರಸಂಪತ್ಸುಖವ ಬಹು ಸವಿಯೆಂದುತಲೆದೂಗುತಿರ್ಪರುನೋಡಾ । ಸಕಲಪ್ರಾಣಿಗಳು ಇದು ಪಶುಪತಿಮಾಡಿದ ಮಾಯಾವಿಧಿಯೆಂದು ತಿಳಿಯದೆಹಸಗೆಟ್ಟುಹೋಯಿತುನೋಡಾ । ಮೂಜಗವೆಲ್ಲಾ ಅಖಂಡೇಶ್ವರಾ ॥೫॥ ಬಂಣದಚರ್ಮದಹೆಂಣಿನಲಿಂಗಸಂಗದಕೂಟದಸುಖದಸವಿಯೆಂದುಮನವೆಣಿಸುವ ಕಂಣಗೆಟ್ಟ ಅಂಣಗಳುನೀವ್ರುಕೇಳಿರೋ । ಶುನಕಯೆಲುವುಕಡಿವಲ್ಲಿ ತನ್ನ ಬಾಯಜೊಲ್ಲೊಳೆತನಗೆಸವಿದಟ್ಟುತಿರ್ಪುದಲ್ಲದೆ । ಆಯಲುವಿನೊಳಗೇನಾ ಸವಿಸಾರವುಂಟೇ ? ತನ್ನ ಊರ್ಧ್ವಬಿಂದು ಮಾಯಾವಿಲಾಸದಿಂದ ಅದೋಗತಿಗಿಳಿದು ಮೂತ್ರದನಾಳವ ತಗಲಿಸಿ ಕಿಂಚಿತ್ಸುಖವುಂಟಾಗುತಿರ್ಪುದಲ್ಲದೆ ಹೆಂಣಿನಿಂದ ಸುಖವುಂಟೇ ಹದ್ದು ಪ್ರಾಣಿಗಳಿರಾ । ಇಂತೀದೃಷ್ಟವತಿಳಿದು ಭೇದಿಸಿ ತಾಕಾಣಲರಿಯದೆ ಹೇಸಿಕೆಯು ಕಿಸುಕುಳದ ಕೀವು ತುಂಬಿದಸುರುವಹಸಿಯತೊಗಲಿನ ಹಳೆಯಘಾಯದಲಿ ವಿಷಯಾತುರದಿಂದೆಬಿದ್ದು ! ಮತಿಮಸಲಿಸಿಮುಂದುಗಾಣದೆ । ಮುಳುಗಾಡುತಿರ್ಪುದುನೋಡಾ । ಮೂಜಗವೆಲ್ಲಾ ಅಖಂಡೇಶ್ವರಾ ॥೬॥ ಅಂಡಜಾ ಇಪ್ಪತ್ತೊಂದುಲಕ್ಷ । ಪಿಂಡಜ ಇಪ್ಪತ್ತೊಂದುಲಕ್ಷ

ಉದ್ಭಿಜಇಪ್ಪತ್ತೊಂದುಲಕ್ಷ । ಜರಾಯುಜಇಪ್ಪತ್ತೊಂದುಲಕ್ಷ । ಇಂತೀ ಯೆಂಭತ್ತುನಾಲ್ಕು ಲಕ್ಷ ಜೀವರಾಶಿಗಳೊಳಗೆ ಒಂದೊಂದು ಜನ್ಮದೊಳಗೆ ಸಹಸ್ರಸಹಸ್ರವೇಳೆ ಹುಟ್ಟಿಬಂದು । ಅನೇಕದುಃಖವಂತಿರಲಿ । ಮುಂದೆಮಾನುಷ್ಯದೇಹವಹಿಡಿದುಬಂದ । ದುಃಖಮಂಪೇಳ್ವೆನದೆಂದೆನೆ,—ತಂದೆಯವಿಕಾರದ್ವಸೆಯಿಂದ । ಬಿಂದುರೂಪಾಗಿತಾಯಬಸುರಲ್ಲಿನಿಂದು ಒಂಭತ್ತುತಿಂಗಳ ಪರಿಯಂತರ । ಅವಯವಂಗಳಬಲಿದು । ಪಿಂಡವರ್ಧನವಾಗಿ ಕಳ್ಳನ ಹೆಡಗಯ್ಯಕಟ್ಟಿ ಶೆರೆಮನೆಯಲ್ಲಿ ಕುಳ್ಳಿರಿಸುವಂತೆ । ಗರ್ಭವೆಂಬ ಶೆರೆಮನೆಯಲ್ಲಿ ಶಿಶುವು ಮುಚ್ಚಿದಾಕಣ್ಣು ಮುಗಿದ ಬಾಯಾಗಿ ಕುಕ್ಕುಟಾಸನದಲ್ಲಿಕುಳ್ಳಿರ್ದು । ಕಡಿವಜಂತುಹುಳುಗಳಬಾಧೆ । ಸುಡುವಜಠರಾಗ್ನಿಯಬಾಧೆಇಂತಿ ಪ್ರಮೊದಲಾದ ಅನಂತಕೋಟಿ ಬಾಧೆಗಳಿಂದ ದಿನದಿನಕೆ ದುಃಖವುಂಬುತತ್ತಾ । ಆಮೇಲೆ ಜಾತಿಸ್ಮರತ್ವವುದಯವಾಗಿ ತನ್ನ ಹಿಂದಣ ಧರ್ಮಕರ್ಮಗಳ ಪುಣ್ಯಪಾಪಂಗಳ ಅರುಹು ಮರಹುಗಳನಾರೈದುನೋಡಿ ಹಿಂದೆ ಅರಿಯದೆ । ಪಾಪವವೆಸೆಯಿಂದೆ ಈ ಗರ್ಭನರಕಕ್ಕೆಬಂದೆ । ಇನ್ನು ಮುಂದೆತರನೇನೆಂದು । ತನ್ನೊಳಗೆ ತಾನೇ ಚಿಂತಿಸಿ ಸರ್ವರಿಗೆ ಪರಮೇಶ್ವರನೇ ಕರ್ತನು । ಸರ್ವರ ಭವಪಾಶಂಗಳ ಚ್ಛೇದಿಸುವಾತನು ಪರಮೇಶ್ವರನೆಂದರಿದು ಮನದಲ್ಲಿ ನಿಶ್ಚಯಿಸಿಕೊಂಡು । ಆ ಪರಮೇಶ್ವರಗೆ ಶಿವಧೋ ಶಿವಧೋ ಎಂಬ ಮೊರೆಯಿಡುತ್ತಾ । ಶಿವಧ್ಯಾನಪಾಂ ಮಾಳ್ಪ ಸಮಯದಲ್ಲಿ । ಕೋಟಿಶಿಡಿಲುಹೊಯಿದಂತೆ । ವಿಷ್ಣುಪ್ರಸೂತಿವಾಯು ಬೀಸಲು । ಅದಕಂಡುತರತರನೆನಡುಗಿ । ಧ್ಯಾನಪಲ್ಲಟವಾತ ದಿಗ್ಭ್ರಮೆಗೊಂಡು ಉರ್ಧ್ವಮುಖವಾಗಿ ಕುಳ್ಳಿರ್ದ ಶಿಶುವು ತಿರ್ರನೆತಿರುಗಿತ್ರಲೆಕೆಳಗಾಗಿ ಕರ್ಕಕಂಬಿಚ್ಚಿನಲ್ಲಿಚಿನ್ನದ ಸಲಾಕಿ ತೆಗೆದಂತೆ । ಬಚ್ಚಲಹುಳುವಿನಂದದಿ ಯೋನಿಯೆಂಬ ಸೂಕ್ಷ್ಮದ್ವಾರದಿಂದ ಪೊರಮಟ್ಟು ಹುಟ್ಟಿದಲ್ಲಿಕೋಟಿ ಬಾಧೆಗಳಿಂದೆನೊಂದು ಹಮ್ಮನೆಹಾರಿ ಕಡುದುಃಖವನುಂಬಿಟ್ಟು । ಹಿಂದಣಜಾತಿಸ್ಮರತ್ವಕೆಟ್ಟುಮುಸುಳಿಸಿ ॥ ತನ್ನ ಮಲಮೂತ್ರಂಗಳಲ್ಲಿಹೊರಳಾಡಿ । ಬಾಲಲೀಲೆಯ ಸುಖದುಖಂಗಳನನುಭವಿಸಿ । ಆ ಬಾಲಲೀಲೆಇಂದುಳಿದು । ಮೇಲೆಯವ್ವನದಪಸಯಸ್ಸುವದಗಿದಲ್ಲಿ ಕಾಮಕ್ರೋಧಪಿಂಕರಗಿ । ಮದಮತ್ಸರದಲ್ಲಿಮುಂದುಗೆಟ್ಟು ನಾನಾವ್ಯಾಪಾರವನಂಗೀಕರಿಸಿ ಬಂದಹೋನಿಯಂದರಿಯದೆ । ಉಂಡಮೊಲೆಯೆಂದರಿಯದೆ । ಕಾಮವಿಕಾರತಲೆಗೇರಿ । ವಿಷಯಾತುರನಾಗಿ ಇಳಿಗಾರನ ದೆಸೆಯಿಂದ । ಈ ಚೆಲಮರನಿಸ್ಸಾರವಾದಂತೆ । ಸ್ತ್ರೀಯರಸಂಗದಿಂದೆ ದೇಹದೊಳಗಣ ಊರ್ಧ್ವಬಿಂದು ಜಾರಿಜಾರಿ ಇಳಿದು । ಸೋರಿಸೋರಿಹೋಗಿ ದೇಹವು ನಿಸ್ಸಾರವಾಗಿ ಯವ್ವನಬಲಗೆಟ್ಟು । ಮುಪ್ಪಾವರಿಸಿ ಅಚೇತನ

ಗೊಂಡು । ಸರ್ವಾಂಗವೆಲ್ಲ ಸ್ತ್ರೀ ನರ ತೆರೆಗಳಿಂದ ಮುಸುಕಲು । ದುಃಖನ
ನಾಗಿ । ಆಧಿವ್ಯಾಧಿ ವಿಪತ್ತು ರೋಗರುಜೆಗಳಿಂದೆ ಬಹುದುಃಖವಂ ಬಟ್ಟು
ಯುದೆಗೊಡುಗೆಟ್ಟು ಬೆನ್ನು ಬಾಗಿ ಕಣ್ಣು ವಳನಟ್ಟು । ಶರೀರಯುಳತಾಟಗೊಂ
ಡು । ಕಾಲಮೇಲಿಕ್ಕೈಯನ್ನೂರಿ ಕೋಲುವಿಡಿದುಯೇಳುತ್ತ । ನಾನಾತೆರದ
ವೃದ್ಧಾವತೆಯಿಂದ ! ಆತ್ಮನು ಕೆಟ್ಟುನಷ್ಟವಾಗಿಹೋಯಿತು ನೋಡಾ ॥ ಇದ
ನವಕಂಡು ನಾನು ಅಂಜಿ ಮರಳಿ ಜನ್ಮಕ್ಕೆ ಬರಲಾರದೆ। ನಿಮ್ಮ ಮರೆಹೊಕ್ಕೆನಯ್ಯಾ
ಅಖಂಡೇಶ್ವರಾ ॥೭॥ ಹರಿಹತ್ತು ಭವದಲಿ ಬರಿಸಿತ್ತು ಮಾಯೆ । ಬ್ರಹ್ಮನ ತಲೆ
ಯು ಹೋಳ ಮಾಡಿತು ಮಾಯೆ । ಇಂದ್ರನಂಗಕ್ಕೆ ಭಂಗವನಿತ್ತು ಮಾಯೆ । ಸಿ
ದ್ಧ ಸಾಧಕರಿಗೆಲ್ಲ ಗುಡ್ಡ್ಯಜವಸಿಕ್ಕಿ ತಾ ಮಾಯೆ । ಮನುಮುನಿಗಳಗೆಲ್ಲ ಮನವ
ಳಸಿಕೊಂಡು ಮರಣಕ್ಕೊಳಗು ಮಾಡಿತು ಮಾಯೆ । ಸ್ವರ್ಗಮರ್ತ್ಯಪಾತಾಳ
ವೆಂಬ ಮೂರುಲೋಕದವರೆಲ್ಲರ ಯೋನಿಮುಖದಲ್ಲಿ ಹರಿಹರಿದು ನುಂಗಿತೊ
ತ್ತುಳಿದುಳಿಯಿತು ಮಾಯೆ । ಮುಕ್ಕಣ್ಣ ಸೀಮಾಡಿದ ಮಾಯವ ಬೆಕ್ಕ ಸನೆಬೆರ
ಗಾದೆನ್ನಯ್ಯಾ। ಅಖಂಡೇಶ್ವರ ॥೮॥ ಬಂಧನಕ್ಕೊಳಗಾದ ಹುಲಿಗೆ ಬಲಾ
ತ್ಕಾರವುಂಟೇನಯ್ಯಾ । ಸಂಸಾರದಂದುಗದಲ್ಲಿ ತೊಳಲುವ ಜೀವರಿಗೆ ಮುಂ
ದೆ ಮುಕ್ತಿಯ ನರಸುವ ಜ್ಞಾನವುಂಟೇನಯ್ಯಾ ಅಖಂಡೇಶ್ವರ ॥೯॥ ಕೆಟ್ಟ ಕೆ
ಟ್ಟೆನಯ್ಯಾ ವೆತ್ಲುವಾಧಿಯ ಹಿಡಿದು । ಕೆಟ್ಟೆ ಕೆಟ್ಟೆನಯ್ಯಾ ಪಡಲ ದುರ್ಗುಣ
ದೊಡನಾಡಿ । ಕೆಟ್ಟೆ ಕೆಟ್ಟೆನಯ್ಯಾ ನಿಮ್ಮಡಿಯ ಭಕ್ತಿವುಮಿ ಅಖಂಡೇಶ್ವರಾ
॥೧೦॥ ಕಿಸುಕುಳ ಕೀವು ರಕ್ತ ಪಸೆದು ತುಂಬಿದ ಮಲಮೂತ್ರ ರಂಜನ । ವ್ಯಾ
ಸುಕಿದ ಮಾಂಸ ಅಸ್ಥಿಗಳ ಸುತ್ತಿನ ಹಸನಾದ ಚರ್ಮದ ಹೊದಿಕೆಯ ಹುಸಿತನು
ಮುಟ್ಟಿ ಪಶುಪತಿ ನಿಮ್ಮ ಮರದೆನ್ನಯ್ಯಾ ಅಖಂಡೇಶ್ವರಾ ॥೧೧॥ ಸುಡುಸುಡು
ಈ ದೇಹದ ರೂಪು ನೋಡಿದರೇನು ಹುರುಳಿಲ್ಲವಯ್ಯಾ ॥ ಯೆಲುವು ಚರ್ಮನ
ರ ಮಾಂಸ ಮಲಮೂತ್ರ ಯುಕ್ತವಾದ ಅನಿತ್ಯದೇಹವನಚ್ಚಿ । ನಿಮ್ಮ ನಿಜವ ಮ
ರದು ಭವಭಾರಿಯಾದೆನ್ನಯ್ಯಾ ಅಖಂಡೇಶ್ವರಾ ॥೧೨॥ ಭವಕ್ಕೆ ಬೀಜವಾದು
ದು ತನುವೋ ಮನವೋ । ಯೆಂದು ವಿಚಾರಿಸಿ ನೋಡಲು । ಮನವೇ ಕಾರಣ
ವಾಗಿರ್ಪುದರಿಂದೆ ಕೆಟ್ಟ ಮನದ ಸಂಗದಿಂದ ಮರ್ತ್ಯಲೋಕದಲ್ಲಿ ಹುಟ್ಟಿ ತಾ
ಪತ್ರಯಾಗ್ನಿ ಯಿಂದೆ ಕಂದಿ ಕುಂದಿ ನೊಂದು ಬೆಂದೆನಯ್ಯಾ । ಈ ಮನದ ಸಂ
ಗದಿಂದೆ ಭವಭವಗಳಲ್ಲಿ ತೊಳಲಿ ಬಳಲಿದೆನ್ನಯ್ಯಾ । ಈ ಮನದ ಸಂಗದಿಂದ ಲೆ
ಅನಂತ ಮರಣಯಾಜೋಹಗಳಲ್ಲಿ ಸೆರೆಸಿಕ್ಕಿದೆನಯ್ಯಾ । ಈ ಮನದ ಸಂಗವ ಬಿ
ಡಿಸಿ ನಿಮ್ಮ ನೆನಹಿನ ಸಂಗದಲ್ಲಿರಿಸಲಿಕ್ಕೊಯ್ಯಾ ಯೆನ್ನ ಅಖಂಡೇಶ್ವರಾ ॥೧೩॥
ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ । ಇಂದ್ರಿಯಂಗಳೆಂಬ ಶಾಖೆ
ಶಾಖೆಗೆ ಹಾರಿ ವಿಷಯಂಗಳೆಂಬ ಹಣ್ಣು ಫಲಂಗಳಗ್ರಹಿಸಿ । ಭವಪತ್ತೆ ಮುಖ

ಪಾಗಿಹೋಗುತ್ತಿ ದೆನೋಡಾ। ಈಮನವೆಂಬಮರ್ಕಟ ನಿಮ್ಮನೆನವೆಂಬಸಾ
ಕದಲ್ಲಿಕಟ್ಟಿ। ಯನ್ನನುಳುಹಿಕೊಳ್ಳಯ್ಯಾ ಅಖಂಡೇಶ್ವರಾ ॥೧೪॥ ತನುವಿ
ಕಾರಕತ್ತಲೆಯಲ್ಲಿ ಸಿಕ್ಕಿ ಕಂಗೆಟ್ಟು ಕಳವಳಿಸಿ ತೊಳಲಿಬಳಲಿದೆನಯ್ಯಾ ಮ
ನವಿಕಾರದ ಮರಹಿಯಲ್ಲಿಸಿಕ್ಕಿ ಮಱುಮಸಿಯರಾಗಿಬಂಣಗೆಟ್ಟೆನಯ್ಯಾ। ಈ
ತನುಮನದವಿಕಾರವ ಮಾಣಿಸಿ। ನಿಮ್ಮಭಕ್ತಿವಿಚಾರದಲ್ಲಿರಿಸಿಸಲಹಯ್ಯಾಯ
ನ್ನನು ಅಖಂಡೇಶ್ವರಾ ॥೧೫॥ ಮತಿಗೆಟ್ಟೆನಯ್ಯಾಮನದಾಸೆಯ ಕಚ್ಚಿದೃ
ತಿಗೆಟ್ಟೆನಯ್ಯಾ। ತನುವಿನಾಶೆಯಮೆಚ್ಚಿ ಈತನು ಮನದಾಶೆಯಕೆಡಿಸಿ। ನಿ
ಮ್ಮಭಕ್ತಿಯಲೇಸತೋರಿಸಿ ಬದುಕಿಸಯ್ಯಾಯನ್ನ ಅಖಂಡೇಶ್ವರಾ ॥೧೬॥
ಹಸಿವುತೃಷೆಯಂಡಲೆಯಾವರಿಸಿ ಹುಸಿವುತಿರ್ಪುದಾನೆನೋಡುಸರಾನವಾ। ವಿ
ಷಯಾವಿಕಾರದಂಡಲೆಯಾವರಿಸಿ ದೆಸೆದೆಸಗಿಮುಳುವುತಿರ್ಪುದು ನೋಡಾತ
ನುವು। ಈತನುಮನದಲ್ಲಿ ಮುಸಿಕಿದ ಮಾಯಾಪಾಶವೆಯಕಳೆದು।ನಿಂಮ
ಭಕ್ತಿಯನೆತೋರಿಸಿಬದುಕಿಸ್ಯಯ್ಯಾ ಅಖಂಡೇಶ್ವರಾ ॥೧೭॥ ಸಾಕುಸಾ
ಕುಮಾಡದೂ ಭವಬಂಧನಂಗಳ ಸೋಂಕಿಬಿಡದಾ। ಸಕಲಸಂಸಾರವ ಬೇ
ಕೆಂಡೆಳೆಸುವದಾ ವಿಷಯಭೋಗಕ್ಕೆ ಶಿವಶಿವಾ। ಈಕಾಕುಮನಕ್ಕೆ ಯೇ
ನುಮಾಡಲಿಹರಹರಾ ಈ ಕಷ್ಟಮನಕ್ಕೆ ಯಂತುಮಾಡಲಿ। ಅಖಂಡೇಶ್ವ
ರಾ ನಿಮ್ಮಕೃಪಾವಲೋಕನದಿಂದೆನೋಡಿ ಪಾಲಿಪುದೈಯ್ಯಾ। ಯನ್ನನಿಂ
ಮ್ಮಧರ್ಮನಿಮ್ಮಧರ್ಮ ॥೧೮॥ ಸತ್ಯವನುಡಿಯದು। ಸದಾಚಾರದಲ್ಲಿನಡೆಯ
ದು। ಭಕ್ತಿಯಹಿಡಿಯದು।ಮುಕ್ತಿಯಪಡೆಯದು। ಸುಡುಸುಡುಮನದ
ಯುಕ್ತಿಯ ಅಖಂಡೇಶ್ವರಾ। ನಿಮ್ಮಭಕ್ತಿಭಾವದಲ್ಲಿರಿಸಿಸಲಹಯ್ಯಾಯ
ನ್ನ ನಿಮ್ಮಧರ್ಮನಿಮ್ಮಧರ್ಮ॥೧೯॥ಹುಲಿಯಬಾಯಲ್ಲಿಸಿಕ್ಕಿದ। ಹುಲ್ಲೆಯಂ
ತೆ। ಸರ್ಪನಬಾಯಲ್ಲಿಸಿಕ್ಕಿ ದಕಪ್ಪೆಯಂತೆ॥ ಸಕಲಲೋಕಾದಿಲೋಕಂಗಳು
ಮಾಯಾಬಲೆಯಲ್ಲಿಸಿಕ್ಕಿ। ಸೆರೆಯ ಹೋಗುವದಕಂಡುನಾನು ಅಂಜಿನಿಮ್ಮ
ಮರೆಹೊಕ್ಕೆನುಕಾಯ್ಯೆಯ್ಯಾ। ಕಾರುಣ್ಯನಿಧಿಯೇ ಅಖಂಡೇಶ್ವರಾ ॥೨೦॥
ಕಾಲನೆಂಬಜಾಲಗಾರನ। ಕರ್ಮವೆಂಬಲೆಯಬೀಸಿ। ಸಂಸಾರಶರಧಿಯ
ಲ್ಲಿರ್ದಸಕಲಪ್ರಾಣಿಗಳೆಂಬ ಮೀನುಗಳಹಿಡಿದು ಕೊಲ್ಲುತ್ತೈದಾನೆ। ಕಾಮ
ನೆಂಬಬೇಟೆಗಾರನು। ಕಂಗಳಕೊನೆಯಲ್ಲಿನಿಂದು। ಕಳವಳದಬಾಣವ ನೆಸೆ
ದು। ಭವವೆಂಬಲೆಯಲ್ಲಿ ಸಕಲಪ್ರಾಣಿಗಳ ಕೆಡಹಿಕೊಂಡು ಕೊಲ್ಲುತ್ತೈ
ದಾನೆ। ಮಾಯೆಯೆಂಬರಕ್ಕಸಿ ಸಕಲಪ್ರಾಣಿಗಳ ಹೀರಿಹಿಪ್ಪೆಯಮಾಡಿಉಗು
ಳದು ಪೂಭುತ್ತೈದಾಳೆ। ಇಂತೀತ್ರಿವಿಧಮುಖದಲ್ಲಿ ಕಾಡುವ ನಿಮ್ಮ
ಯುವಗೆಲುವರೆ ಅರಿಗಳವಲ್ಲ। ಅಖಂಡೇಶ್ವರನೀವೀಕರುಣಿಸಿದನಕ್ಕ॥ ಸಿರಿ
ವಂತರೆಂದು ಹೇಳುವಾ ದರಿದ್ರಕ್ಕೆವಳಗುಮಾಡಿ ಕಾಡಿತಾನೋಡಾ ನಿಮ್ಮ

ಮಾಯೆಸತ್ಯವೆಂದುಹೇಳುವವರ । ಅಸತ್ಯಕ್ಕೆವಳಗುಮಾಡಿಕಾಡಿತುನೋಡಾ । ಮಾಯೆ ಹಿರಿಯರೆಂದುಹೇಳುವವರಾ । ಕಿರಿದಿಗೆವಳಗುಮಾಡಿಕಾಡಿತುನೋಡಾನಿಮ್ಮಮಾಯೆ । ನಿತ್ಯವೆಂದುಹೇಳುವವರ । ಅನಿತ್ಯಕ್ಕೆವಳಗುಮಾಡಿತುನೋಡನಿಮ್ಮಮಾಯೆ । ನಿಃಕಾಮಿಎಂದುಹೇಳುವವರ । ಕಾಮದ ಕತ್ತಲೆಯಕೆಡಹಿಕಾಡಿತುನೋಡಾನಿಂಮಮಾಯೆ । ಇಂತೀಜಗವೆಲ್ಲನುಂಗಿ । ಜಾಳಿಸುತಿರ್ಪನಿಂಮಮಾಯೆದೇಳಿಗೆಯಗೆಲುವಡೆಅಳವಲ್ಲ । ಅಖಂಡೇಶ್ವರ ನೀವುಕರುಣಹುಟ್ಟವಲಿಯೆದನಕಾ ॥ ೨೦ ॥ ಎಂನಕಾಯದ ಕರ್ಣವ ಕಳೆಯಯ್ಯಾ । ಎಂನಜೀವದುಪಾದಿಯನಳಿಯಯ್ಯಾ । ಎಂನಪ್ರಾಣವ ಪ್ರಪಂಚವತೊಲಗಿಸಯ್ಯಾ ಎಂನಭಾವದ ಭ್ರಮೆಯ ಕೆಡಿಸಯ್ಯಾ । ಎನ್ನಮನದವ್ಯಾಕುಳವ ಮಾಣಿಸಯ್ಯಾ । ಎಂನಕರಣೇಂದ್ರಿಯಂಗಳಕಷ್ಟಗುಣವನಷ್ಟವಮಾಡೈಯ್ಯಾ । ಎಂನೊಳಗೆನಿಮ್ಮಕರುಣಾಮೃತವತುಂಬಯ್ಯಾ ಗುರುವೇಅಖಂಡೇಶ್ವರಾ ॥

ಇಲ್ಲಿಗೆ ಸಂಸಾರ ಹೇಯಸ್ಥಲ ಸಂಪೂರ್ಣಂ ಮಂಗಳಮಹಾ.

## ಶ್ರೀಗುರುಕಾರುಣ್ಯಸ್ಥಲದ ವಚನಗಳು.

ಗುರುವೆಪರತತ್ವವುತಾನೆನೋಡಾ । ಗುರುವೆಪರಶಿವವನುತಾನೆನೋಡಾ । ಗುರುಪರವಸ್ತುತಾನೆನೋಡಾ। ಗುರುವೆಪರಬ್ರಂಹವುತಾನೆನೋಡಾ। ಇಂತಪ್ಪಗುರುವಿಂಗೆನಮೋನಮೋ ಎಂಬೆನಯ್ಯಾ ಅಖಂಡೇಶ್ವರಾ ॥ ಶ್ರೀಗುರವಚನದಿಂದಲ್ಲದೆಭವಪಾಶಹರಿಯದು । ಶ್ರೀಗುರುವಚನದಿಂದಲ್ಲದೆಜಾತಿಭೇದವಮಾಣದು । ಶ್ರೀಗುರುವಚನದಿಂದಲ್ಲದೆ ಸೂತಕಪಾತಕಗಳುಕೆಡದಿಹವು । ಗುರುವಚನದಿಂದಲ್ಲದೆನಿಜಮುಕ್ತಿಆಗದು । ಇದಲ್ಲದೆ ಅಂಗಮನಪ್ರಾಣಗಳಶುದ್ಧವಾಗಲರಿಯವುಗುರುವಚನದಿಂದಲ್ಲದೆಲಿಂಗಕ್ಕೆಕಳೆವೇದಿಸಲರಿಯದು । ಗುರುವಚನದಿಂದಲ್ಲದೆಸದ್ಭಕ್ತಿಯದೊರಕಲರಿಯದು । ನೆಲೆಗೊಳದು । ಗುರುವಚನದಿಂದಲ್ಲದೆಮುಕ್ತಿಕಾಣಬಾರದು । ಗುರುಮುಟ್ಟದಕಾರಣಗುರುಮುಟ್ಟಿಗುರುವಾದಪರಮ ಶರಣನ ಶ್ರೀಚರಣಕ್ಕೆ ನಮೋನಮೋಯೆಂಬೆನಯ್ಯಅಖಂಡೇಶ್ವರಾ ॥ ತಂದೆತಾಯಿಬಂಧುಬಳಗಹೆಂಡರುಮಕ್ಕಳುತೊತ್ತುಬಂಟರುಗಳಿಗೆ ವ್ರೊಬ್ಬನೇಗುರುವ್ರವ್ರೊಂದೇ ದೀಕ್ಷೆಯಾದರೆ ಅತ್ಯುತ್ತಮನೋಡಾ । ಇದಲ್ಲದೆ ಬಹುಮುಖದ ಗುರುಬಹುಮುಖದದೀಕ್ಷೆಯಾದರೆ । ಅಘೋರನರಕತಪ್ಪದಯ್ಯಾ ಅಖಂಡೇಶ್ವರಾ ॥ ೩ ॥ ಎನ್ನಭವಪಾಶಗಳಹರಿದುಶಿವಸಂಸ್ಕಾರಿಯಮಾಡಿದಶ್ರೀಗುರುವೇ ನಮೋನಮೋಎಂ

ಬೆನಯ್ಯಾ । ಎನ್ನ ಭೂತಕಾಯುವಳಿದು ಮಂತ್ರಶರೀರವಮಾಡಿದಶ್ರೀಗುವಿ
ಗೆನಮೋನಮೋ ಎಂಭೆನಯ್ಯಾ । ಎನ್ನ ಹಣೆಯದುರ್ಲಿಖಿತವತೊಡದು ಶಿ
ವಮಂತ್ರವಸಂಭೋದಿಸಿದಶ್ರೀಗುರುವಿಗೆನಮೋನಮೋಎಂಬೈಯ್ಯಾ । ಎ
ನ್ನವಾಯುಪ್ರಾಣಿಯುಂದೆ ನಿಸದೆಲಿಂಗಪ್ರಾಣಿಯುಂದನಿಂದ ಶ್ರೀ ಗುರುವಿಗೆ
ನಮೋನಮೋ ಎಂಬೆನಯ್ಯ ಅಖಂಡೇಶ್ವರಾ ॥೪॥ ಗುರುವೆನಮೋನಮೋ।
ಎನ್ನ ಜೀವಭವಿಯುನಿಸದ । ಶಿವಶಿವಾಯುಂದೆನಿಸಿದ ಗುರುವೆನಮೋನಮೋ ।
ಕಾಲಕಲ್ಪಿತವಕಳೆದು ಯುನ್ನೊಳಗೆಮೂಲ ಮಂತ್ರವತೋರಿದಗುರುವೇನ
ಮೋನಮೋ । ಎನ್ನ ತನುತ್ರಯುಗಳಲ್ಲಮುಸುಕಿದ ಮಲತ್ರಯುಗಳ ಕಳೆ
ದುಲಿಂಗತ್ರಯುಗಳನೆಲೆಗೊಳಿಸಿದಗುರುವೇನಮೋನಮೋ । ಯನ್ನ ಭವಿಜ
ನ್ಮವನಳಿದುಭಕ್ತನಮಾಡಿ ಮುಕ್ತಿಯತೋರಿದ ಪಥವಹೆಚ್ಚಿದ ಗುರುವೆ ನ
ಮೋನಮೋ ಅಖಂಡೇಶ್ವರಾ ॥ ಎನ್ನ ಭಾವವಸಿಹ್ಮಾಸನವಮಾಡಿದೆನ್ನೈಯ್ಯ
ಶ್ರೀಗುರುಪರಮಶಿವಲಿಂಗಕ್ಕೆ ಯನ್ನ ಮನವ ಸಿಹ್ಮಾಸನವ ಮಾಡಿದನಯ್ಯ
ಶ್ರೀಗುರುಪರಮಶಿವಲಿಂಗಕ್ಕೆ । ಎನ್ನ ಕರಸ್ಥಳವಸಿಹ್ಮಾಸನವಮಾಡಿದನ
ಯ್ಯ ಶ್ರೀಗುರುಪರಮಶಿವಲಿಂಗಕ್ಕೆ । ಎನ್ನ ಸರ್ವಾಂಗವಸಿಹ್ಮಾಸನವಮಾ
ಡಿದೆನಯ್ಯಾ ಶ್ರೀಗುರುಪರಮಶಿವಲಿಂಗಕ್ಕೆ । ಪರಿಭವವತಪ್ಪಿಸಿದಶ್ರೀಗುರು
ಲಿಂಗಾನಮೋನಮೋಎಂಬೆನಯ್ಯಅಖಂಡೇಶ್ವರಾ ॥ ಸಕಲವಿಸ್ತಾರದೊಳ
ಗೆಲ್ಲಾ ಲಿಂಗಾವತೋರಿದ । ಆಲಿಂಗದೊಳಗೆಎನ್ನ ತೋರಿದ । ಯನ್ನೊಳಗೆ
ತನ್ನ ತೋರಿದಮಹಾಗುರುವಿಗೆನಮೋನಮೋಎಂಬೆನಯ್ಯಅಖಂಡೇಶ್ವರಾ॥
ಕಲ್ಪತರು ತಾಮರವಾಗಬಲ್ಲದೇನಯ್ಯಾ । ಕಾಮಧೇನು ಕಾಡಪಶುವಾಗ
ಬಲ್ಲದೇನಯ್ಯಾ । ಸಿಂಹದಮರಿ ಸೀಳನಾಯಾಗಬಲ್ಲದೇನಯ್ಯ । ಪರಮಶ್ರೀ
ಗುರುವಿನ ಕರಕಮಲದಲ್ಲಿ ಹೃದಯುವಾದ ಮಹಾಶಿವಶರಣರುಮರಳಿ ನರ
ರಾಗಬಲ್ಲರೆಹೇಳಾಅಖಂಡೇಶ್ವರಾ ॥೮॥ ಪಂಚುಮುಟ್ಟಿದ ಲೋಹದಂತೆಮಾ
ಡಿತೆನ್ನ ಶ್ರೀಗುರುವಿನುಪದೇಶ । ಕರ್ಪೂರಜ್ಯೋತಿಯಂತೆ ಮಾಡಿತೆನ್ನ ಶ್ರೀ
ಗುರುವಿನುಪದೇಶ । ಉರಿವುಂಡತೃಣದಂತೆ ಮಾಡಿತೆನ್ನ ಶ್ರೀಗುರುವಿನುಪದೇ
ಶ । ಈಡಾಕುಂಡಲಿಯಂತೆಮಾಡಿತೆನ್ನ ಶ್ರೀಗುರುವಿನುಪದೇಶ । ವರೆಗಲ್ಲುಪು
ತ್ಥಳಿಯೊಪ್ಪವನೋಡಿದಂತೆ ಅಖಂಡೇಶ್ವರನಿಮ್ಮವಚನೋಪದೇಶ ॥ ೯ ॥
ಬೀಜದಿಂದಹುಟ್ಟಿದವೃಕ್ಷಬೀಜವಹೋಲುವಂತೆ । ತಾಯಿಂದಹುಟ್ಟಿದಮ
ಕ್ಕಳು ತಾಯಹೋಲುವಂತೆ । ಧಾನ್ಯಗಳಿಂದಹುಟ್ಟಿದಬೆಳಸುಧಾನ್ಯಗಳ
ಹೋಲುವಂತೆ । ಗುರುವಿನಿಂದಹುಟ್ಟಿದ ಶಿಷ್ಯನುಗುರುರೂಪವಲ್ಲದೆ । ಬೇ
ರೊಂದುರೂಪವಲ್ಲವಯ್ಯಾ ಅಖಂಡೇಶ್ವರಾ ॥ ಸಚ್ಚಿದಾನಂದ ಸದ್ಗುರು

ತೋರಿದರೆ ಕಂಡೆನಯ್ಯಾ ಸತ್ಯಸದಾಚಾರವ । ಸಚ್ಚಿದಾನಂದ ಸದ್ಗುರು ತೋರಿದರೆ ಕಂಡೆನಯ್ಯಾ ಜ್ಞಾನಭಕ್ತಿ ವೈರಾಗ್ಯವ । ಸಚ್ಚಿದಾನಂದಸದ್ಗುರು ತೋರಿದರೆ ಕಂಡೆನಯ್ಯಾ ನಿತ್ಯಲಿಂಗಾಂಗಸಮರಸವ । ಸಚ್ಚಿದಾನಂದಸದ್ಗುರುತೋರಿದರೆಕಂಡೆನಯ್ಯಾಅಖಂಡೇಶ್ವರಾ ನಿಮ್ಮ ಶ್ರೀಚರಣಕಮಲವ ಗುರುವಿಡಿದುಕುರುಹುಕಾಣಬೇಕು । ಗುರುವಿಡಿದುಅರುಹುಕಾಣಬೇಕು । ಗುರುವಿಡಿದು ಆಚಾರವಕಾಣಬೇಕು । ಆಚಾರವಪಿಡಿದು ನಿಜವಕಾಣಬೇಕು । ನಿಜವಿಡಿದುನಿಮ್ಮ ಅಖಂಡೇಶ್ವರನಕೂಡಬೇಕು ॥ ೧೩ ॥ ಶ್ರೀಗುರುಸ್ವಾಮಿ ಮಾಡಿದಡಾಯಿತುಜಗದುತ್ಪತ್ತಿಸಚರಾಚರಗಳನ್ನೆಲ್ಲಾ । ಶ್ರೀಗುರುಸ್ವಾಮಿಮಾಡಿದಡಾಯಿತುತತ್ವಾತತ್ವಸಕಲಸ್ಥೂಲಕುಲಂಗಳೆಲ್ಲಾ । ಶ್ರೀಗುರುಸ್ವಾಮಿಕೂಡಿದಡಾಯಿತು ನಿಗಮಾಗಮಶಾಸ್ತ್ರಗಳನೆತಾ। ಶ್ರೀಗುರುಸ್ವಾಮಿಮಾಡಿದಡಾಯಿತು ಅಖಂಡೇಶ್ವರಾ ನಾನೀನೆಂಬತೊಡರುಗಳೆಲ್ಲಾ ॥ ಎನ್ನ ಕರಸ್ಥಲದಲ್ಲಿ ಲಿಂಗಮೂರ್ತಿಯಾಗಿ ನೆಲೆಗೊಂಡನಯ್ಯಾಶ್ರೀಗುರುದೇವನು । ಎನ್ನ ಮನಸ್ಥಳದಲ್ಲಿ ಸ್ವಾನುಭಾವಜ್ಞಾನಮೂರ್ತಿಯಾಗಿ ನೆಲೆಗೊಂಡನಯ್ಯಾ ಶ್ರೀಗುರುದೇವನು ಅಖಂಡೇಶ್ವರಾ ॥೧೪॥ ಎನ್ನ ಕರಸ್ಥಳದ ಮಧ್ಯದಲ್ಲಿಪರಮನಿರಂಜನಕುರುಹುದೋರಿದ । ಆಕುರುಹಿನಮಧ್ಯದಲ್ಲಿಅರುಹಿನ ಕಳೆತೋರಿದ । ಆಕಳೆಯುಮಧ್ಯದಲ್ಲಿಮಹಾಜ್ಞಾನದಬೆಳಕುತೋರಿದ । ಆಬೆಳಕಿನನಿಲುವಿನೊಳಗೆಯುನ್ನ ತೋರಿದ । ಯುನ್ನೊಳಗೆತನ್ನ ತೋರಿದ । ತನ್ನೊಳಗೆನ್ನ ಹಿಂಬಿಟ್ಟುಕೊಂಡಾಮಹಾಗುರುವಿಗೆನಮೋನಮೋ ಯನುತಿರ್ದೆನಯ್ಯಾ ಅಖಂಡೇಶ್ವರಾ ॥ ॥೧೫॥

ಲಿಂಗಧಾರಣಸ್ಥಲವು.

ಅಶ್ವವಕೊಂದವನಾದಡಾಗಲಿ। ಪಶುವಕೊಂದವನಾದಡಾಗಲಿ। ಬ್ರಾಹ್ಮಣನಕೊಂದವನಾದಡಾಗಲಿ । ಶಿಶುವಿನಕೊಂದವನಾದಡಾಗಲಿ । ಸ್ತ್ರೀಯುಕೊಂದವನಾದಡಾಗಲಿ । ಈಅನಂತಪಾತಕಮಾಡಿದವನಾದಡಾಗಲಿ।ಶಿವಲಿಂಗದದರ್ಶನಮಾದಾಕ್ಷಣದಲ್ಲಿಯೆ ಆಪಾತಕಗಳುಪಲ್ಲಟವಾಗಿಪರಮಪದವಿಯನ್ನೈದುತಿಹನಯ್ಯಾಅಖಂಡೇಶ್ವರಾ ॥೧॥ ಜ್ಞಾನದಿಂದಆದವರಾಗಲಿ।ಅಜ್ಞಾನದಿಂದಆದವರಾಗಲಿ । ಭೀತಿಯಿಂದಾದರಾಗಲಿ।ನಿರ್ಭೀತಿಯಿಂದಾದರಾಗಲಿ। ಸದ್ಭಾವದಿಂದಆದರುಆಗಲಿ । ದುರ್ಭಾವದಿಂದಆದರುಆಗಲಿ । ಆವಪರಿಯಿಂದಆದರುಆಗಲಿ । ಪರಮಶಿವಲಿಂಗದರುಶನಮಾತ್ರದಿಂದಜಾತಿಸ್ಮರತ್ವವು । ಮಹದೈಶ್ವರ್ಯವು । ಪರಮಾಯುಷ್ಯಶುದ್ಧವಿದ್ಯಗಳು । ಸುವಿಮಲಜ್ಞಾನಸಕ

ಳುಸಂಪತ್ತುಗಳುದೊರಕೊಂಬುವವುನೋಡಾಅಖಂಡೇಶ್ವರಾ ||೨|| ಆವಜಾ
ತಿಯುಲ್ಲಿಹುಟ್ಟಿದವನಾದರುಆಗಲಿಶ್ರೀಮಹಾದೇವನನೆನೆವಾತನಧಿಕನೋಡಾ
ಆತನಿಂದಧಿಕಕಂಗಳೆತುಂಬಾನೋಡುವಾತ |ಆತನಿಂದಧಿಕಕೈಮುಟ್ಟಿಪೂಜಿ
ಸುವಾತ | ಅಂತಪ್ಪಶಿವಲಿಂಗವನು | ಹರೆಹಿಂಗದಅಂಗದಮೇಲೆನಿರಂತರವು
ಧರಿಸಿಕೊಂಡಿರುವಾತನೇಯಲ್ಲರಿಗಿಂದಧಿಕನೋಡಾಅಖಂಡೇಶ್ವರಾ|| ಮುಂ
ನಶ್ರೀಗುರುಸ್ವಾಮಿಕರುಣಿಸಿಕೊಟ್ಟಅಷ್ಟಲಿಂಗದಲ್ಲಿನೆಟ್ಟನೆಅಂಗಮನಪ್ರಾ
ಣಗಳುಸಂಧಿಸಬೇಕು |ಬಳಿಕ| ನಡೆನುಡಿಯಲ್ಲಿಆಲಿಂಗಸನ್ನಹಿತನಾಗಿಯಿರ
ಬೇಕಲ್ಲದೆಹಿಂಗಿರಲಾಗದು | ಕೊಡುವಕೊಂಬುವವ್ಯವಹಾರದಲ್ಲಿಆಲಿಂಗಸಂ
ನಹಿತನಾಗಿರಬೇಕುಅಲ್ಲದೆಹಿಂಗಿರಲಾಗದು |ಅದೆಂತೆಂದಡೆ (ಶ್ಲೋ||ಪಠನ್ತಿ
ಷ್ಠನ್ಸ್ವಪನ್ಜಾಗ್ರನ್ನಿಷನ್ನಿಮಿಷನ್ತಥಾ | ಸುಚೇನಾವಾನಿಶ್ಚಿಶುರ್ಚೀವಾ
ಲ್ಲಿಂಗಂಸರ್ವತ್ರಧಾರಯೇತ್ ||೧|| ಎಂಬದಾಗಿಸರ್ವಾವಸ್ಥೆಯಲ್ಲಿಲಿಂಗಸನ್ನಿ
ಹಿತನಾಗಿರಬೇಕಲ್ಲದೆನಿಮಿಷನಿಮಿಷಾರ್ಧಲಿಂಗವನಗಲಿಸಿದರೆಕುಂಬೀಪಾತ
ಕನರಕತಪ್ಪದುನೋಡಾಅಖಂಡೇಶ್ವರಾ ||೪|| ಸಕಲೇಂದ್ರಿಯಗಳುಸಾಕ್ಷಿ
ಯಾಗಿರಬೇಕಲ್ಲದೆ।ಕಕ್ಷದಲ್ಲಿಧರಿಸುವದಯ್ಯಾಶಿವಲಿಂಗವಾ | ಕಾಂಚನಕ್ಕೆಕೈ
ಯಾನದಿದ್ದರೆ ಕರಸ್ಥಲದಲ್ಲಿಧರಿಸುವದಯ್ಯಾಶಿವಲಿಂಗವಾ| ಪರಸ್ತ್ರೀಯರಅ
ಪ್ಪುಗೆಯಿಲ್ಲದಿದ್ದರೆಆರುಸ್ಥಳಗಲ್ಲಿಧರಿಸುವದಯ್ಯಾಶಿವಲಿಂಗವಾ || ಎಂದೆಂದು
ಹುಸಿಯನಾಡದಿದ್ದರೆ ಜಿಹ್ವೆಪೀಠದಲ್ಲಿಧರಿಸುವದಯ್ಯಾಶಿವಲಿಂಗವಾ | ಅ
ನ್ನಪಾನಾದಿಗಳಿಗೆಬಾಯಿತೆರೆಯದಿದ್ದರೆ ಅಮಳ್ಳೈಕ್ಯದಲ್ಲಿಧರಿಸುವದಯ್ಯಾಶಿ
ವಲಿಂಗವಾ | ಅನ್ಯರಾಜರಿಗೆತಲೆಬಾಗದಿದ್ದರೆವೃತ್ತಮಾಂಗದಲ್ಲಿಧರಿಸುವದ
ಯ್ಯಾಶಿವಲಿಂಗವಾ |ಇಂತೀಷಡ್ವಿಧಾಚಾರಣೆನೆಲೆಗೊಂಡುಷಡ್ವಿಧಸ್ಥಾನದಲ್ಲಿ
ಶಿವಲಿಂಗವಧರಿಸಬಲ್ಲರೆಭಕ್ತನೆಂಬೆನಯ್ಯಾ| ಪ್ರಸಾದಿಯೆಂಬೆನಯ್ಯಾ|ಪ್ರಾ
ಣಲಿಂಗಿಯೆಂಬೆಶರಣನೆಂಬೆಐಕ್ಯನೆಂಬೆಇಂತೀಭೇದವನರಿಯದೆಲಿಂಗವಧರಿಸಿದ
ಡೆಬಡಲಲ್ಲಿಕಟ್ಟಿಕೊಂಡುಮಡುಬಿದ್ದಂತಾಯಿತುಕಣಾಅಖಂಡೇಶ್ವರಾ ||೫||
ಆರುಸಾಧಿಸಬಾರದಂತಾವಸ್ತು ಸಾಧಿಸಿತಂದುಕೊಟ್ಟನಯ್ಯಾ | ಶ್ರೀಗುರು
ಯನ್ನಕರಸ್ಥಲಕ್ಕೆ|ಆರುಭೇದಿಸಬಾರದಂತಾವಸ್ತುವತಂದುಕೊಟ್ಟನಯ್ಯಾ|
ಶ್ರೀಗುರುಯನ್ನಕರಸ್ಥಲಕ್ಕೆ ಆರುನೋಡಬಾರದವಸ್ತುನೋಡೆಂದು ಕೊ
ಟ್ಟನಯ್ಯಾ | ಶ್ರೀಗುರುಯನ್ನಕರಸ್ಥಳಕ್ಕೆಆರುಕೊಡಬಾರದವಸ್ತುವಕೊ
ಡುವೆನೆಂದು ತಂದುಕೊಟ್ಟನಯ್ಯಾ | ಶ್ರೀಗುರುಯನ್ನಕರಸ್ಥಳಕ್ಕೆಯನ್ನ
ಕರಸ್ಥಳದಲ್ಲಿಮೂರ್ತಿಗೊಂಡುಬೆಳಗುವಯನ್ನಪರ ಬ್ರಹ್ಮವಯನ್ನಕಂಗಳ
ತುಂಬಾನೋಡಿಕೈಮುಟ್ಟಿಪೂಜಿಸಿ | ಎನ್ನ ಜಿಹ್ವೆತುಂಬಾಕೊಂಡಾಡಿಎನ್ನ

ಘನತುಂಬಾಅಪ್ಪಿ ಅಗಲದೆಇಪ್ಪೆನಯ್ಯನಿಂಘುಅಖಂಡೇಶ್ವರಾ ||೬|| ಅಂಧಕನಿಗೆಕಂಗಳುಬಂದಂತೆ। ಹೆಳವನಿಗೆಕಾಲುಗಳುಬಂದಂತೆ। ಬಂಜೆಗೆಮಗನಾದಂತೆ। ನಿರ್ಧನಿಕನಿಗೆಧನವುಸೇರಿದಂತೆ। ಮರಣವುಳ್ಳವನಿಗೆಮರುಜವಣಿದೊರಕಿದಂತೆ। ಅಖಂಡೇಶ್ವರಾನೀವೆನ್ನ ಕರಸ್ಥಲಕ್ಕೆಬಂದಫಲವುಇಂತಾಯಿತಯ್ಯಾ ||ಅ||೭|| ಜಗವನೊಳಕೊಂಡಲಿಂಗವು ಸೊಗಸಿದ್ದೆನ್ನ ಕರಸ್ಥಲಕ್ಕೆ ಬಂದಿರಲುಕಂಡುಹರಗಣವಾಯಿತೆನಗೆ। ಆಹಾಯನ್ನ ಪುಣ್ಯವೆ। ಆಹಾಯನ್ನ ಭಾಗ್ಯವೆ। ಆಹಾಅಖಂಡೇಶ್ವರಾ। ನಿಮ್ಮ ಘನವಕಂಡು ಎನ್ನ ಮನಕ್ಕೆ ಮಂಗಳವಾಯಿತುನೋಡಾ||೮|| ಅಣುವಿಗೆಅಣುವು। ಮಹತ್ತಿಗೆಮಹತ್ತುಯೆನಿಸುವಲಿಂಗದೇವನಕಂಡೆನಯ್ಯ ಯನ್ನ ಕರಸ್ಥಲದಲ್ಲಿ। ಉಪಮಾತೀತವಾಗ್ಮನಕೆಗೋಚರನೆನಿಸುವದೇವನಕಂಡೆನಯ್ಯ ಎನ್ನ ಕರಸ್ಥಲದಲ್ಲಿ। ಶ್ರುತಿತತಿಯಶಿರದಮೇಲೆದಶಾಂಗುಲನೆಂದೆನಿಸುವದೇವನ ಕಂಡೆನಯ್ಯನಾನನ್ನ ಕರಸ್ಥಲದಲ್ಲಿ। ಭಾವಭರಿತಜ್ಞಾನಗಮ್ಯನೆನಿಸುವದೇವನ ಕಂಡೆನಯ್ಯಎನ್ನ ಕರಸ್ಥಲದಲ್ಲಿ। ಅಖಂಡೇಶ್ವರನೆಂಬಅನಾದಿಯಪರಶಿವನಕಂಡೆನಯ್ಯಎನ್ನ ಕರಸ್ಥಲದಲ್ಲಿ ||೯|| ಮನಕ್ಕೆಮನೋಹರವಾದದೇವನಕಂಡೆನಯ್ಯ ಎನ್ನ ಕರಸ್ಥಲದಲ್ಲಿ। ಕಂಗಳಿಗೆಮಂಗಳವಾದದೇವನಕಂಡೆನಯ್ಯ ಎನ್ನ ಕರಸ್ಥಲದಲ್ಲಿ। ಪ್ರಾಣಕ್ಕೆಪರಿಣಾಮವಾದದೇವನಕಂಡೆನಯ್ಯಎನ್ನ ಕರಸ್ಥಲದಲ್ಲಿ। ಅಖಂಡೇಶ್ವರನೆಂಬಲಿಂಗವಕಂಡೆನಯ್ಯಎನ್ನ ಕರಸ್ಥಲದಲ್ಲಿ ||೧೦|| ಸತ್ತುಚಿತ್ತಾನಂದನಿತ್ಯಪರಿಪೂರ್ಣನಾದವಸ್ತುವುಪ್ರತ್ಯಕ್ಷವಾಗಿಎನ್ನ ಕರಸ್ಥಲಕ್ಕೆಬಂದಬಳಿಕಇನ್ನೆಲ್ಲಿಯಜಪತಪದಚಿಂತೆ। ಇನ್ನೆಲ್ಲಿಯದಯ್ಯನನಗೆನಿತ್ಯನೇಮದಚಿಂತೆ। ಇನ್ನೆಲ್ಲಿಯದಯ್ಯಯನಗೆಮನಮರುಗದಚಿಂತೆ। ಅಖಂಡೇಶ್ವರ ಲಿಂಗವು ಎನ್ನ ವಳಹೊರಗೆತಾನಾದ ಬಳಿಕ ಇನ್ನೆಲ್ಲಿಯದಯ್ಯ ಬೇರೆತತ್ವವತಿಳಿಯಬೇಕೆಂಬಚಿಂತೆ ||೧೧|| ಶಿವಗೆನಾಮಹಾಪ್ರಸಾದ। ಎನ್ನಾಚಾರವು ನಿಮ ಶಿವಾಚಾರಮಾರ್ಗವಲ್ಲದೆ ಅನ್ಯಮಾರ್ಗದಲ್ಲಿ ಚರಿಸದಂತೆಮಾಡಯ್ಯ। ಎನ್ನ ಹಸ್ತವುನಿಮ್ಮನಲ್ಲದೆಅನ್ಯವಮುಟ್ಟದಂತೆಮಾಡಯ್ಯ। ಎನ್ನ ಕಣ್ಣು ನಿಮ್ಮನಲ್ಲದೆ ಅನ್ಯವನೋಡದಂತೆಮಾಡಯ್ಯ। ಎನ್ನ ಶ್ರೋತ್ರವುನಿಮ್ಮ ಕೀರ್ತಿಯನಲ್ಲದೆ ಅನ್ಯವಕೇಳದಂತೆಮಾಡಯ್ಯ। ಎನ್ನ ಜಿಹ್ವೆಯುನಿಮ್ಮನಲ್ಲದೆ ಅನ್ಯವಹೊಗಳದಂತೆಮಾಡಯ್ಯ। ಎನ್ನ ಮನವುನಿಮ್ಮನಲ್ಲದೆಅನ್ಯವನೆನೆಯದಂತೆಮಾಡಯ್ಯ। ಎನ್ನ ಭಾವವುನಿಮ್ಮನಲ್ಲದೆಅನ್ಯವಬಯಸದಂತೆಮಾಡಯ್ಯ। ಅಖಂಡೇಶ್ವರಾ ॥ ೧೨ ॥ ಬಾರಯ್ಯಬಾರಯ್ಯಭಕ್ತದೇಹಿಕನೆ। ಬಾರಯ್ಯಬಾರಯ್ಯಭಕ್ತವತ್ಸಲನೆ। ಬಾರಯ್ಯಬಾರಯ್ಯ ಭಕ್ತಜನಪ್ರಿಯನೆ। ಬಾರಯ್ಯ

ಬಾರಯ್ಯ ಭಕ್ತಜನಬಂಧುವೆ । ಬಾರಯ್ಯಬಾರಯ್ಯ ಭಕ್ತಜನಮನೋವಲ್ಲಭನೆ। ಬಾರಯ್ಯಬಾರಯ್ಯ। ಅಖಂಡೇಶ್ವರಾನೀವೆನ್ನ ಪರಮಮಂದಿರಕ್ಕೆ।।

## ವಿಭೂತಿಯ ಸ್ಥಲವು.

ಶಿವಶಿವಾಯೆಂದುಶಿವನಕೊಂಡಾಡುತ್ತ ಶ್ರೀವಿಭೂತಿಯಧರಿಸಿ ಶ್ರೀಮಹಾದೇವನಪೂಜಿಸುವಾತನಕಾಯವೆಕೈಲಾಸ । ಆತನನಡಿಯೆಪಾವನ । ಆತನನುಡಿಯೆಆಗಮ । ಆತನದರುಶನಸ್ಪರ್ಶನಸಕಲಪ್ರಾಣಿಗಳಿಗೆ । ಸಾಲೋಕ್ಯಪದವಿನೋಡಾ। ಆಮಹಾತ್ಮನಿಂದಾಅಧಿಕರುದಾರುಲೋಕದೊಳಗಿಲ್ಲನೋಡಾ ಅಖಂಡೇಶ್ವರಾ ॥೧॥ ಆವಕಾರ್ಯಕಾದರು ಶ್ರೀವಿಭೂತಿಯೆಬೇಕು । ಯಾವಕ್ರಿಯಕ್ಕೆಆದರು ಶ್ರೀವಿಭೂತಿಯೆಬೇಕು। ಶ್ರೀವಿಭೂತಿಯಧರಿಸದೆ ಆವನೊಬ್ಬನುವೇದವನೋದಿದರೇನು ಆತಓದಿದಂತಾವೇದಗಳು ವ್ಯರ್ಥವುಕಾಣಿರೊ । ಆವನೊಬ್ಬನು ಶ್ರೀವಿಭೂತಿಯಧರಿಸದೆ ದಾನಗಳಮಾಡಿದರೇನು ಆತಮಾಡಿದದಾನವ್ಯರ್ಥಕಾಣಿರೊ । ಆವನೊಬ್ಬನುಶ್ರೀವಿಭೂತಿಯಧರಿಸದೆ ತಪವಂಮಾಡಿದರೇನು ಆತಮಾಡಿದಂತಾತಪಸ್ಸು ವ್ಯರ್ಥವುಕಾಣಿರೊ । ಆವನೊಬ್ಬನು ಶ್ರೀವಿಭೂತಿಯಧರಿಸದೆ ನಿತ್ಯನೇಮವ್ರತ ಉಪವಾಸಗಳಮಾಡಿದರೇನು ಆತಮಾಡಿದನಿತ್ಯನೇಮವ್ರತಉಪವಾಸಗಳುವ್ಯರ್ಥವಾಗಿಕಾಣಿರೊ । ಅದೆಂತೆಂದರೆ, ಬೌದ್ಧಾಯನಸೂತ್ರ ॥ ಶ್ಲೋ ॥ ವೃಥಾವೇದವೃಥಾಯಜ್ಞಂವೃಥಾದಾನಂವೃಥಾತಪಃ । ವೃಥಾವ್ರತೋಪವಾಸಸ್ತ್ರಿಪುಂಡ್ರಂನಧಾಯೆತ್ ॥೧॥ ಎಂದುದಾಗಿಸಕಲಕ್ಕು ಶ್ರೀವಿಭೂತಿಯೆಆಧಾರವಯ್ಯ ಅಖಂಡೇಶ್ವರಾ ॥೨॥ ಆದಿಯಲ್ಲಿಶ್ರೀವಿಭೂತಿಯಿಂದಸ್ನಾನವಮಾಡಿದಬ್ರಾಹ್ಮಣಗೆಬ್ರಹ್ಮಪದವಾಯಿತು । ಆದಿಯಲ್ಲಿಶ್ರೀವಿಭೂತಿಯಸ್ನಾನವಮಾಡಿದ ವಿಷ್ಣುವಿಗೆ ವಿಷ್ಣುಪದವಾಯಿತು । ಆದಿಯಲ್ಲಿ ಶ್ರೀವಿಭೂತಿಯಸ್ನಾನವಮಾಡಿದಗಂಧರ್ವರಿಗೆ ಗಂಧರ್ವಪದವಾಯಿತು । ಆದಿಯಲ್ಲಿಶ್ರೀವಿಭೂತಿಯಸ್ನಾನವಮಾಡಿದ ದೇವರ್ಕಳುಗಳಿಗೆ ದೇವಪದವಾಯಿತು । ಆದಿಯಲ್ಲಿ ಶ್ರೀವಿಭೂತಿಯಸ್ನಾನವಮಾಡಿದ ಋಷಿಗಳಿಗೆಋಷಿಪದವಾಯಿತು। ಆದಿಯಲ್ಲಿಶ್ರೀವಿಭೂತಿಯ ಸ್ನಾನವಮಾಡಿದಯಕ್ಷರಿಗೆ ಯಕ್ಷಪದವಾಯಿತು। ಆದಿಯಲ್ಲಿಶ್ರೀವಿಭೂತಿ ಸ್ನಾನಮಾಡಿದಕಿನ್ನರರಿಗೆ ಕಿನ್ನರಪದವಾಯಿತು। ಆದಿಯಲ್ಲಿಶ್ರೀವಿಭೂತಿಸ್ನಾನಮಾಡಿದ ಮರುದ್ಗಣಗಳಿಗೆ ಮರುದ್ಗಣಪದ ವಾಯಿತು । ಆದಿಯಲ್ಲಿಶ್ರೀವಿಭೂತಿಯಸ್ನಾನವಮಾಡಿದ ಪಿತೃಗಳಿಗೆ ಪಿತೃಗಣಪದವಾಯಿತು । ಆದಿಯಲ್ಲಿ ಶ್ರೀವಿಭೂತಿಯಸ್ನಾನವಮಾಡಿದ ಭೂತಗಣರಿ

ಗೆ ಭೂತರ್ಗಣಪದವಾಯಿತು ॥ ಅದೆಂತೆಂದರೆ, ಶ್ಲೋ ॥ ಬ್ರಹ್ಮಶ್ಚಾದೇವರ್ಷಯೋಗಂಧರ್ವಾನ್ ಯಕ್ಷಕಿನ್ನರಮರುದ್ಗಣಾಃ । ಪಿತೃಗಣೋಸರ್ವರ್ಭೂತಗಣಾದಪಿ। ನಿತ್ಯಂಚಸರ್ವಯತ್ನಾನಿ ಭಸ್ಮಸ್ನಾನಪ್ರವರ್ತತೆ ॥೧॥ ಎಂದುದಾಗಿ ಇಂತಪ್ಪಶ್ರೀವಿಭೂತಿಯಮಹತ್ವವಕಂಡುಕೇಳಿ ॥೨॥ ನಂಬಲರಿಯದೆಗರ್ವದಿಂದವುಂಗೆಟ್ಟಮರುಳುಮಾನವರಿಗೆ ಭವರಾಟಾಳದಲ್ಲಿ ಸತ್ತು ಸತ್ತು ಹುಟ್ಟಿಬಪ್ಪುದುತಪ್ಪದುನೋಡಾ ಅಖಂಡೇಶ್ವರ ॥೩॥ ಮಹದೈಶ್ವರ್ಯದವದವುಕ್ಕೆಗೂಡುವದೇ ಶ್ರೀವಿಭೂತಿಇಂದಲ್ಲದಿಲ್ಲನೋಡ । ಪರಮಪವಿತ್ರನೆನಿಸಬೇಕಾದರೆಶ್ರೀವಿಭೂತಿಯಿಂದಲ್ಲದಿಲ್ಲನೋಡಾ।ಸರ್ವವಶ್ಯವಸಿದ್ಧಿ ದೊರಕೊಂಬುವದೆ ಶ್ರೀವಿಭೂತಿಇಂದಲ್ಲದಿಲ್ಲನೋಡಾ । ಮಹಪುಣ್ಯಪ್ರಾಪ್ತಿಸುವದೆಶ್ರೀವಿಭೂತಿಯಿಂದಲ್ಲದಿಲ್ಲನೋಡಾ । ದಿನದಿನಕ್ಕೆ ಪಾಪಪಲ್ಲಟವಪ್ಪಂತೆ ಶ್ರೀವಿಭೂತಿಯಿಂದಲ್ಲದಿಲ್ಲನೋಡಾ। ಅಂಗಕ್ಕೆಶ್ರೀವಿಭೂತಿಯಿಂದಲ್ಲದಿಲ್ಲಶ್ರೀಗುರುನೋಡಾ॥ ಅದೆಂತೆಂದೊಡೆ, ಶ್ಲೋ ॥ ಶ್ರೀಕರಂಚಪವಿತ್ರಂಚರೋಗಶೋಕನಿವಾರಣಾ । ಜ್ಞಾನವಶ್ಯಕರಂಮೋಕ್ಷಂ ಭಸ್ಮಂತ್ರೈಲೋಕಪಾವನಂ ॥೧॥ ಎಂದುದಾಗಿ ಇಂತಪ್ಪ ಶ್ರೀವಿಭೂತಿಯ ಅಂತರಂಗದಲ್ಲಿ ವಿಶ್ವಾಸವತುಂಬಿ ಧರಿಸಿದಮನುಜರಿಗೆ ಅನಂತಕೋಟಿ ಪಾತಕಗಳು ಪರಿಹಾರವಾಗಿ ಮುಂದೆ ಸಾಯುಜ್ಯಪದವು ದೊರಕೊಂಬುವದುನೋಡಾ ಅಖಂಡೇಶ್ವರಾ ॥ ಸಂಚಲಗುಣವಳಿದು ಶ್ರೀವಿಭೂತಿಯಪಂಚಸ್ಥಾನದಲ್ಲಿ ಪರಬ್ರಹ್ಮಮಂತ್ರದಿಂದೆಧರಿಸಲು ಪಂಚಮಹಾಪಾತಕಗಳು ಪಲ್ಲಟವಪ್ಪವುನೋಡಾ ಅದುಕಾರಣ ಸರ್ವಾಂಗದಲ್ಲಿ ಧೂಳನವಮಾಡಲು । ಸರ್ವವ್ಯಾಧಿಪರಿಹರವಪ್ಪವುನೋಡಾ। ಇದುಕಾರಣ ಇಂತಪ್ಪಮಹಾವಿಭೂತಿಯಲಲಾಟದಲ್ಲಿ ಬತ್ತೀಸಸ್ಥಾನಗಳಲ್ಲಿ ಧರಿಸಿನಿತ್ಯಲಿಂಗಾರ್ಚನೆಯಮಾಡುವಂತಾತಾ । ಸತ್ಯಶಿವನಲ್ಲದೆ ಬೇರಿಲ್ಲವಯ್ಯಾಅಖಂಡೇಶ್ವರಾ ॥೪॥ ಸಚ್ಚಿದಾನಂದಪರಶಿವನಸದ್ಯೋಜಾತ ಮುಖದಲ್ಲಿಪೃಥ್ವಿಪುಟ್ಟಿತು। ಆತತ್ವದಿಂದೆನಿವೃತ್ತಿಯಂಬಾಕಲೆಪುಟ್ಟಿತು। ಆಕಲೆಯಿಂದೆಕಪಿಲವರ್ನದನಂದಿಯಂಬಗೋವುಪುಟ್ಟಿತು । ಆಗೋವಿನಗೋಮಯದಿಂದಮಹದೈಶ್ವರ್ಯವನ್ನುಂಟುಮಾಡುವಂಥಾ ವಿಭೂತಿಪುಟ್ಟಿತು। ಮತ್ತಂ। ಸಚ್ಚಿದಾನಂದಪರಶಿವನವಾಮದೇವಮುಖದಿಂದೆಅಪ್ಪುತತ್ವಪುಟ್ಟಿತು। ಆತತ್ವದಿಂದೆಪ್ರತಿಷ್ಠಾಯಂಬಕಲೆಪುಟ್ಟಿತು । ಆಕಲೆಯಿಂದೆಕೃಷ್ಣವರ್ನದ ಭದ್ರೆಯಂಬಗೋವುಪುಟ್ಟಿತು । ಆಗೋವಿನಗೋಮಯದಿಂದ ದಿವ್ಯಪ್ರಕಾಶಬೆಳಗುವಂತಾಭಸಿತವೆಂಬವಿಭೂತಿಪುಟ್ಟಿತು। ಮತ್ತಂ। ಸಚ್ಚಿದಾನಂದಪರಶಿವನ ಅಘೋರಮುಖದಿಂದಅಗ್ನಿತತ್ವಪುಟ್ಟಿತು । ಆತತ್ವದಿಂದೆವಿದ್ಯಾಯಂಬಕಲೆಪು

ಟ್ಟಿತು| ಆಕಲೆಯಿಂದರಕ್ತವರ್ಣದಸುರಭಿಎಂಬಗೋವುಪುಟ್ಟಿತು | ಆಗೋವಿನಗೋಮಯದಿಂದಸಮಸ್ತಪಾತಕಗಳಶಿಕ್ಷಿಸುವಂಥಾಭಸ್ಮವೆಂಬವಿಭೂತಿಪುಟ್ಟಿತು| ಮತ್ತಂ| ಸಚ್ಚಿದಾನಂದ ಪರಶಿವನತತ್ಪುರುಷಮುಖದಿಂದವಾಯುತತ್ವಪುಟ್ಟಿತು | ಆತತ್ವದಿಂದಶಾಂತಿಯೆಂಬಕಲೆಪುಟ್ಟಿತು | ಆಕಲೆಯಿಂದಶ್ವೇತವರ್ಣದಸುಶೀಲೆಯೆಂಬಧ್ಯಾನಗೋವುಪುಟ್ಟಿತು | ಆಗೋವಿನಗೋಮಯದಿಂದಸಕಲವ್ಯಾಧಿಗಳಕೆಡಿಸುವಂತಾಕ್ಷಾರವೆಂಬ ವಿಭೂತಿಪುಟ್ಟಿತು | ಮತ್ತಂಸಚ್ಚಿದಾನಂದಪರಶಿವನಈಶಾನ್ಯಮುಖದಿಂದ ಆಕಾಶತತ್ವಪುಟ್ಟಿತು| ಆತತ್ವದಿಂದಶಾಂತಾತೀತವೆಂಬಕಲೆಪುಟ್ಟಿತು | ಆಕಲೆಯಿಂದಚಿತ್ರದಸುಮನೆಯೆಂಬಗೋವುಪುಟ್ಟಿತು| ಆಗೋವಿನಗೋಮಯದಿಂದ ಭೂತಪ್ರೇತ ಪಿಶಾಚಬ್ರಹ್ಮರಾಕ್ಷಸಚೋರವಿಷವರ್ಗವ್ಯಾಘ್ರಾದಿಗಳ ಭಯವಕೆಡಿಸಿ ರಕ್ಷಿಸುವಂತಾರಕ್ಷವೆಂಬ ವಿಭೂತಿಪುಟ್ಟಿತು | ಇಂತಪ್ಪಶ್ರೀವಿಭೂತಿಯುನಿರಂತರಸಾವಧಾನಭಕ್ತಿಯಿಂದನಾನು ಸರ್ವಾಂಗದಲ್ಲಿಧರಿಸಿ ಶುದ್ಧನಿರ್ಮಲಪವಿತ್ರಕಾಯನಾದೆನಯ್ಯ ಅಖಂಡೇಶ್ವರಾ ||೩||

## ರುದ್ರಾಕ್ಷಿಯ ಸ್ಥಲವು.

ಗುರುಕಾರುಣ್ಯವಪಡದು ಅಂಗದಮೇಲೆಲಿಂಗಧಾರಣವಾಗಿಶ್ರೀವಿಭೂತಿಯಧರಿಸಿದಮಹಾತ್ಮನುಮುಂದೆ ಶಿವಜ್ಞಾನಚಕ್ಷುವಿನಿಂದೆ ವುದ್ಭವಿಸಿದರುದ್ರಾಕ್ಷಿಯಧರಿಸುವಭೇದವೆಂತೆಂದರೆ, ಶಿಖಾಸ್ಥಾನದಲ್ಲಿ ಯೇಕಮುಖಮುಳ್ಳನುಳ್ಳಂತಾ ವೊಂದುರುದ್ರಾಕ್ಷಿಯು (ಓಂಸದಾಶಿವಾಯನಮಃ) ಎಂಬ ಮಂತ್ರದಿಂದಧಾರಣವಮಾಡುವದು|ಮಸ್ತಕಗಳಲ್ಲಿ ಯೆರಡುಮುಖಮೂರುಮುಖಹನ್ನೆರಡುಮುಖಗಳುಳ್ಳಂತಾ ಮೂರುರುದ್ರಾಕ್ಷಿಗಳ ಜಂ ವಹ್ನಿಸೋಮಸೂರ್ಯಾದಿರೂಪಾಯನಮಃ|ಶಿವಾ| ಯೆಂಬ ಮಂತ್ರದಿಂದಧಾರಣವಮಾಡುವದು| ಶಿರವಂಬಳಸಿಹನ್ನೊಂದುಮುಖಂಗಳನುಳ್ಳಂತಾ ಮುವ್ವತ್ತಾರು ರುದ್ರಾಕ್ಷಿಗಳ (ಓಂಷಟ್‌ತ್ರಿಂಶತತ್ವಾತ್ಮ ಕಾಯಪರಶಿವಾಯನಮಃ) ಎಂಬ ಮಂತ್ರದಿಂದಧಾರಣವಮಾಡುವದು| ಕರ್ಣಯುಗಳದಲ್ಲಿ ಐದುಮುಖದ ಏಳುಮುಖದಹತ್ತುಮುಖದರುದ್ರಾಕ್ಷಿಗಳನೊಂದೊಂದ (ಓಂ ಸೋಮಾಯ್ಯೆ ನಮಃ) ಎಂಬಮಂತ್ರದಿಂದಧಾರಣವಮಾಡುವದು | ಕಂಠಸ್ಥಾನದಲ್ಲಿ ಯೆಂಟುಮುಖ ಆರುಮುಖವನುಳ್ಳಂತಾ ಮುವ್ವತ್ತೆರಡು ರುದ್ರಾಕ್ಷಗಳ (ಓಂ ತ್ರೈಲೋಕ್ಯತ್ರ್ಯಂಬಕ ಕಾಲಾಂತಕಶಿವಾಯನಮಃ) ಎಂಬ ಮಂತ್ರದಿಂದ ಧಾರಣವಮಾಡುವದು | ಉರಸ್ಥಾನದಲ್ಲಿ ಚತುರ್ಮುಖವನುಳ್ಳಂತಾ ಐವ

ತ್ತಾರುರುದ್ರಾಕ್ಷಿಗಳ (ಓಂಶ್ರೀಕಂಠಾದಿಮೂರ್ತ್ಯಾತ್ಮಕಾಯಸರ್ವಜ್ಞಾಯ ನಮಃ)ಎಂಬಮಂತ್ರದಿಂದಧಾರಣವಮಾಡುವದಯ್ಯಾ। ಬಾಹುದ್ವಯದಲ್ಲಿಹದಿಮೂರುಮುಖಗಳುಳ್ಳಂತಾ ಷೋಡಶರುದ್ರಾಕ್ಷಿಗಳ (ಓಂ ಸುಖಾಸನಾದಿ ಷೋಡಶಮೂರ್ತ್ಯಾತ್ಮಕಾಯ ಶ್ರೀಕಂಠಾಯನಮಃ) ಎಂಬ ಮಂತ್ರದಿಂದ ಬಲದೋಳಿನಲ್ಲಿ ಧಾರಣವಮಾಡುವದು। (ಓಂಶ್ರೀಸೋಮಕಳಾತ್ಮಕಾಯ ಶ್ರೀಸೋಮನಾಥಾಯ) ಎಂಬಮಂತ್ರದಿಂದಯಡತೋಳಿನಲ್ಲಿಧಾರಣವಮಾಡುವದಯ್ಯಾ। ಮುಂಗೈಯರಡರಲ್ಲಿ ಒಂಭತ್ತುಮುಖವನುಳ್ಳಂತಾ ಹನ್ನೆರಡುರುದ್ರಾಕ್ಷಿಗಳ। (ಓಂ ದ್ವಾದಶಆದಿತ್ಯಾದಿರೂಪಾಯ ಶ್ರೀಮಹಾದೇವಾಯನಮಃ। ಎಂಬಮಂತ್ರದಿಂದೆಬಲದಮುಂಗಯ್ಯಲ್ಲಿಧಾರಣವಮಾಡುವದು ವಕ್ಷಸ್ಥಳದಲ್ಲಿಯಜ್ಞೋಪವೀತವಾಗಿ ಹದಿನಾಲ್ಕುಮುಖವನುಳ್ಳಂಥಾ ನೂರಾಯಂಟುರುದ್ರಾಕ್ಷಿಗಳ (ಓಂಶತರುದ್ರವಿದ್ಯಾಸ್ವರಾತ್ಮಕಾಯ ಶ್ರೀವಿಶ್ವೇಶ್ವರಾಯನಮಃ) ಎಂಬಮಂತ್ರದಿಂದೆಧಾರಣವಮಾಡುವದು। ಇಂತೀಸ್ಥಾನಂಗಳಮುಖಮಂತ್ರಗಳಭೇದಅರಿದು ಶ್ರೀರುದ್ರಾಕ್ಷಿಯಧರಿಸಿದಶರಣ ತಾನೆಸಾಕ್ಷಾತ್ತುಶಿವನಲ್ಲದೆಬೇರಿಲ್ಲವಯ್ಯಾಅಖಂಡೇಶ್ವರಾ ॥೧॥ ಅನಂತಕೋಟಿಯಜ್ಞಗಳಮಾಡಿತೊಳಲಿಬಳಲುವದ್ಯಾತಕ್ಕೆ। ಅದಾನದಫಲವು। ರುದ್ರಾಕ್ಷಿಯಧರಿಸಿದಾಕ್ಷಣದಲ್ಲಿಯೆದೊರಕೊಂಬುವದುನೋಡಾ। ಅನಂತಕಾಲವೇದಾಭ್ಯಾಸವಮಾಡಿತೊಳಲಿಬಳಲ್ಯಾತಕೆ। ಅವೇದಾಭ್ಯಾಸದಫಲವುರುದ್ರಾಕ್ಷಿಯಧರಿಸಿದಾಕ್ಷಣದಲ್ಲಿಯೆಕೊರಕೊಂಬುವದುನೋಡಾ। ಅದೆಂತೆಂದಡೆ,—

ಶ್ಲೋ। ಸರ್ವಜ್ಞತಪೋದಾನಂವೇದಾಭ್ಯಾಸಾಂತುಯತ್ಫಲಂ। ತತ್ಫಲಂ ಲಭತೆಸದ್ಯಃರುದ್ರಾಕ್ಷಸ್ಯಚಧಾರಣಾತ್॥೧॥ ಇಂತಪ್ಪರುದ್ರಾಕ್ಷಿಯಧರಿಸಿದ ಮಹಾತ್ಮನು। ವಿಶ್ವಾಧಿಕನುನೋಡಾಅತವಿಶ್ವಾತೀತತಾನೆನೋಡಾಅಖಂಡೇಶ್ವರಾ ॥ ಆವನಾನೊಬ್ಬನುಪುಪಪಾತಗಳಂನುಮಾಡಿಶ್ರೀರುದ್ರಾಕ್ಷಿಯನಾವೋಚ್ಚಾರಣೆಯಮಾಡಿದರೆಆಪಾತಕಗಳುಪರಿಹಾರವಾಗಿಹತ್ತುಸಾವಿರ ಗೋದಾನಗಳಫಲಕ್ಕೆಸಾರುವದುನೋಡ। ರುದ್ರಾಕ್ಷಿಸ್ವರೂಪವನ್ನುಕೆಂಗಳತುಂಬನೋಡಿದಾತಗೆ ಶತಕೋಟಿ ಪುಣ್ಯದಫಲವು ಕೈಸಾರುತಿರ್ಪುದು ನೋಡಾ। ಆರುದ್ರಾಕ್ಷಿಯತತ್ಸ್ಥಾನದಲ್ಲಿಭಕ್ತಿಇಂಧರಿಸಿದರೆಲಕ್ಷಕೋಟಿ ಪುಣ್ಯದಫಲವುಕ್ಕೈಸಾರುವದುನೋಡಾ। ಆರುದ್ರಾಕ್ಷಿಯಮುಟ್ಟಿಪೂಜಿಸಿದರೆ ಸಹಸ್ರಕೋಟಿಪುಣ್ಯಫಲವುಕ್ಕೈಸಾರುತಿಪ್ಪದುನೋಡಾ। ಇಂತಪ್ಪರುದ್ರಾಕ್ಷಿಯಧರಿಸಿದಪುಣ್ಯಫಲಕ್ಕೆ ಇಂನಾವಫಲವುಸರಿಇಲ್ಲವೆಂದು ಸಕಲಾಗಮಗಳುಸಾರುತಿಪ್ಪವುನೋಡಾ ಅಖಂಡೇಶ್ವರ ॥೨॥ ಶಿವಮಂತ್ರವೇಯನಗೆಕಾ

ಮಧೇನುವಯ್ಯಾ।ಶಿವಮಂತ್ರವೆಯೆನಗೆಕಲ್ಪವೃಕ್ಷವಯ್ಯಾ। ಶಿವಮಂತ್ರವೆಯೆ
ನಗೆಚಿಂತಾಮಣಿಯಯ್ಯಾ।ಶಿವಮಂತ್ರವೆಯೆನಗೆಪರುಷದಕಣಿಯಯ್ಯಾ । ಶಿವ
ಮಂತವೇಯೆನಗೆಘನಪ್ರಾಣನಮಾಲಿಕೆಯಯ್ಯಾ । ಅಖಂಡೇಶ್ವರಾ ॥೪॥ ಸ
ಕಲವೇದಪುರಾಣಾಗಮಶಾಸ್ತ್ರಗಳೆಲ್ಲಾ ಶಿವಮಂತ್ರದಲ್ಲಿಯೆಜನಿಸಿದವಯ್ಯಾ।
ಸಕಲತತ್ವಶಕ್ತಿಮೂರ್ತಿಗಳೆಲ್ಲಾ ಶಿವಮಂತ್ರದಲ್ಲಿಯೆಜನಿಸಿದವಯ್ಯಾ। ಸಕಲ
ಬ್ರಹ್ಮಾಂಡಭುವನ ಸಚರಾಚರತತ್ವಶಕ್ತಿಮೂರ್ತಿಗಳೆಲ್ಲಾ ಶಿವಮಂತ್ರದಲ್ಲಿ
ಯೆಜನಿಸಿದವಯ್ಯಾ । ವಟಬೀಜನ್ಯಾಯದಂತೆ ಸಕಲವಿಸ್ತಾರವನೊಳಕೊಂ
ಡುಇರ್ಪಪರಶಿವಮಂತ್ರವನೆನನೆನದುಯೆಂನಮನದಮುಂದಣಮರವೆಯುಹರಿ
ದುಭವಸಾಗರವದಾಂಟಸಯ್ಯಾ।ಅಖಂಡೇಶ್ವರಾ ॥ ಅಶಿವಷಡಾಕ್ಷರಿಯಮಂ
ತ್ರದಿಂದೆಸಾನಂದಋಷಿಯುನರಕಜೀವಗಳ ನೆಲ್ಲಾ ಹರನವಾಲಗದಲ್ಲಿರಿಸಿದ
ನುನೋಡಾ ಈಷಡಾಕ್ಷರಿಯಮಂತ್ರದಿಂದಅಜಗಂಣತಂದೆಗಳುನಿಜಲಿಂಗೈ
ಕ್ಯವಾದರುನೋಡ ।ಇಂತಪ್ಪಜೀವಷಡಾಕ್ಷರಿಯಮಂತ್ರವಯನ್ನ ಅಂತರಂ
ಗದರುಹದಮನೆಯಬಚ್ಚಿಟ್ಟುಕೊಂಡುಓಂನಮಃಶಿವಾಯಯೆಂದುಶಿವಮಂ
ತ್ರವಜಪಿಸಿನಾನುಭವದಬಳ್ಳಿಯಬೇರುಕಿತ್ತಿನಿದೆನಯ್ಯಾ ಅಖಂಡೇಶ್ವರಾ ॥೬॥
ಓಂನಮಃಶಿವಾಯಯೆಂಬುವದೆನಗೆಧರ್ಮನೋಡಾ।ಓಂನಮಃಶಿವಾಯಯಂ
ಬುವದೆನಗೆಕಾಮನೋಡಾ ॥ ಓನಮಃಶಿವಾಯಯಂಬುವದೆನಗೆ ಮೋಕ್ಷ
ನೋಡಾ । ಓಂನಮಃಶಿವಾಯಯಂಬುವದೆನಗೆಸರ್ವಕಾರಣನೋಡಾ ಅ
ಖಂಡೇಶ್ವರಾ ॥೭॥ ಓಂಕಾರವೆಂಬಮರಕ್ಕೆಷಟ್ಕ್ರತಿಯೆಂಬಶಾಖೆಪಸರಿಸಿಷ
ಡಾಕ್ಷರವೆಂಬತಳಿರುಕೊನರಿಹದುಸ್ಥಳಗಳೆಂಬಕುಸುಮಗಳಾದವು। ಷಡು
ಸ್ಥಳಗಳೆಂಬ ಮೋಕ್ಷಮಧುರಫಲಗಳ ತಳಿತಿರ್ಪುದು ನೋಡಾಡಾಯಿದು
ಸಾನುಶೃತಿ ಗುರುಸ್ವಾನುಭಾವಗಳಿಂದರಿದು ಆಓಂಕಾರವೆಂಬವೃಕ್ಷವನೇರಿ
ಓಂನಮಃಶಿವಾಯಯೆಂದುಷಡುಲಿಂಗಂಗಳೆಂಬ ಮಧುರಫಲಸವಿದುನಿತ್ಯತೃ
ಪ್ತನಾದೆನಯ್ಯಾ ಅಖಂಡೇಶ್ವರಾ।ಎಂನಷಡ್ಧಾತುಗಳೆಲ್ಲಾ ಷಡಾಕ್ಷರಮಂತ್ರ
ಸ್ವರೂಪವಾಗಿತೋರುತಿರ್ಪುದಯ್ಯಾ ಯೆಂನಷಟ್ಕರ್ಮಗಳೆಲ್ಲಾ ಷಡಕ್ಷರ
ಮಂತ್ರಸ್ವರೂಪವಾಗಿತೋರುತಿರ್ಪ್ಪದಯ್ಯಾ । ಎಂನಷಡೇಂದ್ರಿಯಗಳೆಲ್ಲಾ
ಷಡಕ್ಷರಮಂತ್ರಸ್ವರೂಪವಾಗಿತೋರುತಿರ್ಪುದಯ್ಯಾ।ಇದುಕಾರಣನಿಮ್ಮ
ನಾಮಾಮೃತವನುಂಡುನಿತ್ಯಮುಕ್ತನಾದೆನೈಯ್ಯಾ ಅಖಂಡೇಶ್ವರಾ ॥೮॥ಎಂ
ನಸ್ಥೂಲತನುವೆಂಬಮನೆಯಲ್ಲಿ ಲಿಂಗವೆಂಬಜ್ಯೋತಿಯ ತುಂಬಿದೆನಯ್ಯಾ ।
ಯೆಂನಸೂಕ್ಷ್ಮವೆಂಬಮನದಲ್ಲಿಜ್ಞಾನವೆಂಬ ಜ್ಯೋತಿಯತುಂಬಿದನಯ್ಯಾ ।
ಯೆಂನವಳಹೊರಗೆತುಂಬಿ ತೊಳಗಿಬೆಳಗುವ ಜ್ಯೋತಿಯ ಬೆಳಗಿನಲ್ಲಿಸುಳಿ

ವೃತಿರ್ದನಯ್ಯಾ ಅಖಂಡೇಶ್ವರಾ ||೧೦||

## ಭಕ್ತಿಸ್ಥಲವು.

ಇಂದುನಾಳೆಂದುಹೇಳುವಮಂದಬುದ್ಧಿಗೆಸಂದುಕೊಡದಿರಂಣಾ| ಅನಿಂದಕಾ
ಲವನರಿದುಶ್ರೀಮಹಾದೇವನಪೂಜಿಸಿರಂಣಾ|ನೀರುಗುಳ್ಳೆಯಂತೆತೋರಿಯು
ಡಗುವಆಸತ್ಯಶರೀರದಭೋಗನಿಶ್ಚಯವೆಂದುನಿಶ್ಚೈಸಿಹೊತ್ತುಗಳೆದುವ್ಯರ್ಥ
ವಾಗಿಸತ್ತುಹೋಗುವಿರಂಣಾ | ಕರ್ತುಗುರುಲಿಂಗಜಂಗಮಕ್ಕೆಅರ್ಥಪ್ರಾಣಾ
ಭಿಮಾನಂಗಳಸಮರ್ಪಿಸಿನಿತ್ಯಪದವಂಸಾಧಿಸಿರಂಣಾ |ನಮ್ಮಅಖಂಡೇಶ್ವರ
ನಲ್ಲಿಸಿರಿಬಂದೊದಗಿತೆಂದುಹಿರಿದಾಗಿಹಿಗ್ಗಬೇಡಿರಂಣಾ |ಸಿರಿಯುಂಬುದುಕನ
ಸಿನಪರಿಯಂತೆನೋಡಾ|ಯಲೆಮರಳುಮಾನವರಿರಾಇದನರಿತುನಂಬಿಶ್ರೀಮ
ಹಾದೇವನಪೂಜಿಸಿದರೆಸ್ಥಿರವಾದಪದವನೀವಾನಮ್ಮ ಅಖಂಡೇಶ್ವರಾ || ೨ ||
ಮಡದಿಮಕ್ಕಳುಪಡದದ್ರವ್ಯವುಯನ್ನೊಡವೆಂದುನೆಚ್ಚಿಯಿರಲುಬ್ಯಾಡಿರೊ|
ಎಲೆಹುಚ್ಚಮಾನವರಿರಾಅವುನಿಂಮೊಡವೆಯಾದರೆನೀವುಮಡಿದುಹೋದಾಗ
ನಿಮ್ಮೊಡನೆಬಪ್ಪವೆಹೇಳಿರೊ | ಇದನರಿತುತಡಿಯದೆಮೃಡಸೇವೆಯತೊಡಗಿ
ದಡೆಕಡೆಮೊದಲಿಲ್ಲದಫಲವುದೊರೆಕೊಂಬುವದುನೋಡಾ ಅಖಂಡೇಶ್ವರಾ ||
ಅಂಗದಲ್ಲಿಮಹೇಂದ್ರಜಾಲದಂದಂತೆಕಂಳ್ಳಮುಂದೆವಡ್ಡಿದ ಹುಸಿಯಸಂಸಾರ
ದಲ್ಲಿಹಡ್ಡಾಗಬೇಡಿರೊಯಲೆದಡ್ಡಪ್ರಾಣಿಗಳಿರಾ |ಅಡ್ಡದಾಶೆಗೆದುಡ್ಡಿನಲಾಭ
ವಕಳವರ | ಗುರುಲಿಂಗಜಂಗಮದಸೇವೆಯತೂರದು ಸಂಸಾರದಲ್ಲಿಬೆರದತೆ
ಮುಂದೆನರಕದಲ್ಲಿಕ್ಕುವನುನಮ್ಮಅಖಂಡೇಶ್ವರಾ||೪|| ಸುರಜಾಪದಂತೆತೋ
ರದಗುವತನುವನೆಚ್ಚಬೇಡಿರೊ| ಸಚ್ಚಿದಾನಂದಲಿಂಗಜಂಗಮದಪೂಜೆಯಲ್ಲಿ
ನಿಚ್ಚನಿಚ್ಚಮಾಡಿದರೆಮೆಚ್ಚಿಮಹಾಪದವನೀವನಮ್ಮಅಖಂಡೇಶ್ವರ|| ಮನ
ದಭಕ್ತಿಗೆಕರ್ಮವಿಧಿಕಾಡುತಿರ್ಪುದುನೋಡಾ| ಈಮನವಳಿದುಒಂಮನವಾಗಿ
ನಿಮ್ಮನರಿತಡೆಕರ್ಮದಬೀತಿಬಿಟ್ಟೀತುನೋಡಾಅಖಂಡೇಶ್ವರಾ ||೫|| ಅಂಜ
ನಸಿದ್ಧಿಗಳಸಾಧಿಸುವಂಣಗಳಕಂಣುಮನಕ್ಕೆಮಂಜುಗವಿಸಿ ಹೊರಗಾದನು
ನೋಡಾಪರಶಿವನು | ಘುಟಿಕಾಸಿದ್ಧಿಗಳ ಸಾಧಿಸುವಂಣಗಳ ಕಂಗಳಮನಕ್ಕೆ
ಸಟೆಯನೆತೋರಿಹೊರಗಾದನುನೋಡಾಪರಶಿವನು|ಮಂತ್ರತಂತ್ರಗಳಸಿದ್ಧಿ
ವಾದವಶ್ಯವಸಾಧಿಸುವಂಣಗಳಕಂಣುಮನಕ್ಕೆ ಗಾಡಿಕತ್ತಲುಗವಿಸಿ ಹೊರ
ಗಾಗಿಹೋದನುನೋಡಾಪರಶಿವನು | ಭಕ್ತಿಸಿದ್ಧಿಯ ಸಾಧಿಸುವಂಣುಗಳ
ಮಂಣುಮನಕ್ಕೆ |ಮುಕ್ತಿಬೆಳಗನೆತೋರಿವಳಗಿರ್ಪನೋಡಾನಮ್ಮ||೬||ವಿ
ದ್ಯವಬಹಳಕಲಿತರೇನು|ಭಕ್ತಿಯಲ್ಲಿಶುದ್ಧವಿಲ್ಲಧವನು|ಬುದ್ಧಿಯಲ್ಲಿವಿಶೇಷನೆ
ನಿಸಿದಡೇನು |ಭಕ್ತಿಯಲ್ಲಿಬಡವನಾದವನು ಬಿಂತಪ್ಪಮುದ್ದುಗುಣಿಕೆಯಕಾ
ಟಿತಿಂದದರ್ಥದದಅಧಿಕನೆನಿಸಿದರೇನು | ಕರ್ತುಶಿವನನೆನಿಯದವನು ಮ

ದುಃನ್ಮಿತ್ರನಯಿಂನತ್ತಲುತೋರದಿರಯ್ಯಾ ಅಖಂಡೇಶ್ವರಾ ॥ ಘಾಳಿಬೀಸು
ವವ್ಯಾಳ್ಯೆಯಲ್ಲಿತೂರಿಕೊಳ್ಳಿರೊಬೇಗ । ಘಾಳಿನಿಮ್ಮಯಿಚ್ಛೆಯಲ್ಲಜಾಳು
ಮನುಜರಿರಾ । ಇದನರಿತುಲಿಂಗವಪೂಜಿಸಿರೊಬೇಗಬೇಗಆಗಲಿಂಗಜಂಗ
ಮವಪೂಜಿಸಿರೊಅರುವುಳ್ಳಕಾಲಕ್ಕೆಬೇಗಬೇಗನೆ ನಮ್ಮಅಖಂಡೇಶ್ವರಲಿಂಗ
ವಕೂಡಿರೊ ॥೯॥ ಮುನ್ನಪಡೆಯದೆಯಿಂನುಬೇಡಿದಡೆಬಪ್ಪದೆಯೆಂದುನುಡಿ
ಯುತಿರ್ಪರೆಲ್ಲಾ ಮುಂನಗುರುಲಿಂಗಜಂಗಮವ ಮರದಕಾರಣಇಂನುಕೆಟ್ಟರ
ಲ್ಲಾನಮ್ಮಅಖಂಡೇಶ್ವರಲಿಂಗವನರಿಯದೆ ॥೧೦॥ ಹಿಂದೆಗುರುಭಕ್ತಿಲಿಂಗಪೂ
ಜಿಸಿ । ಜಂಗಮದಸೋಹನರಿಯದಕಾರಣಮುಂದೆಹುಟ್ಟುವನು । ಕುರುಡ
ಕುಂಟನಾಗಿಕುಬ್ಜನಾಗಿನಪುಂಸಕನಾಗಿದರಿದ್ರನಾಗಿಕುಲಹೀನನಾಗಿತೆಶಿಗೇ
ಡಿಯಾಗಿ ॥ ಬಹುಹೇಶಿಯಾಗಿಮಹಾದುಃಖಮಂಬಡುತಿರ್ಪನುನೋಡಾ ಅ
ಖಂಡೇಶ್ವರಾನಿಮ್ಮನರಿಯದಜನರು ॥ ಹಿಂದಣಜನ್ಮದಲ್ಲಿಗುರುಲಿಂಗಜಂಗಮ
ಶಿವನೆಂದರಿದುನಂಬಿಪೂಜಿಸಿದಕಾರಣ। ಮುಂದಹುಟ್ಟುವನುಸತ್ಕುಲದಲ್ಲಿ। ಬ
ಲವಂತನಾಗಿಧನಧಾನ್ಯಸಕಲಭಾಗ್ಯಭೋಗಐಶ್ವರ್ಯವನುಳ್ಳವನಾಗಿ। ಸ್ವರ್ಗ
ಲೋಕವುಳ್ಳವನಾಗಿ । ನಮ್ಮಅಖಂಡೇಶ್ವರನಪೂರ್ವಫಲವುಳ್ಳವನಾಗಿರ್ಪನು
ನೋಡಾ ॥೧೧॥ ನುಡಿಯಲ್ಲಿಕರ್ಕಶವಿಲ್ಲದೆನಡಿಯಲ್ಲಿಭೇಸರಹೋಗದೆಹಿಡಿದ
ಭಕ್ತಿಯಕಡಿತನಕಬಿಡದೆ। ಬಡತನಯಡರುಕಂಟಕಗಳುಬಂದಲ್ಲಿಚಿಂತೆಯಿಂ
ದಕಾಂತಿಗುಂದದೆಅಡಿಗಡಿಗೆ ಶಿವಶಿವಯೆಂಬನುಡಿಯಮರೆಯದಿರ್ಪಸದ್ಭಕ್ತಂ
ಗೆಬೇಡಿದಪದವನೀವನಮ್ಮಅಖಂಡೇಶ್ವರಾ ॥೧೨॥ ಯನ್ನತನುಯನ್ನಧನಯ
ನ್ನಮನಯನ್ನ ಸತಿಸುತರೆಂಬುವನಕ್ಕರಭಕ್ತಿಬಿನ್ನವಾಯಿತುನೋಡಾ। ತ
ನ್ನಮರದು ವಡವೆಯಾತಕ್ಕೆ ವಡವಿಯನೊಪ್ಪಿಸಿದರೆ ಕೂಡಿಕೊಂಡಿರ್ಪನು
ನೋಡಾನಮ್ಮ ಅಖಂಡೇಶ್ವರಾ ॥೧೩॥ ಇದಿರಿನಲ್ಲಿಜಂಗಮವುಬರುವದುಕಂ
ಡುಸದರನಿಳಿದುನಡೆದುಹೋಗಿ ಚರಣಕ್ಕೆರಗುವದೆ ಉತ್ತಮ ಭಕ್ತಿಯನಿಸಿ
ತುನೋಡಾ । ಇದ್ದಸ್ಥಾನದಲ್ಲೆದ್ದುನಿಲ್ಲುವದೇ ಮಧ್ಯಮ ಭಕ್ತಿಯನಿಸಿತು
ನೋಡಾ । ಕುಳಿತಸ್ಥಾನದಲ್ಲಿಕರಮುಗಿವದೆಕನಿಷ್ಟಭಕ್ತಿಯನಿಸಿತುನೋ
ಡಾ । ಈಮೂರುತರದಭಕ್ತಿಯಿಲ್ಲದೆ ಗರ್ವದಿಂದಚಿರತುಕೊಂಡುಕುಳಿತರೆ
ಮುಂದೆಹಿರಿಯಶೂಲದಮೇಲೆಕುಳ್ಳಿರಿಸುವನುನೋಡಾಅಖಂಡೇಶ್ವರಾ॥ ಸ
ರ್ವಲೋಕೋಪಕಾರವಾ ಗಿಸದಾಶಿವನಜಂಗಮವಾಗಬಂದನೆಂದರಿಯದವ
ನಮುಖವನೋಡಲಾಗದು । ಸರ್ವಲೋಕವಪಾವನಮಾಡಲೋಸ್ಕರಶಿವನೆ
ಜಂಗಮವಾಗಿಬಂದನೆಂದುನಂಬದವನಂಗಳವಮೆಟ್ಟಲಾಗದು ।ಅದೆಂತೆಂದಡೆ

ಶ್ಲೋ ॥ ಸರ್ವಲೋಕೋಪಕಾರಾಯತದ್ದೇವಪರಮೇಶ್ವರ । ಚರಾತಿ

ಷ್ಯಂತಿರೂಪೇಣನಮಸ್ತೆಜಂಗಮಾತ್ಮನೆ ||೧|| ಎಂಬದಾಗಿ ಇಂತಪ್ಪ ಜಂಗಮದ ಘನವನರಿಯದ ಭಂಗಗೇಡಿಗಳ ಭಕ್ತರೆಂದರೆಭವಹಿಂಗಲರಿಯುದಯ್ಯಾ ಅಖಂಡೇಶ್ವರಾ||೧೬|| ಮನಿಗೆಬಂದಜಂಗಮವಕಂಡುಮನದಲ್ಲಿ ವುದಾಸೀನವತಾಳಿ | ಮೋರೆಯಅಷ್ಟನಿಕ್ಕಿದರೆ ಜಾರಿತುನೋಡಾ ಹಿಂದೆಮಾಡಿದಭಕ್ತಿ ಪಜ್ಜೆಯಲ್ಲಿಕುಳಿತುಜಂಗಮಕ್ಕೆಬಂದುನೀಡಿತಾನೊಂದುಂಡರೆ | ಹುಳಗೊಂಡದಲ್ಲಿಕ್ಕುವನುನೋಡಾ ಅಖಂಡೇಶ್ವರಾ||೧೬|| ಸದ್ಭಕ್ತನಸಹಜಸ್ವಭಾವದನಡೆಹ್ಯಾಗಿರಬೇಕೆಂದರೆ| ಮನೆಗೆಬಂದಜಂಗಮರಕಂಡುಮನದಲ್ಲಿಸಂತೋಷವತಾಳಬೇಕು | ಮದುವೆಯಮಾಂಗಲ್ಯವೆಸಗೆ | ಉತ್ಸಾಹದಂತೆಹರುಷಾಬ್ಧಿತುಂಬಿತುಳುಕಿಹೊರಸೂಸಬೇಕು | ಇಂದುನಮ್ಮಮನೆಗೆ ಮಹಾಪುಣ್ಯಾದಫಲವುಬಂದುತುಂಬಿತೆಂದುಕುಣಿಕುಣಿದುನೋಡಿ | ಹಾಡಿಹರಸಬೇಕು ಸತಿಸುತರುಸಹವಾಗಿವಡಗೂಡಿಭಕ್ತಿಯಮಾಡಿನಮ್ಮ ಅಖಂಡೇಶ್ವರಲಿಂಗ| ವನೊಲಿಸಬೇಕು ||೧೮|| ಕೋಳಿಕೂಗುವದುಬೆಳಗಿನವ್ಯಾಳ್ಯವರಿತು | ಕತ್ತೆಕೂಗುವದುಹೊತ್ತಿನಗೊತ್ತನರಿತು | ಶಿವಭಕ್ತನಾದಬಳಿಕತನ್ನ ಅರುಹುಕುರಿಹಿನಭಕ್ತಿಮುಕ್ತಿಯ ಗೊತ್ತನರಿಯದಬಳಿಕಾ ಆಕೋಳಿಕತ್ತೆಗಿಂತಾ ಕರಕಷ್ಟನೋಡಾ ಅಖಂಡೇಶ್ವರಾ||೧೮|| ಲಿಂಗಜಂಗಮಕ್ಕೆಮಾಡಿದಭಕ್ತಿಮನಕ್ಕೆಮನಸ್ಸಾಕ್ಷಿಯಾಗಿರಬೇಕಲ್ಲದೆಯಿದಿರಿಟ್ಟುಮುಡಿಯಲಾಗದು| ಅದೇನುಕಾರಣವೆಂದರೆ| ಬಡವನಿಗೆಭಾಗ್ಯದೊರಕೊಂಡಂತಿರಬೇಕಲ್ಲದೆ|ಏನ್ನಪದಾರ್ಥವನಾನುಮಾಡಿದನು| ಅವರುಕ್ಕೈಕೊಂಡರೆಂದುತನ್ನಖ್ಯಾತಿಭಕ್ತಿಯನುಮನಹಿಗ್ಗಿ ಅನ್ಯರೊಡನೆ ಹೇಳಿಕೊಡರೆ | ಶಿವನೊಪ್ಪಗೊಳ್ಳನು | ಪುರಾತನರುಮೆಚ್ಚರು| ಅಂತಪ್ಪಖ್ಯಾತಭಕ್ತಿಯಂತಾಯಿತೆಂದರೆ| ಹಾವಸಿಗಲ್ಲಮೆಟ್ಟಿಜಾರಿಬಿದ್ದುಕೊಡನೊಡಪಂತಾಯಿಕಾಣಾ ಅಖಂಡೇಶ್ವರಾ||೨೦|| ಧರ್ಮಾರ್ಥವಾಗಿಶಾಸ್ತ್ರವನೋಡಬೇಕಲ್ಲದೆ | ದೀಕ್ಷೆಯಮಾಡಬೇಕಲ್ಲದೆ ಅನರ್ಥವಾಗಿದೀಕ್ಷೆಯಮಾಡಲಾಗದು| ಜ್ಞಾನಾರ್ಥವಾಗಿಶಾಸ್ತ್ರವನೋದಬೇಕಲ್ಲದೆ | ವಾದಾರ್ಥವಾಗಿಶಾಸ್ತ್ರವನೋದಲಾಗದಯ್ಯಾ | ಮೋಕ್ಷಾರ್ಥವಾಗಿ ಶಿವಪೂಜೆಯಮಾಡಬೇಕಲ್ಲದೆ| ಡಂಬಾರ್ಥವಾಗಿಶಿವಪೂಜೆಯಮಾಡಲಾಗದಯ್ಯಾ| ಅದೆಂತೆಂದೊಡೆ, ಶ್ಲೋ|| ಆಶಾರ್ಥೇದಿಯ್ಯತೇದೀಕ್ಷಾ | ದಂಭಾರ್ಥಂಪೂಜ್ಯತೇಶಿವಃ || ವಾಧಾರ್ಥಂಪಠತೇವಿದ್ಯಾ|ಮೋಕ್ಷಂನಾಸ್ತಿವರಾನನೆ ||೧|| ಮತ್ತಂ|| ಶ್ಲೋ|| ಧರ್ಮಾರ್ಥಂದೀಯತೇದೀಕ್ಷಾ| ಮೋಕ್ಷಾರ್ಥಂಪೂಜಿತೇಶಿವಃ|| ಜ್ಞಾನಾರ್ಥಂಪಠತೇವಿದ್ಯಾ| ಮೋಕ್ಷಸಿದ್ಧಿವರಾನನೆ||೧|| ಎಂಬದಾಗಿ ಇಂತಪ್ಪ ಖ್ಯಾತಿಕೀರ್ತಿಯಕಡೆಗೆನೂಂಕಿನೀತಿನಿಜವನಂಗೀಕರಿಸಿ ಶಿವನೊಲಿಸುವಭಾ

ಪವನರಿಯದೆ ಸಂತೆಯಪಸಾರದಂತೆ ಸರ್ವರುಮೆಚ್ಚಲೆಂದು ಪಸರಿಸಿ ಹರಹಿಕೊಂಡುಮಾಡುವಡಂಬಕತನದ ಶಿವಪೂಜೆ ಶಂಭುವಿಗೆಮುಟ್ಟಲರಿಯದು ನೋಡಾ ಅಖಂಡೇಶ್ವರಾ||೧|| ಲಿಂಗಾರ್ಚನೆಯಮಾಡಿದಬಳಿಕ| ಜಂಗಮಾರ್ಚನೆಯಮಾಡಬೇಕು | ಜಂಗಮಪಾದೋದಕಪ್ರಸಾದಪಕೊಳ್ಳಬೇಕು|ನಿಚ್ಚ ನಿಚ್ಚ ಲಿಂಗಾರ್ಚನೆಯಮಾಡಿ| ನಿಚ್ಚ ನಿಚ್ಚ ಜಂಗಮಾರ್ಚನೆಯಮಾಡಿ | ಜಂಗಮದಪಾದೋದಕಪ್ರಸಾದವಿಲ್ಲದಬಳಿಕಾ | ಲಿಂಗಾರ್ಚನೆಯಂತಾಯಿತೆಂದೊಡೆ| ಮೂಗಕೊಯಿದಮೂಕಾರ್ತಿಯಂತಾಯಿತುನೋಡಾಅಖಂಡೇಶ್ವರ| ಒಳಗೆಲಿಂಗಕೂಟದಲ್ಲಿಮನವಡಗಿರಬೇಕು | ಹೊರಗೆಜಂಗಮದಮಾಟದಲ್ಲಿತನುವಿಡಿದಿರಬೇಕು | ಈವುಭಯವನ್ನುವಂದರೊಳಗೆ ವಂದುವೇದಿಸಿಕೆಬಂಡುತಾನಳಿದುಯಿರುವ ಭಕ್ತನಕೂಡೆಕೊಂಡಿಪ್ಪನುನೋಡಾನಮ್ಮ ಅಖಂಡೇಶ್ವರಾ || ಆದಿಯಲ್ಲಿನೀನೆದೇವನುನಾನೆಭಕ್ತನು ಆದಿಯಿಂದತ್ತತ್ತಲು ನೀನೆದೇವನಯ್ಯಾನಾನೆಭಕ್ತನಾಗಿನಿಮ್ಮೊಳಗೆ ಅಡಗಿದ್ದನಯ್ಯಾ ಅಖಂಡೇಶ್ವರ || ನಿಮ್ಮತೊತ್ತಿನತೊತ್ತುಪಡಿದೊತ್ತುಯೆಂದುನನ್ನ ಕಯ್ಯಾಹಿಡಿದು ತಲೆದಡಹಿನೆರೆದು ಅಭಯದಹಸ್ತವಕೊಟ್ಟು| ಮರ್ತ್ಯಲೋಕಕ್ಕೆನ್ನಕಳುಹಿದಿರಾಗಿನೀನೆಕರ್ತನಾನೆಭಕ್ತನುನೀನೆವಡೆಯನುನಾನೆಭಂಟನು ನೀನೆಅಳ್ಪನುನಾನೆಅಳಸಿಕೊಳ್ಳುವನು ನೀನೆದೇವನುನಾನೆಭಕ್ತನು ಆಗಿನೀವುಮಾಡೆಂದುಮಣಿಹವಮಾಡುತಿರ್ದೆನಯ್ಯಾ ನೀವುಹೇಳಿದತೊತ್ತು ಶೇವೆಯಮಾಡುತಿರ್ದೆನಯ್ಯಾ ಅಖಂಡೇಶ್ವರಾ||೨೫|| ಲಿಂಗಪ್ರವೇಶಪ್ರೇಮವುಳ್ಳವಂಗೆಭವಬಂಧನವಿಲ್ಲ| ಜಂಗಮದಪ್ರೇಮವುಳ್ಳವಂಗೆಸಂಸಾರದತೊಡಕಿಲ್ಲ | ಪ್ರಸಾದದಪ್ರೇಮವುಳ್ಳವಂಗೆ ಇಹಪರದಯಡೆಯಾಟವಿಲ್ಲ | ತಾನಿಲ್ಲದಮಾಡುವಭಕ್ತಂಗೆ ಆವಾವಫಲಪದದಹಂಗಿಲ್ಲವಯ್ಯಾ ಅಖಂಡೇಶ್ವರಾ||೨೬|| ಲಿಂಗಪ್ರೇಮಿಗಳುಅನಂತವುಂಟು | ಜಂಗಮದೊಳಗೆ ಜಂಗಮಪ್ರೇಮಿಗಳ ಕಾಣೆನಯ್ಯಾ| ಲಿಂಗಪೂಜಕರುಅನಂತವುಂಟು | ಜಂಗಮದೊಳಗೆ ಜಂಗಮಪೂಜಕರಕಾಣೆನಯ್ಯಾ| ಲಿಂಗಪ್ರಾಣಿಗಳುಅನಂತವುಂಟು | ಜಂಗಮದೊಳಗೆಜಂಗಮಪ್ರಾಣಿಗಳಕಾಣೆನಯ್ಯಾ | ಲಿಂಗದಬಾಯಿಜಂಗಮವೆಂದರಿದು ಮಾಡಿದ ಮನವಳಿದುಘನಲಿಂಗವಾದಸಂಗನಬಸವಣ್ಣನಶ್ರೀಪಾದಕ್ಕೆ ನಮೋನಮೋವೆಂಬೆನಯ್ಯಅಖಂಡೇಶ್ವರಾ||೨೭|| ಲಿಂಗಾರ್ಚನೆಗಿಂದಾಜಂಗಮಾರ್ಚನೆಯಧಿಕನೋಡಾ ಅದೆಂತೆಂದರೆ, ಆದಿಯಲ್ಲಿಲಿಂಗಾರ್ಚನೆಯಮಾಡಿದಂತಾರಾಜರಿಗೆಪ್ರಳಯವಾಯಿತು| ಆದಿಯಲ್ಲಿಲಿಂಗಾರ್ಚನೆಯಮಾಡಿದಂತಾ ನವಕೋಟಿನಾರಾಯಣರಿಗೆ| ಪ್ರಳಯವಾಯಿತು ಆದಿಯಲ್ಲಿಲಿಂಗಾರ್ಚನೆಯ ಮಾಡಿ

ದಅನಂತಕೋಟಿರುದ್ರರಿಗೆಪ್ರಳಯವಾಯಿತು । ಇದುಕಾರಣಲಿಂಗಾರ್ಚನೆಯುಪ್ರಳಯಕ್ಕೊಳಗು । ಜಂಗಮಾರ್ಚನೆಯುಅಪ್ರಳಯವೆಂದರಿದು ಜಂಗಮುಪ್ರಾಣವೆಂದುನಂಬಿ ಅನಂತಕೋಟಿ ಪ್ರಳಯಗಳನೀಗಿ ಪರಬ್ರಹ್ಮವನೊಡಗೂಡಿದ ಸಂಗನಬಸವಣ್ಣನ ಶ್ರೀಪಾದಕ್ಕೆ ನಮೋನಮೋಯೆಂಬೆನಯ್ಯಾ ಅಖಂಡೇಶ್ವರಾ ॥ ೨೮ ॥ ಸಂಗನಬಸವಣ್ಣನಂತೆ ಸದ್ಭಕ್ತನೆಂದೆನಿಸಯ್ಯಯನ್ನ । ಮಡಿವಾಳಮಾಚಯ್ಯಗಳಂತೆವೀರಮಹೇಶ್ವರನೆಂದೆನಿಸಯ್ಯಯನ್ನ । ಸಿದ್ಧರಾಮಯ್ಯಗಳಂತೆಶುದ್ಧಪ್ರಾಣಲಿಂಗಿಯೆಂದೆನಿಸಯ್ಯಯನ್ನ ಮರುಳಿಂಗಪೆದ್ದಯ್ಯಗಳಂತೆ ಮರುತರಶರಣನೆಂದೆನಿಸಯ್ಯಯನ್ನ । ಅಜಗಂಣತಂದೆಗಳಂತೆನಿಜಲಿಂಗೈಕ್ಯನೆಂದೆನಿಸಯ್ಯಯನ್ನ । ನಿಜಗುರುಯೋಗಿಗಳಂತೆಪರಮಾರೂಢನೆನಿಸಯ್ಯಯನ್ನ । ಅಕ್ಕಮಹಾದೇವಿಯಂತೆನಿಷ್ಕಾಮಿಯೆಂದೆನಿಸಯ್ಯಯನ್ನ । ಪ್ರಭುದೇವನಂತೆ ಪರಿಪೂರ್ಣನೆಂದೆನಿಸಯ್ಯಯನ್ನ । ಇಂತಿವರಕಾರುಣ್ಯದನಿಲವನೆಕರುಣಿಸಿ ನಿಮ್ಮಗಣಂಗಳಸಮ್ಮೇಳದಲ್ಲಿರಿಸಿಸಲಹುದಯ್ಯಯನ್ನ ಅಖಂಡೇಶ್ವರಾ ॥ ೨೯ ॥ ಸ್ವರ್ಗಕ್ಕೆಯೇಳುಸೋಪಾನವಿರ್ಪವುನೋಡಾ । ಆರುಅರಿಯಲ್ಲಿಲ್ಲ । ಜಂಗಮವಕಾಣುತ್ತಸದ್ಭಕ್ತನುಕುಳಿತಿದ್ದಅಸನವಬಿಟ್ಟುಯಿದರೆದ್ದುನಡವನುವೊಂದನೇಸೋಪಾನ । ಮನಕರಗಿತನುಮುಕ್ಕಿಕಂಗಳಲ್ಲಿಪರಿಣಾಮದಜಲವುಕ್ಕಿಅವಚರಣಕಮಲದಮೇಲೆಸುರಿವಂತಿಸಾಷ್ಟಾಂಗದಿಂದೆನಮಸ್ಕರಿಸುವದೆಯರಡನೆಸೋಪಾನ । ಆಜಂಗಮವತನ್ನಮಠಕ್ಕೆಬಿಜಯಂಗೈಸಿವುಂನತಾಸನದಗದ್ದುಗಿಯಮೇಲೆಕುಳ್ಳಿರಿಸಿಪಾದಪ್ರಕ್ಷಾಲನವಮಾಡುವದೆಮೂರನೆಯಸೋಪಾನ । ಆಜಂಗಮದೇವರನು ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದರ್ಚಿಸಿ ಪಾದತೀರ್ಥಕೊಂಬುವದೇನಾಲ್ಕನೇಸೋಪಾನ । ಮೃಷ್ಟಾಂನಪಾನಗಳಿಂದೆತೃಪ್ತಿಬಡಿಸುವದೇಐದನೇಸೋಪಾನ । ಆಜಂಗಮುಥವಕ್ಕಮಿಕ್ಕಪ್ರಸಾದಕೊಂಬುವದೇಆರನೇಸೋಪಾನ । ಜಂಗಮದಲ್ಲಿಅನುಭವವಚಿಸಕೊಂಬುವದೆ । ಏಳನೇಸೋಪಾನ । ಇಂತಿಸಪ್ತಸೋಪಾನಂಗಳಬಲ್ಲಸದ್ಭಕ್ತಂಗೆಕೈಲಾಸಕರತಲಾಮಲಕವಲ್ಲದೆ । ತನುವಸವಿಸದೆ ಮನವದಂಡಿಸದೆ । ಧನವಸಮರ್ಪಿಸದೆ । ಮಿಥ್ಯಾಸಂಸಾರದಲ್ಲಿಸಿಲ್ಕಿಹೊತ್ತುಗಳಿದುಹೊಡದಾಡಿಸತ್ತುಹೋಗುವವ್ಯರ್ಥಜೀವಿಗಿಂನೆತ್ತಣಕೈಲಾಸವಯ್ಯಅಖಂಡೇಶ್ವರಾ ॥ ಭಕ್ತಿಸ್ಥಲಕುಲವನರಿಯದೆ । ಬರಿದೆಭಕ್ತನೆಂದೆನಿಸಿಕೊಂಬುವಮುಕ್ತಿಗೇಡಿಗಳನೇನೆಂಬೆನಯ್ಯಾ । ಅನಾದಿಪರಶಿವನುತನ್ನಲೀಲೆಯಿಂದತಾನೆಗುರುಲಿಂಗಜಂಗಮವಾಗಿಬಂದನೆಂದರಿತು । ತನುಮನಧನವಸವಸಿಸಮುಕ್ತಿಯ ಪಡೆಯಲರಿ

ಖುದೆ । ಆಣವಮಲಮಾಯಾಮಲಕಾರ್ಮಿಕಮಲವೆಂಬಮಲತ್ರಯಂಗಳನೆ ಭುಂಜಿಸಿಸಂಸಾರವಿಷಯರಸವೆಂಬನೀರುಕುಡಿದು । ಮಾಯಾಮೋಹವೆಂಬಮದವ್ರುತಲೆಗೇರಿಸೊಕ್ಕಿದೆಕ್ಕಲನಂತೆತಿರುಗುವ ನರಕಜೀವಿಗಳಮುಖವ ನೋಡಲಾಗದಯ್ಯ ಅಖಂಡೇಶ್ವರಾ ॥ ಗುರುವಿನಲ್ಲಿಗುಣವನರಸಿದರೆ।ಒಂದನೆಪಾತಕ । ಲಿಂಗದಲ್ಲಿಶಿವನರಸಿದರೆಯರಡನೆಪಾತಕ।ಗುರುವಿನಲ್ಲಿಭಕ್ತಿಯಿಲ್ಲ।ಲಿಂಗದಲ್ಲಿನಿಷ್ಟೆಯಿಲ್ಲ।ಜಂಗಮದಲ್ಲಿವಿಶ್ವಾಸವಿಲ್ಲ । ಪಾದೋದಕಪ್ರಸಾದದಲ್ಲಿಪ್ರೇಮವಿಲ್ಲ । ಬರಿದೆಭಕ್ತರೆಂಬಭವಭಾರಿಗಳಮುಖವ ನೋಡಲಾಗದಯ್ಯಾ ಅಖಂಡೇಶ್ವರಾ ॥೩೨॥ ಜಂಗಮದಲ್ಲಿಕುಲವನರಸಿದರೆಮೂರನೇಪಾತಕ । ಪ್ರಸಾದದಲ್ಲಿರುಚಿಯನರಸಿದರೆ । ನಾಲ್ಕನೇಪಾತಕ । ಪಾದೋದಕದಲ್ಲಿಸೂತಕವನರಸಿದರೆಐದನೆಪಾತಕ । ಇಂತೀಪಂಚಮಹಾಪಾತಕರಯನ ಗೊಂಮೆತೋರದಿರಯ್ಯಾಅಖಂಡೇಶ್ವರಾ ॥೩೩॥ ಶಿವಭಕ್ತನೆನಿಸುವಾತಂಗೆ ಆವುದುಚಿನ್ಹವೆಂದಡೆ । ಸದಾಚಾರದಲ್ಲಿನಡವದು ।ಶಿವನಲ್ಲಿಭಕ್ತಿಯಾಗಿರುವದು । ಲಿಂಗಜಂಗಮವ್ರೊಂದೆಯೆಂದುಕಾಂಬುದು । ವಿಭೂತಿಯುಲ್ಲಿಲಿಂಗಧಾರಣವುಂತಾದಶಿವಲಾಂಛನವುಳ್ಳಂಥಾಶಿವಶರಣರಲ್ಲಿಅತಿಭಕ್ತಿಯಾಗಿಪ್ಪಾತನೇಸದ್ಭಕ್ತನುನೋಡಾ ಶ್ಲೋ॥ ಸದಾಚಾರಶಿವಾಭಕ್ತಿ।ಲಿಂಗಜಂಗಮಮೆಕಧಿ॥ಲಾಛನಂಶರಣಾಭಕ್ತಿ । ಭಕ್ತಿಸ್ಥಲಮನುತ್ತಮಂ ॥೧॥ ಎಂಬದಾಗಿಇಂತಪ್ಪಸಹಜಶಿವಭಕ್ತರತೋರಿಸಿಬದುಕಿಸಯ್ಯಾ ಅಖಂಡೇಶ್ವರಾ ॥ ೩೪ ॥ ಗುರುಲಿಂಗಕ್ಕೆತನುವಸಮರ್ಪಿಸದಲ್ಲದೆ । ತನುವಿನಆಶಯಹರಿಯದು । ಲಿಂಗಕ್ಕೆಮನವನರ್ಪಿಸದಲ್ಲದೆ । ಈಮನದವಾಸನೆಹರಿಯದು । ಜಂಗಮಕ್ಕೆಧನವನರ್ಪಿಸದಲ್ಲದೆದುರ್ಭಾವಹರಿಯದು । ಇದುಕಾರಣ ತ್ರಿವಿಧಕ್ಕೆತ್ರಿವಿಧವಸಮರ್ಪಿಸಿತ್ರಿವಿಧವಾಸನೆಹರಿದು । ತ್ರಿವಿಧವಿಧದಫಲವನೊಡಗೂಡಲು । ಬಲ್ಲದೆಸದ್ಭಕ್ತಿನೆಂಬೆನಯ್ಯಾಅಖಂಡೇಶ್ವರಾ ॥ನೀನೊಲಿದಡೆಕಲ್ಲೆಲ್ಲಕನಕವಯ್ಯಾ। ನೀನೊಲಿದಡೆಹುಲ್ಲೆಲ್ಲಾರಾಜಾನ್ನವಯ್ಯಾ । ನೀನೊಲಿದಡೆಏನುಂಟುಏನಿಲ್ಲವಯ್ಯಾ। ನೀನೊಲಿದಡೆಕೊರಡೆಲ್ಲಾಕಲ್ಪವೃಕ್ಷವಯ್ಯಾ। ನೀನೊಲಿದಡೆಬರಡೆಲ್ಲಕಾಮಧೇನುವಯ್ಯಾ ।ನೀನೊಲಿದಡೆ ಅಖಂಡೇಶ್ವರಾ ॥೩೫॥ ನೀನೊಲಿದಡೆಜಗವೆಲ್ಲಾಕೊಂಡಾಡುತಿಪ್ಪದುನೋಡಾ । ನೀನೊಲಿದಡೆಜಗವೆಲ್ಲಾಹೊತ್ತುಗಲ್ಲುಹೊತ್ತು ಕೊಂಡಿರ್ಪುದಯ್ಯಾ । ನೀನೊಲಿದಡೆ ವೈರಿಗಳುಸಖರಪ್ಪರುನೋಡಾ । ನೀನೊಯುಲಿದಿದ್ದರೆ ಸಖರು ವೈರಿಗಳಾಗಿಹರು ನೋಡಾ । ನೀನೊಲಿದಡೆಬಾರದಪದಾರ್ಥಬರ್ಪುದುನೋಡಾ।ನೀನೊಲಿಯದಿರ್ದಡೆಬರ್ಪುದುಬಾರದೆಹೋಗುವದುನೋಡಾಇದುಅಖಂಡೇಶ್ವರಾನಿಮ್ಮ

ವಲುವೆಯಿಂದಘನವನೋಡಾ ||೨೭|| ನಿತ್ಯನೆನಿಸಯ್ಯಯನ್ನ| ಭಕ್ತನೆಂದೆ ನಿಸಯ್ಯಯನ್ನ | ಮುಕ್ತನೆಂದೆನಿಸಯ್ಯಯನ್ನ | ನಿಮ್ಮ ಪೂರ್ಣವಲುವೆ ಯುಲೆಂಕನೆಂದೆನಿಸಯ್ಯಾ ಯನ್ನ ಅಖಂಡೇಶ್ವರಾ ||೨೮|| ಯನ್ನ ಕಂಣುಗ ಳವುಂದಣಕಾಮುವಕಳೆದುನಿಮ್ಮಗಣಂಗಳ| ಸರ್ವರೂಪವತೋರಿಸಯ್ಯಾ ದೇವಾಯನ್ನಪ್ರಾಣದಮುಂದಣಪ್ರಪಂಚವಕೆಡಿಸಿನಿಮ್ಮಪರಮಪ್ರಸಾದವ ನೆಲೆಗೊಳಿಸಯ್ಯಾದೇವಾ | ಯುನ್ನ ತನುವಮುಸುಕಿದತಾಮಸವಕಳೆದು ನಿ ಮ್ಮಭಕ್ತಿಯುಅನುವತೋರಿಸಿಬದುಕಿಸಯ್ಯಾದೇವಾಅಖಂಡೇಶ್ವರಾ ||೨೯|| ಗುರುಲಿಂಗಜಂಗಮದಲ್ಲಿಭಯಭಕ್ತಿಕಿಂಕರವಾಣನಯನುಡಿನಮಸ್ಕಾರವಾ ಕ್ಷಮೆದಮೆಸ್ಥೈರಣಿಸಮಾಧಾನಶಾಂತಿದಯುಗುಣವಿಶ್ವಾಸನಂಬುಗೆ| ನೈಷ್ಟಿಸ ಮರಸವನುಳ್ಳಸದ್ಭಕ್ತರತೋರಿಸಿಬದುಕಿಸಯ್ಯಾ ಎನ್ನ ಅಖಂಡೇಶ್ವರಾ || ೩೦| ಸತ್ಕಾಯದಿಂದತಂದದ್ರವ್ಯಗಳಅಂದಂದಿಗೆಗುರುಲಿಂಗಜಂಗಮಕ್ಕೆಸವ ಸಿ | ಹಿಂದುಮುಂದೆಣಿಸದೆ| ಇಂದಿಗೆಮೂರುವರುಷತುಂಬಿತೆಂದು ಆನಂದ ಭಕ್ತರತೋರಿಸಿಬದುಕಿಸಯ್ಯಾಅಖಂಡೇಶ್ವರಾ||೩೧|| ಭಕ್ತನಾದಡೆನಿರ್ವಂ ಚಕಭಾವದಿಂದೆ ತ್ರಿವಿಧಕ್ಕೆ ತ್ರಿವಿಧದಾರ್ಥವಸಮರ್ಪಿಸಬೇಕು| ಮಹೇಶ್ವ ರನಾದರೆ |' ತ್ರಿವಿಧವಬಯಸದಿರಬೇಕು | ಪ್ರಸಾದಿಯಾದರೆಹಲ್ಲುಕಡ್ಡಿಮೊ ದಲಾದದರ್ಪಣಸಕಲಪದಾರ್ಥಗಳಲಿಂಗಕ್ಕೆಕೊಟ್ಟಲ್ಲದೆ ಕೊಳ್ಳದಿರಬೇಕು ಪ್ರಾಣಲಿಂಗಿಯಾದರೆ| ಪ್ರಪಂಚವಹಿಂಗಿರಬೇಕು | ಭೋಗೋಪಭೋಗವ ನುನಿಲ್ಲದೆಲಿಂಗದಮೂಲವರಿದಕೊಡಬೇಕು | ಐಕ್ಯನಾದೊಡೆ| ಸಕಲವ್ರುತಂ ನೊಳಗೆಂದರಿದುಸರ್ವರೊಳಗೆಲ್ಲತಂನನೆಕಾಣಬೇಕು| ಇತಿಷಟ್ಸ್ಥಲದಅನು ವನರಿತುಆಚರಿಸುವಮಹಾಶರಣನಅಳಿನನಾನಯ್ಯಾಅಖಂಡೇಶ್ವರಾ || ೩೨ || ಭಕ್ತಿಯುನಿಲವನರಿಯೆ| ಜ್ಞಾನದಕುರುಹನರಿಯೆ| ವೈರಾಗ್ಯದಧೃಢವನರಿಯೆ ವಿರಕ್ತಿಯುಹೊಲಬನರಿಯೆ | ಮುಕ್ತಿಯುಪಥವನರಿಯೆ | ಭಕ್ತಿಜ್ಞಾನವೈರಾ ಗ್ಯವಿರಕ್ತಿಯಿಂದಮುಕ್ತರಾದ ಮಹಾಶರಣರ ಮನೆನಯ್ಯಾ ಅಖಂಡೇಶ್ವರಾ ||೩೩||ಶಿವಶಿವಾಯನ್ನ ಮನದಾಳಾಸವನವಧರಿಸಯ್ಯ | ಸ್ವಾಮಿಯುನಗೆಭ ಕ್ತಿಬೇಡಾ|| ಯನಗೆಜ್ಞಾನಬೇಡ| ವಿರತಿಬೇಡ| ನಿಮ್ಮಶರಣರುವುಟ್ಟಮೈಲಿಗೆ ವುಗಳತಾಂಬೂಲವಕ್ಕಮಿಕ್ಕಪ್ರಸಾದವನೆ ಕರುಣಿಸಿ ಅವರಪಾದಗಪಾದರಾ ಕ್ಷೆಯನೋಡಿಹಿಡಿವುದಕ್ಕೆಯೋಗ್ಯಸ್ಥನಮಾಡಿ | ಅವರಕಡೆಯಬಾಗಿಲಕಾ ಯ್ವಂತೆಮಾಡಯ್ಯಎನ್ನ ಅಖಂಡೇಶ್ವರಾ ||೩೪|| ಸೋಹಂನೆಂದಡೆಅಂತರಂ ಗದಗರ್ವ | ಶಿವೋಹಂಯೆಂದರೆಬಹಿರಂಗದಹಂಕಾರ| ಈವುಭಯವನಳಿದು ದಾಸೋಹನೆಂದಡೆಪರಮಪದವು| ಇದಂಕಾರಣವೆನಗೆದಾಸೋಹಂಭಾವ

ವನೆಕರುಣಿಸಿಬದುಕಿಸಯ್ಯ ಅಖಂಡೇಶ್ವರಾ|| ಸದ್ಭಕ್ತರೇಯೆನ್ನ ತಂದೆತಾಯಿಗಳಯ್ಯ| ಸದ್ಭಕ್ತರೆಯೆನ್ನ ಬಂಧುಬಳಗವಯ್ಯ| ಸದ್ಭಕ್ತರುತಂಮವಕ್ಕಮಿಕ್ಕುದನಿಕ್ಕಿಸುವವರಾಗಿ ಅಖಂಡೇಶ್ವರನಿಮ್ಮ ಕಡೆಯ ಬಾಗಿಲಕಾಯ್ವುದಕ್ಕೆಯೋಗ್ಯನಾದೆನಯ್ಯಾ||೪೬|| ಗುರುವೇತಂದೆತಾಯಲ್ಲದೆಬೇರೆತಂದೆತಾಯಿಗಳಿಲ್ಲವಯ್ಯ| ನನಗೆಶಿವಶರಣರೆಬಂಧುಬಳಗವಲ್ಲದೆ| ಬೇರೆಮತ್ತೊಂದುಬಂಧುಬಳಗವಿಲ್ಲವಯ್ಯಾ|ಯೆನಗೆಶಿವಕುಲವಲ್ಲದೆ| ಬೇರೊಂದುಕುಲವಿಲ್ಲವಯ್ಯಾಯೆನಗೆಅಖಂಡೇಶ್ವರನೀವೆನ್ನ ಕುಲದೈವತವಲ್ಲದೆ| ಬೇರೆಮತ್ತು ಕುಲದೈವಮನೆದೈವವಿಲ್ಲವಯ್ಯಾಯೆನಗೆ||೪೭|| ಗುರುಕರಜಾತನಾದಿಆಣವಮಲಹೋಯಿತಯ್ಯಾಯೆನಗೆ| ಭಕ್ತಜನಬಾಂಧತ್ವವಾಗಿಮಾಯಾಮಲಹೋಯಿತಯ್ಯಾಯೆನಗೆ|ದ್ರವ್ಯತ್ರೈಲಿಂಗದಾಸೋಹಂಮೆಂದರಿದೆನಾಗಿ| ಕಾರ್ಮಿಕಮಲಹೋಯಿತಯ್ಯಾಯೆನಗೆ| ಇಂತುಮಲತ್ರಯಂಗಳುಗಳುಹರಿದುನಿಂಮಕರುಣದಕಂದನಾದೆನಯ್ಯಾಅಖಂಡೇಶ್ವರಾ|ಬ್ರಾಹ್ಮಣನಾಗಲಿಕ್ಷತ್ರಿಯನಾಗಲಿ| ವೈಶ್ಯನಾಗಲಿ| ಶೂದ್ರನಾಗಲಿ| ಆವಜಾತಿಯಲ್ಲಿಹುಟ್ಟಿದಾತನಾದರೂಆಗಲಿ| ಗುರುಕಾರುಣ್ಯವಪಡೆದುಅಂಗದಮೇಲೆಲಿಂಗವಧರಿಸಿದವನಾಗಲಿ| ಆಚಾರಸಂಪನ್ನಸತ್ಕ್ರಿಯನಾದಮಹಾತ್ಮನೆ| ಮೂರುಲೋಕಕ್ಕೆಅಧಿಕಾರಿಯುನೋಡಾಅಖಂಡೇಶ್ವರಾ ||೪೮|| ಸದ್ಭಕ್ತರನಡೆಶುದ್ಧಸದ್ಭಕ್ತರನುಡಿಶುದ್ಧಸದ್ಭಕ್ತರ ತನುಶುದ್ಧ ಸದ್ಭಕ್ತರಮನಶುದ್ಧಸದ್ಭಕ್ತರಭಾವಶುದ್ಧಅಖಂಡೇಶ್ವರಾ || ನೀವು ವೊಲಿದಸದ್ಭಕ್ತರಕಾಯವೆಕೈಲಾಸವಯ್ಯಾ | ಮುಕ್ತಿಪಡೆವೆನೆಂದುಮುಕ್ತಿಗೆಟ್ಟುಸಕಲತೀರ್ಥಕ್ಷೇತ್ರಗಳಿಗೆಯಡೆಯಾಡಿ ತೊಟ್ಟನೆತೊಳಲಿಬಳಲಿಬೆಂಡಾಗಲ್ಯಾಕೋ|ಒಬ್ಬಶಿವಭಕ್ತನಅಂಗದಲ್ಲಿಎಂಭತ್ತುಕೋಟಿಕ್ಷೇತ್ರ ತೀರ್ಥಂಗಳಿರ್ಪವು| ಆತನಕಾಯವೆಕೈಲಾಸ|ಆತನಬಚ್ಚಲಲ್ಲಿಅರುವತ್ತಾರುಕೋಟಿತೀರ್ಥಂಗಳಿರ್ಪವು| ಆತನಅಂಗದಮೇಲಿರ್ಪಲಿಂಗವೆಪರಶಿವನನಾದಿಯುತಪ್ಪದು|| ಇದುಕಾರಣಅಂತಪ್ಪಸದ್ಭಕ್ತನಗೃಹವಂಪೊಕ್ಕುಆತನದರ್ಶನಸ್ಪರ್ಶನವಾದಾತಂಗೆಅನಂತಭವಕೋಟಿಪಾತಕಗಳುಪರಿಹಾರವಪ್ಪವುನೋಡಾ|ಅತನವಕ್ಕಮಿಕ್ಕುದಕೊಂಡಾತಂಗೆಮುಂದೆಮುಕ್ತಿಯಪ್ಪುದನೋಡಾಅಖಂಡೇಶ್ವರಾ ||೫೦|| ಸ್ನೇಹಸಮರಸಮೋಹವಿರಬೇಕು| ಪಾದೋದಕಪ್ರಸಾದದಲ್ಲಿಸ್ನೇಹಸಮರಸಮೋಹವಿರಬೇಕು| ಶಿವಭಕ್ತಶರಣಜನಂಗಳಲ್ಲಿ| ಇಂತಿವರಲ್ಲಿಸ್ನೇಹಸಮರಸಮೋಹವನುಳ್ಳಂಥಾ ಸದ್ಭಕ್ತರತೋರಿಸಿಬದುಕಿಸಯ್ಯಾಅಖಂಡೇಶ್ವರಾ|| ಹೊನ್ನನದುಮೊಂಣಿಂನದುಹೆಣ್ಣಿಂನದುತನುವೆಂದನುಎಂದುಭಿಂನವಿಟ್ಟುಭಕ್ತಿಯುಮಾಡಿಬತ್ತಿಕಾರ

ನಂತೆವೆಂದುಕೊಟ್ಟು ಎರಡುಪಡೆವಜಡಜೀವಿಗಳ ಭಕ್ತರೆನಬಹುದೆ ಅಖಂಡೇ ||೫೩|| ಅಂಗಪ್ರಸ್ಥಾನಸದ್ಭಾವವೆಂಬಚತುರ್ವಿಧಭಕ್ತಿಯಿಂದೆ ಗುರುವಿಂಗೆತನುವಸವಸಿದಡೆಆತನುವಿನಲ್ಲಿದೀಕ್ಷಾಶೀಕ್ಷಾಸ್ವಾನುಭವಜ್ಞಾನಸ್ವರೂಪನಾದಶ್ರೀಗುರುದೇವನುನೆಲೆಗೊಂಬನುನೋಡಾ । ಮಂತ್ರಜ್ಞಾನಧ್ಯಾನಜಪಸ್ತೋತ್ರವೆಂಬನಾಲ್ಕುತರಹಭಕ್ತಿಯಿಂದಲಿಂಗಕ್ಕೆಮನವಸವಸಿದಡೆ । ಈ ಮಾನದಇಷ್ಟಪ್ರಾಣಭಾವಸ್ವರೂಪವಾದ ಪರಶಿವಲಿಂಗವುನೆಲೆಗೊಂಬುದುನೋಡಾ।ಅಂನವಸ್ತ್ರಾಭರಣಾದಿಹದಿನೆಂಟುತರದಭಕ್ತಿಇಂದೆಜಂಗಮಕ್ಕೆಧನವಸವಸಿದಡೆ। ಆಧನದಲ್ಲಿಸ್ವಯಚರಪರಸ್ವರೂಪವಾದ । ಮಹಾಘನಜಂಗಮವುನೆಲೆಗೊಂಬುದುನೋಡಾ। ಇಂತೀತ್ರಿವಿಧಸಂಪತ್ತುನಿಂಮಶರಣರಿಗೆಲ್ಲದೆವುಳಿದವರಿಗೆಅಳವಡದಯ್ಯಾಅಖಂ|| ಹಿಂದಣಜನ್ಮವಸಂಸಾರವಮರದುಮುಂದಣಭವಬಂಧನಂಗಳಜರಿದು । ಸಂದೇಹಸಂಕಲ್ಪಂಗಳುಹರಿದು ನಿಂಮಅವಿರಳಭಕ್ತಿಬೆಳಗಿನಲ್ಲಿಜ್ಯೋಲ್ಯಾಡುವಮಹಾಮಹಿಮರತೋರಿಸಿಬದುಕಿಸಯ್ಯಾಅಖಂಡೇಶ್ವರ|| ಉಪಾಧಿಯುನಳಿದುನಿರುಪಾಧಿಯುತಿಳಿದು। ಸಹಜಮಾಟದಲ್ಲಿಸುಳಿದು।ಜಾತಿಸೂತಕ।ಜನನಸೂತಕ।ಪ್ರೇತಸೂತಕ । ವುಚ್ಚಿಷ್ಟಸೂತಕ । ರಜಃಸೂತಕವೆಂಬಪಂಚಸೂತಕಂಗಳಕಳೆದು। ಸದಾಚಾರ ಲಿಂಗಾಚಾರ ಶಿವಾಚಾರಗಣಾಚಾರ ಭೃತ್ಯಾಚಾರವೆಂಬ ಪಂಚಾಚಾರಂಗಳ ಪಂಚಭೂತಗಳಪರಿಹರಿಸಿ ಪಂಚಪ್ರಾಣವಾಯುಗಳ ಸಂಚಲಗುಣವಟ್ಟುಮಪಂಚೇಂದ್ರಿಯಗಳಲ್ಲಿಪಂಚಲಿಂಗಪ್ರತಿಷ್ಠಿಸಿ ಪಂಚಬ್ರಹ್ಮದಮೂಲವಳಿನರಿದು।ಮೂಲೋಕದೊಡೆಯನಲ್ಲಿಮನವನೆಡಗಿರ್ಪಮಹಾಶರಣರಪಾದಕ್ಕೆನಮೋನಮೋಎಂಬೆನಯ್ಯ||ಅ|| ತಾನೆಗುರುವಾಗಿಭಕ್ತಿಯುಮಾಡುತಿಪ್ಪನಂತಾನೆಲಿಂಗವಾಗಿಲಿಂಗಪೂಜೆಯುಮಾಡುತಿಪ್ಪನು । ತಾನೆಜಂಗಮವಾಗಿಜಂಗಮಪೂಜೆಯುಮಾಡುತಿಪ್ಪನು। ತಾವೆಪಾದೋದಕಪ್ರಸಾದವಾಗಿಪಾದೋದಕಪ್ರಸಾದವಸೇವನೆಮಾಡುತಿಪ್ಪನು ತಾನೆವಿಭೂತಿರುದ್ರಾಕ್ಷಿಯಾಗಿವಿಭೂತಿರುದ್ರಾಕ್ಷಿಯಧರಿಸುತಿಪ್ಪನು।ತಾತೆಮಂತ್ರವಾಗಿಮಂತ್ರವ ಜಪಿಸುತಿರ್ಪನು।ಇಂತೀಅಷ್ಟಾವರಣವೆಅಂಗವಾಗಿಅಷ್ಟಾವರಣವೆಸಂಗವಾಗಿ ಅಷ್ಟಾವರಣವೆಸಮರಸವಾಗಿಇರುವ ಸದ್ಭಕ್ತನು ಸಾಕ್ಷಾತ್‌ಪರವಸ್ತುವು ತಾನೆಯ್ಯಾ।ಅ।ಹಾಡುವರೆಹಾಡುವೆನಯ್ಯಾಶಿವಶರಣರ। ಎನ್ನಮನವಲಿದುನೋಡಿದರೆನೋಡುವೆನಯ್ಯಾಸದ್ಭಕ್ತರಸ್ತ್ರೀಯರಯನ್ನಹೆತ್ತತಾಯಿಗಳೆಂದು।ಬೇಡಿದರೆಬೇಡುವೆನಯ್ಯಾ ಎನ್ನಶ್ರೀಗುರುವಿನಲ್ಲಿನಿತ್ಯನಿಜಮೂರ್ತಿಯ । ಕೂಡಿದರೆಕೂಡುವನಯ್ಯಾ ಅಖಂಡೇಶ್ವರಾ ನಿಮ್ಮಚರಣವನೊಡಗೂಡುವೆ ಅ

ವಿ[illegible]ಮಳಸಭಕ್ತಿಯಲ್ಲಿ ||೫೮|| ಎನ್ನ ತನುವೆ ಗುರುವಿನ ಸ್ಥಾನವಯ್ಯಾ। ಎನ್ನ ಮನವೆ ಲಿಂಗದ ಪ್ರಾಣವಯ್ಯಾ।ಎನ್ನ ಆತ್ಮನೆ ಜಂಗಮದ ಸ್ಥಾನವಯ್ಯಾ॥ ಯನ್ನ ಪ್ರಾಣವೆ ಪ್ರಸಾದ ಸ್ಥಾನವಯ್ಯಾ। ಯನ್ನ ಗುರುವೆ ರುದ್ರಾಕ್ಷಿಯ ಸ್ಥಾನವಯ್ಯಾ। ನನ್ನ ಜಿಹ್ವೆಯೆ ಶಿವಮಂತ್ರಸ್ಥಾನವಯ್ಯಾ। ಯನ್ನ ಕಂಗಳೆ ಲಿಂಗಾಚಾರಸ್ಥಾನವಯ್ಯಾ। ಯನ್ನ ಶ್ರೋತ್ರವೆ ಶಿವಾಚಾರದ ಸ್ಥಾನವಯ್ಯಾ। ಯನ್ನ ಹಸ್ತವೆ ಗಣಾಚಾರ ಸ್ಥಾನವಯ್ಯಾ।ಎನ್ನ ಚರಣವೆ ಸದಾಚಾರ ಸ್ಥಾನವಯ್ಯಾ। ಯನ್ನ ಷಡ್ವ್ರತಂಗಳೆ ಷಡುಸ್ಥಳದ ಸ್ಥಾನವಯ್ಯಾ । ಎನ್ನ ಸುಜ್ಞಾನವೆ ಶಿವಾನುಭಾವದ ಸ್ಥಾನವಯ್ಯಾ । ಇಂತಿ ಅಷ್ಟಾವರಣ ಪಂಚಾಚಾರ ಷಡುಸ್ಥಳದ ಶಿವಭಾವವನೊಳಕೊಂಡು ಯನ್ನ ಚಿತ್ತವೆ ಮಹಾಕೈಲಾಸವಯ್ಯಾ ಅಖಂಡೇಶ್ವರ ॥ ಮಾಡುವ ಭಕ್ತನು ನೀನೆ। ಮಾಡಿಸಿಕೊಂಡ ದೇವನು ನೀನೆಯೆಂದರಿದೆ ಇದು ಕಾರಣ ಅಖಂಡೇಶ್ವರಾ ನಿಮ್ಮ ಫಲಪದವ ಬೇಡಲಿಲ್ಲಾ ನೀವು ವಲಿದು ಯನಗೆ ಕೊಡಲಿಲ್ಲ||೬೦||ತನುವ ನಿಮಗರ್ಪಿಸಿಹೆನೆಂದಡೆ ತಮವಿಲ್ಲವಯ್ಯಾ ಯನಗೆ। ಯನ್ನ ಮನವ ನಿಮಗರ್ಪಿಸಿಹೆನೆಂದಡೆ ಮನವಿಲ್ಲವಯ್ಯಾ ಯನಗೆ। ಧನವ ನಿಮಗೆ ಅರ್ಪಿಸಿಹೆನೆಂದಡೆ ಧನವಿಲ್ಲವಯ್ಯಾ ಯನಗೆ । ಅದೇನು ಕಾರಣವೆಂದರೆ। ನೀವು ಗುರುವಾಗಿ ಬಂದು ಯನ್ನ ತನುವನೊಳಕೊಂಡಿರ್ಪಿರಾಗಿ। ಮನವ ನಿಮಗರ್ಪಿಸಿಹೆನೆಂದಡೆ ಮನವಿಲ್ಲವಯ್ಯಾ ಯನಗೆ ಅದೇನು ಕಾರಣವೆಂದರೆ। ನೀವು ಲಿಂಗವಾಗಿ ಬಂದು ಯನ್ನ ಮನವ ನೊಳಕೊಂಡಿರ್ಪಿರಾಗಿ । ಧನವನರ್ಪಿಸಿಹೆನೆಂದಡೆ ಧನವಿಲ್ಲವಯ್ಯಾ ಯನಗೆ। ಅದೇನು ಕಾರಣವೆಂದಡೆ। ನೀವು ಜಂಗಮವಾಗಿ ಬಂದು ಯನ್ನ ಧನವನೊಳಕೊಂಡಿರ್ಪಿರಾಗಿ । ಇರುವ ಕಾರಣ । ತನುವೆ ಗುರುವೆ । ಮನವೆ ಲಿಂಗ। ಮನವೆ ಜಂಗಮವಾಗಿತ್ತಾಗಿ ಅಖಂಡೇಶ್ವರಾ ನಿಮ್ಮ ಮಾಡಗಿರ್ದೆನಯ್ಯಾ ||೬೧|| ಮಾಡುವ ತನುವು ನೀವೆಯಾದಿರಾಗಿ । ನೀಡುವ ಧನವು ನೀವೆಯಾದಿರಾಗಿ । ಕೊಡುವ ಮನವು ನೀವೆಯಾದಿರಾಗಿ ಅಖಂಡೇಶ್ವರಾ ನಾನು ಯಿಲ್ಲಾ। ನೀನು ಯಿಲ್ಲಾ । ಯೇನೇನು ಯಿಲ್ಲ॥ ||೬೨||

## ತೂರ್ಯನಿರಾಲಂಬ ಮಾಹೇಶ್ವರಸ್ಥಲವು.

ಪರಸ್ತ್ರೀಯರ ಮುಟ್ಟದಿರಬೇಕು।ಪರಧನವ ಹಪಹರಿಸದಿರಬೇಕು।ಪರದೈವವ ಪೂಜಿಸದಿರಬೇಕು। ಪರಹಿಂಸೆಯ ಮಾಡದಿರಬೇಕು। ಪರಲೋಕದ ಫಲಪದವ ಬಯಸದಿರಬೇಕು। ಮನವು ನಿರ್ಮಲವಾಗಿ। ಇಷ್ಟಲಿಂಗದಲ್ಲಿ ಸಿಸ್ಟೆಬಿಡದಿರಬೇಕು । ಕಷ್ಟಜನ್ಮವ ಕಡೆಗೊದ್ದಿಪ್ಪಾತನೆ ವೀರಮಾಹೇಶ್ವರನು ನೋ

ಡಾ । ಅದೆಂತೆಂದರೆ,—ಶ್ಲೋ॥ಪರಸ್ತ್ರೀಣಾಂಪರಾರ್ಥಾಂಚ । ವರ್ಜಿತಭಾ ವಶುದ್ಧಮಾರ್ಗ । ಲಿಂಗನಿಷ್ಠಾನಿಯುಕ್ತಾತ್ಮ । ಮಾಹೇಶ್ವರಮಹಾಸ್ಥಲಂ ॥ ಎಂದುದಾಗಿ ಇಂತಪ್ಪಮಾಹೇಶ್ವರನಶ್ರೀಪಾದಕ್ಕೆನಮೋ ನಮೋಯೆಂಬೆನಯ್ಯಾ ಅಖಂಡೇಶ್ವರಾ ॥೧॥ ನೈಷ್ಠಿಕಭಾವನಂಬುಗೆಯಿಲ್ಲದಬಳಿಕಯೆಷ್ಟುಮೋದಿದರೇನು। ಯೆಷ್ಟುಕೇಳಿದರೇನು । ಯೆಷ್ಟುಜಪಮಾಡಿದರೇನು।ಅದು ನಿಷ್ಫಲವಲ್ಲದೆ ದೃಷ್ಟಕ್ಕೆಸಂಧಾನವಲ್ಲನೋಡಾ। ಇದುಕಾರಣನಿಷ್ಠೆಬಲಿದು ಭಾವತುಂಬಿನಂಬುಗೆಯುಯಿಂಬುಗೊಂಡು ಮಾಡುವದೇವರಪೂಜೆ । ಅದೇ ನಮ್ಮಅಖಂಡೇಶ್ವರಲಿಂಗದವಲುಮೆ ॥೨॥ ಹುಸಿಕಳವುಪರದಾರಹಿಂಸೆಯ ಬಿಟ್ಟು । ಲೋಕದನೆಚ್ಚುಮೆಚ್ಚುಸುಟ್ಟು ಸಚ್ಚಿದಾನಂದಲಿಂಗದಲ್ಲಿಮನಬೆಚ್ಚಿಂದಿರ್ಪಅಚ್ಚಮಾಹೇಶ್ವರರತೋರಿಸಿಬದುಕಿಸಯ್ಯಾಅಖಂಡೇಶ್ವರಾ॥೩ ನೈಷ್ಠೆನೆಲೆಗೊಳಬೇಕು ಗುರುಭಕ್ತಿಯಮಾಡುವಲ್ಲಿ । ನೈಷ್ಠೆನೆಲೆಗೊಳಬೇಕು ಲಿಂಗಪೂಜೆಯಮಾಡುವಲ್ಲಿ । ನೆಷ್ಠೆನೆಲೆಗೊಳಬೇಕು ಜಂಗಮವನರ್ಚಿಸುವಲ್ಲಿ । ನೈಷ್ಠೆನೆಲೆಗೊಳಬೇಕು ಪಾದೋದಕಪ್ರಸಾದವ ಕೊಂಬುವಲ್ಲಿ । ನೈಷ್ಠೆನೆಲೆಗೊಳಬೇಕು ನಮ್ಮಅಖಂಡೇಶ್ವರನವಲಿಸುವಲ್ಲಿ॥೪॥ ಛಲವಿರಬೇಕುಭಕ್ತಿಯಮಾಡುವಲ್ಲಿ । ಹಿಡಿದುಬಿಡನೆಂಬುವಛಲವಿರಬೇಕು।ನಿತ್ಯನೇಮದಲ್ಲಿಹಿಡಿದುಬಿಡೆನೆಂಬುವಛಲವಿರಬೇಕು। ನಮ್ಮಅಖಂಡೇಶ್ವರಲಿಂಗವಕೂಡಿ ಅಗಲಬಾರದೆಂಬನೈಷ್ಠೆಯಲ್ಲಿ ॥೫॥ ಗುರುಭಕ್ತಿಯಮಾಡಿದಬಳಿಕ ಸರ್ವಾಲವಗುಣಂಗಳುಹಿಂಗಿರಬೇಕು । ಲಿಂಗಪೂಜೆಯಮಾಡಿದಬಳಿಕಸಂಸಾರದಲ್ಲಿಯಮೋಹವತೊಲಗಿರಬೇಕು । ಪಾದೋದಕಪ್ರಸಾದವಕೊಂಡಬಳಿಕಇಹಪರದಭೋಗಮೋಕ್ಷಂಗಳಬಯಕೆಅರಿತಿರಬೇಕು। ಇದೇನಮ್ಮಅಖಂಡೇಶ್ವರಲಿಂಗದಕೂಟವು ॥೬॥ ಫಲಪದವೆಯಾಶೆಯಮಾಡಲಾಗದು ಜಂಗಮಾರ್ಚನೆಯಮಾಡಿ । ಅದೇನುಕಾರಣವೆಂದರೆ । ಬಯಕೆಯಭಕ್ತಿಯನ್ನು ಪೂರ್ವಪುರಾತನರುಮೆಚ್ಚರು। ನಮ್ಮಅಖಂಡೇಶ್ವರದೇವನುಹಂಗಿನಭಕ್ತನಲ್ಲ ನೋಡಾ ॥೭॥ ನಿತ್ಯಲಿಂಗಜಂಗಮಕ್ಕೆನಿತ್ಯಪೂಜೆಯಮಾಡಿನಿತ್ಯಮುಕ್ತಿಯಪಡೆಯದೆ । ಮತ್ತತನದಿಂದ ಅನಿತ್ಯಫಲ ಭೋಗವಪಡೆದು । ಮರ್ತ್ಯದ ಭವಜಾಲದಲ್ಲಿ ಸುತ್ತಿಸುತ್ತಿ ಸುಳಿದುತೊಳಲಿಬಳಲುವವ್ಯರ್ಥರನೋಡಿನಗುತಿರ್ದನಯ್ಯನಮ್ಮಅಖಂಡೇಶ್ವರಾ ॥೮॥ ಮೊಟ್ಟಮೊಟ್ಟೆಯಪುಪತ್ರಪ್ಪವತಂದು । ನಟ್ಟನಟ್ಟಲಿಂಗವಪೂಜಿಸಿದದೇನು।ತನುಮನಧನವಕೊಟ್ಟುತನುವುಹಿಂಗದನ್ನಕಾ ಹುಸಿಕಳವುಪರದಾರವ್ಯಾಪಾರದಲ್ಲಿಹರಿದಾಡುವಮರುಳುಬುದ್ಧಿಯದುರಾಚಾರಿಗಳಿಗೆದೂರನಾಗಿಪ್ಪನುನೋಡಾ ನಮ್ಮ ಅಖಂಡೇ

ಶ್ವರಾ ||೯|| ಶಿವಶಿವಾಯನ್ನ ಮನವುನಿಮ್ಮ ನೆನೆಯಲೊಲ್ಲದೆಅನ್ಯಕ್ಕೆ ಅರಿವುತಿ
ಪ್ಪುದುನೋಡಾ । ಗುರುಚರಲಿಂಗದಸೇವೆಯಂದಡೆ ಹಿಂದುಳಿವುತಿಪ್ಪುದು
ನೋಡಾ । ಅನ್ಯರಒಡವೆಯಾದಹೊನ್ನು । ಹೆಂಣು । ಮಂಣು । ಯಂಬಳ
ವುಗಳಮುಂದವರಿದುನೋಡುತಿರ್ಪುದಾನೋಡಾ । ಈಮನದ ವುಪಟಳವು
ಘನವಾಯಿತು । ಇಂನೇನುಗತಿಯಯ್ಯಾ ಅಖಂಡೇಶ್ವರಾ ॥ ಹೊರಗೆಹೊ
ನ್ನುಬಿಟ್ಟೆನೆಂದುನುಡಿಯುತಿರ್ಪೆನಲ್ಲದ । ಒಳಗೆಬಿಟ್ಟುನಿಜವಂತನಲ್ಲವಯ್ಯ
ನಾನು । ಹೊರಗೆಹೆಂಣುಬಿಟ್ಟೆನೆಂದು ನುಡಿಯುತಿರ್ಪೆನಲ್ಲದೆ ಒಳಗೆಬಿಟ್ಟುನಿ
ಶ್ಚಿಂತನಲ್ಲವಯ್ಯಾನಾನು । ಹೊರಗೆಮಂಣುಬಿಟ್ಟೆನೆಂದುನುಡಿವೆನಲ್ಲದೆ। ವಳ
ಗೆಬಿಟ್ಟುನಿಶ್ಚಿಂತನಲ್ಲವಯ್ಯಾನಾನು । ಇಂತಪ್ಪಯೇಕಾಂತದ್ರೋಹಿ ಗುಪ್ತ
ಪಾತಕಂಗೆ ಆಖಂಡೇಶ್ವರನುವಲಿಯಲಿಯಂದರೆ ಯಂತೊಲಿವನುಯನಗೆ ॥
॥೧೧॥ ಬಾಳೆಯಲೆಯವ್ಯಾಲಿತುಪ್ಪವತೊಡದಂತೆ ಒಪ್ಪವಿಟ್ಟುವಚನವನು
ಡಿದೆನಲ್ಲದೆನಡೆಯಲಿಲ್ಲ । ಒಪ್ಪವಿಟ್ಟುನಡೆಯಲಿಲ್ಲವಯ್ಯನಾನು। ನುಡಿಹೀನ
ನಡೆತಪ್ಪುಜಡದೇಹಿ ॥ ಕಡುಪಾತಕಗೆವಡೆಯಅಖಂಡೇಶ್ವರಲಿಂಗವುಸ್ವಪ್ನ
ದಲ್ಲಿಸುಳಿಯಲಿಲ್ಲವಯ್ಯಾನೀನು ಅಖಂಡೇಶ್ವರಾ ॥ ೧೨॥ ದುರ್ಗುಣಿದುರಾ
ಚಾರಿಯಯ್ಯಾನಾನು । ದುರ್ಬುದ್ಧಿದುರ್ನೀತಿಯುಳ್ಳವಯ್ಯನಾನು । ದು
ರಾತ್ಮದುಷ್ಕರ್ಮಿಯಯ್ಯಾನಾನು । ತಿಪ್ಪೆಯಕೆದರಿದಂತೆ ಶತಕೋಟಿಕೆಟ್ಟ
ಗುಣದವನಯ್ಯ । ಯನ್ನಲ್ಲಿಸದ್ಗುಣವನರಸಿದರೇನುಹುರಳಿಲ್ಲವಯ್ಯಾ। ಮ
ನದಲ್ಲಿವಿಕಾರಹುಟ್ಟಿ। ತನುವನಂಡಲಿದುವಿಷಯಾತುರನಾಗಿ। ತಲೆಹುಳಿತ
ಶ್ವಾನನಂತೆ। ದೇಶದೇಶಕ್ಕೆಹರಿದಾಡಿದೆನಲ್ಲದೆ । ನಿಮ್ಮನರಿವುತ್ತಾ । ಚರಿವು
ತ್ತಾಭಕ್ತಿಸ್ಹಾನವೈರಾಗ್ಯದಲ್ಲಿಸುಳಿಯಲಿಲ್ಲವಯನಾನು ಅಖಂಡೇಶ್ವರಾ ॥
ಆಶೆಯುಹಿಡಿದುಹಲವುದೇಶಕ್ಕೆ ಹರಿದಾಡಿದೆನಲ್ಲದೆನಿಮ್ಮನರಿವುತ್ತಾ ಚರಿಯು
ತ್ತಭಕ್ತಿಜ್ಞಾನವೈರಾಗ್ಯದಲ್ಲಿಸುಳಿಯಲಿಲ್ಲವಯ್ಯನಾನು । ನಿರಾಶೆವಿಡಿದುನಿಜ
ವಿರಕ್ತನಾಗಿಚರಿಸಲಿಲ್ಲವಯ್ಯಾನಾನು। ವೇಷಾಡಂಬರದಲ್ಲಿಅಧಿಕನೆನಿಸಿ।ತಾ
ನೇಕವಚದಿನಡೆಯದೆಸಲ್ಲದಿಹಭಾಷೆಯಲ್ಲಿ ಅಧಿಕನೆನಸಿ । ಲಿಂಗಮೆಚ್ಚನಡೆ
ಯಲಿಲ್ಲಿವಯ್ಯನಾನು । ಮಾತಿನಲ್ಲಿವಿರಕ್ತನೆಂದುತಕ್ಕತನದಠವಳಿಕಾರಿಕೆಸು
ಳನ್ನೆನುಡಿದೆನಲ್ಲದೆ । ಮನನಲ್ಲಿಸರ್ವಸಂಗಪರಿತ್ಯಾಗಿ । ಯಾದಪರಮವಿರ
ಕ್ತನಲ್ಲವಯ್ಯನಾನು । ಇಂತಪ್ಪಹುಸಿಡಂಭದುರ್ವೃತಿಬರಿಕಾಯನಿಗೆಅಖಂ
ಡೇಶ್ವರನದೆಂತುಮೆಚ್ಚುವನುಯನಗೆ ।೧೪।।ಮನದಲ್ಲಿಆಶೆವೊಳೆದೋರಿ।ಮ
ತ್ತೆಮತ್ತೆಬೇಕಂದಲ್ಲಿಯನ್ನಮನಕಿರಿದಾಯಿತು। ಲಿಂಗದನೆನಹುಜಂಗಮದ
ಸೇವೆಯತೊರಿದು।ಅಂಗವಿಕಾರಕ್ಕೆಹರಿದಲ್ಲಿಯನ್ನಮನಕಿರಿದಾಯಿತುನುಡಿ

ಯಲ್ಲಿಪುಸಾಧಿಕೆಮೊಳೆದೋರಿಸರ್ವರನ್ನು ಕೊಡುಕೊಡುಯುಂಡುಬೇಡಿದಲ್ಲಿ
ಯನ್ನ ಮನಕರಿದಾಯಿತು। ಇಂತೀತ್ರಿಕರಣಶುದ್ಧಿಯಿಲ್ಲದ।ಬದ್ಧಪಾಪಿಚಾಂ
ಡಾಲಿದ್ರೋಹಿಗೆಯಂತೊಲಿವನಯ್ಯಾಯನಗೆ ॥ ೧೫ ॥ ಎನ್ನತನುವು ನಿಮ್ಮ
ಶ್ರೀಚರಣವೆಪೂಜಿಸಲಿಲ್ಲದೆ । ಹಸಿವುತೃಷೆಯಲ್ಲಿ ಹತವಾಗುತಿರ್ಪುದುನೋಡಾ
ಎನ್ನಮನವುನಿಮ್ಮದಿವ್ಯನಾಮವನೆನೆಯಲಿಲ್ಲದೆ।ಬಿನಗುವಿಷಯಕ್ಕೆಹರಿದಲ್ಲಿ
ಯನ್ನನುಡಿಕಿರಿದಾಯಿತು । ಇಂತುರವುತಿರ್ಪುದುನೋಡಾ। ಶಿವಶಿವಾಈತ
ನುಮನಧನಗಳದುರ್ಗುಣಧೂರ್ತನೆಯನೇನೆಂಬೆನಯ್ಯಾ । ಹಂದಿಹಡಿಕಿವಿ
ಷಯಕ್ಕೆ ನೆನಸಿಹಳೆಗೇರಿಯಹೋಗುವಂತೆ ಪ್ರಪಂಚದೊಳು ಓಡ್ಯಾಡು
ತಿರ್ಪುದಯ್ಯಾಯನ್ನದುರ್ಗುಣವುಅಖಂಡೇಶ್ವರಾ ॥೧೬॥. ತನುವನಿಮಗೊ
ಪ್ಪಿಸಿತನುಶುದ್ಧವಾಗಿರಲರಿಯದಯ್ಯಾನಾನುಮನವ ನಿಮಗೊಪ್ಪಿಸಿಮನಶು
ದ್ಧವಾಗಿರಲರಿಯನಯ್ಯಾ । ನಾನುಧನವನಿಮಗೊಪ್ಪಿಸಿಧನಶುದ್ಧನಾಗಿರಲ
ರಿಯನಯ್ಯಾನಾನು । ಈತನುಮನಧನದಲ್ಲಿ।ಶುದ್ಧವಿಲ್ಲದಪ್ರಪಂಚಡಾಂಭೀ
ಕನಾನಾದೆನಯ್ಯಾ ಅಖಂಡೇಶ್ವರಾ ॥೧೭॥ ತನುವುಕೊಟ್ಟು ನಾನಿಮ್ಮವಲಿ
ಸೇನಂದರೆಆಭಾವತಿಳಿಯದ। ಮನವಕೊಟ್ಟುನಿಮ್ಮವಲಿಸೇನೆಂದೊಡೆಆಭಾ
ವಯನಗೆತಿಳಿಯದು । ಧನವಕೊಟ್ಟುನಿಮ್ಮನೊಲಿಸೇನೆಂದಡೆ। ಆಭಾವಯ
ನಗೆತಿಳಿಯದು । ಸತಿಯಿದ್ದಮನಿಗೆಪತಿಯೊಲಿದು।ಬರುವಂತನೀವೆವದಲಿಬಂ
ದು ಎನ್ನತನುಮನಧನದಣಭರಿತನಾಗಯ್ಯಾದೇವಾ ಅಖಂಡೇಶ್ವರಾ॥೧೮॥
ಸತ್ತುಹುಟ್ಟುವನಲ್ಲವಯ್ಯನೋಡಾಮಹೇಶ್ವರನು । ಹುಟ್ಟಸಾವನಲ್ಲನೋ
ಡಾಮಹೇಶ್ವರನು । ಈಲೋಕದಬಯಕೆಯಬಯಸುವನತನೋಡಾಮಹೇ
ಶ್ವರನು।ಪರಲೋಕದಮೋಕ್ಷವನೆನಿಸುವನಲ್ಲನೋಡಾಮಹೇಶ್ವರನು।ಇಹ
ಪರವಹೊದ್ದದಧೀರನುಹಿಂದುಮುಂದೆಂಬದ್ವಂದ್ವಕರ್ಮಂಗಳಮೀರಿದ।ವೀ
ರಮಾಹೇಶ್ವರಂಗೆನಮೋನಮೋಯೆಂಬೆನಯ್ಯಾಅಖಂಡೇಶ್ವರಾ ॥೧೯॥ ನು
ಡಿಯಲ್ಲಿಯರಡುನುಡಿ । ನಡೆಯಲ್ಲಿಯರಡುನಡೆ । ನುಡಿದಂತೆನಡೆವಿಸ್ತರಿಸಿ ।
ನಡಿದಂತೆನುಡಿದಂತೆನಡೆವಗುರುಲಿಂಗ । ಜಂಗಮದಸೋಹವನಬಿಡುವನು।
ಹೊಂನು ಹೆಂಣು ಮಂಣುಯೆಂಬ ತ್ರಿವಿಧಮಲದಾಶೆ। ಇಂತಪ್ಪ ವೀರಮ
ಹೇಶ್ವರರನಾನೇನನೆಂಬೆನಯ್ಯಾ ಅಖಂಡೇಶ್ವರಾ ॥೨೦॥ ಹಿಡಿದುದಬಿಡವನ
ಲ್ಲಿ । ಶರಣಾಬಿಟ್ಟುದಹಿಡಿವನಲ್ಲಶರಣಾ । ನಡುಮಧ್ಯದಲ್ಲಿ ಯಡರುಬಡತನ
ಕಂಟಕಂಗಳುಬಿಂದರೆ । ಕಡುದುಃಖಿಯಾಗಿಬಳಲುವನಲ್ಲ। ಅಡಿಗಡಿಗೆಲಿಂಗ
ಪೂಜೆ ಅಡಿಗಡಿಗೆ ಜಂಗಮದಾಸೋಹವಮರವನಲ್ಲ ॥ ಇದುಕಾರಣಅಖಂ
ಡೇಶ್ವರಾನಿಮ್ಮಮಾಹೇಶ್ವರನ ಚರಿತ್ರವು ಇಹಪರಲೋಕದೊಳಗೆಲ್ಲ॥೨೧

ಪರಧನಪರಸ್ತ್ರೀಯರಬಿಟ್ಟರೆ। ಗುರುವುಲಿಂಗವುಸಾಧ್ಯವುನೋಡಾ ॥ ಇಹಪರದಭೋಗಮೋಕ್ಷದ । ಬಯಕೆಯಬಿಟ್ಟರೆ ಚಲಶೇಷವುಸಾಧ್ಯವುನೋಡಾ। ಕರಣಾದಿಗುಣಂಗಳೂಹರಿಯದಿರ್ದಡೆಅರವುಸಾಧ್ಯವುನೋಡಾ ತಾನಿದಿರಿಯವನಳಿದಡೆ। ನಿಜವುಸಾಧ್ಯವುನೋಡಾಅಖಂಡೇಶ್ವರಾ ॥೨೨॥ ಮಾತಿನಲ್ಲಿಕರ್ಕಶ। ಮನದಲ್ಲಿಘಾತಕತನವುಳ್ಳವನಕನಿಷ್ಟನೆಂಬರು।ಮಾತಿನಲ್ಲಿಲೀಲೆಮನದಲ್ಲಿಕತ್ತರೆವುಳ್ಳವನಮಧ್ಯಮನೆಂಬರು । ಮಾತಿನಲ್ಲಿಮೃದುಮನದಲ್ಲಿಪ್ರೀತಿಯುಳ್ಳವನುಉತ್ತಮನೆಂಬರುನೋಡಾ । ಜಗದವರುಮಾತಿನಲ್ಲಿಮಂತ್ರಮನದಲ್ಲಿಮಹಾನುಭವ । ಆತ್ಮದಲ್ಲಿಖ್ಯಾತಿಬೆಳಗುತಿರ್ಪರ್ದಾತ। ಉತ್ತಮನಲ್ಲಿಮಧ್ಯಮನಲ್ಲಿಕನಿಷ್ಟನಲ್ಲನೋಡಾ ಅಖಂಡೇಶ್ವರನಿಮ್ಮಶರಣರು ॥೨೩॥ ತಾನುವಳ್ಳಿಯವನಾದರೆ ತನಗೆಯೂರುವಳ್ಳಿಯವನಾಗಿರ್ಪರು। ತಾಹೀನನಾದರೆತನಗೆಸರ್ವರುಹೀನರಾಗಿರ್ಪರು । ತಾನುವಳ್ಳಿಯವನಾಗಿತನಗೆಸರ್ವರುಹೀನರಾಗಿರ್ಪರು।ತಾನುವಳ್ಳಿಯವನಾಗಿತನಗೆಸರ್ವರುಹೀನರಾದರೆ ॥ ಅದುತನ್ನಪೂರ್ವಕರ್ಮ। ತಾಹೀನನಾಗಿತನಗೆಸರ್ವರುವಳ್ಳಿಯವರಾದರೆ । ಆದುತನ್ನದೈವದಬಲವುನೋಡಾಅಖಂಡೇಶ್ವರಾ॥೨೪॥ತೊತ್ತಿಗೆವಡತೆಯಬಲವಯ್ಯಾ । ಬಡವಗೆಬಲ್ಲಿದನಬಲವಯ್ಯಾ। ಅರಳಿಗೆಅರಶಿನಬಲವಯ್ಯಾ । ನಮಗೆ ಗುರುಲಿಂಗಜಂಗಮದಬಲವಯ್ಯಾ ಅಖಂಡೇಶ್ವರಾ ॥೨೫॥ ಕಾಯುವದಂತಿಸಿಕಂಡಕಂಡ ಕ್ಷೇತ್ರಗಳಿಗೆಹೋಗಿ । ತೊಳಲಿಬಳಲಿದರಿಲ್ಲ । ಜಪತಪಹೋಮನೇಮನಿತ್ಯಂಗಳಮಾಡಿದರಿಲ್ಲ। ಅಶನವ್ಯಸನದವಿಷಯವಿಕಾರಂಗಳತೊರೆದರುಮಿಲ್ಲಅಖಂಡೇಶ್ವರಾನೀವುವಲ್ಲಿದು ಸಲಹದನತಾಯೇನುಮಾಡಿದಡೇನುಫಲವಿಲ್ಲವಯ್ಯಾ ॥೨೬॥ ಕನಕಕಾಮಿನಿಭೂಮಿಗಾಗಿಡಹೊದಾಡಿಕೆಟ್ಟಿತು ಜಗವೆಲ್ಲಾಯಿದುಂಡುಕೇಳಿ ನೀನ್ಯಾತಕ್ಕೆ ಇಚ್ಛೈಸುವೆಯುಲೆಹುಚ್ಚುಮನವೆ। ಹಗಲುಕಂಡಕಮರಿಯಮಿರಳುಮರಿಯಲ್ಯಾಕೆ।ಬೀಳುವರೆಮುಲೆಮರುಳುಮನವೆ । ಕೆಡುಬ್ಯಾಡ ನಿನಗೊಂದುಪಾಯ ಹೇಳುವೆಕೇಳು । ಯುಲೆಮನವೆಜಗದಲಿಂಗಭೋಗವನುಹೋಗದೆಜಗದೀಶ ಅಖಂಡೇಶ್ವರನನರೆನಂಬಿದೆಯಾದರೆ ನಿನಗೆಜನನಮರಣಂಗಳಳು ವಿರಹಿತವಾಗಿ ಪರಮಪದವುದೊರಕೊಂಬುವದುನೋಡಾ ಎಲೆಮನವೆ ॥೨೭॥ ಅಂದೊಬ್ಬದೇವ । ಹಿಂದೊಬ್ಬದೇವನೆಂಬಸಂದೇಹಗೊಳಬ್ಯಾಡಎಲೆಮನವೆ ॥ ಅಂದುಕೈಲಾಸದಲ್ಲಿಮನುಮುನಿದೇವದಾನವರಿಂದೆವಾಲಗವಕೆವಂಬತೇವ ಇಂದುಯನ್ನಕರಸ್ಥಲದಲ್ಲಿಯಿದ್ದಾನೆ ! ಇಲ್ಲಿಯೆನೋಡು ಎಲೆಮನವೆ। ಅಂಟುಅರವತ್ತು

ಮೂರುಪುರಾತನರಿಗೊಲಿದು । ಶಂಭುಪುರಕೊಯಿದದೇವಯಿಂದುಯನ್ನಕರಸ್ಥಲದಲ್ಲಿಇದಾನೆ ॥ ಇಲ್ಲಿಯೆನೋಡುಎಲೆಮನವೆ । ಅಂದುಬಸವಣ್ಣಮೊದಲಾದಅಸಂಖ್ಯಾತಮಹಾಪ್ರಮಥಗಣಂಗಳತಂನೊಳಗೆ ಗರ್ಭೀಕರಿಸಿದೇವ ಇಂದೆನ್ನ ಕರಸ್ಥಲದಲ್ಲಿಯಿದ್ದಾನೆನೋಡುಎಲೆಮನವೆ । ಎನ್ನಕರಸ್ಥಲದಲ್ಲಿ ಮೂರ್ತಿಗೊಂಡುಬೆಸಗುವಪರಶಿವನನಂಬಿನಿಶ್ಚೈಸಿಕೊಂಡರೆ। ದೇವನಿಂದಲಾದನಮ್ಮಅಖಂಡೇಶ್ವರಲಿಂಗದಲ್ಲಿ ನಿನ್ನಿಂದಾಒಟ್ಟುಸುಖಿಗಳ್ಯಾರೂಯಿಲ್ಲಕಾಳ್ಗಾಎಲೆಮನವೆ ॥೨೮॥ ನೋಡಬಾರದುಪರಸತಿಯರ । ಮಾಡಬಾರದು ಸುಗುಣವಿಲ್ಲದವರಿಗೆಉಪಚಾರವ। ಬೇಡಬಾರದುಸದ್ಭಕ್ತರಲ್ಲದವರನ್ನ।ಹಾಡಬಾರದುಶಿವನಲ್ಲದನದೈವಂಗಳಅದೇನುಕಾರಣವೆಂದರೆ। ಮುಂದೆಭವಬಂಧನತೊಡಕ್ಕುಂಟಾದಕಾರಣಅಖಂಡೇಶ್ವರನಿಮ್ಮನಲ್ಲದೆ ॥ ಅನ್ಯವನರಿಯದಂತೆಮಾಡಯ್ಯಾನಿಮ್ಮಬೇಡಿಕೊಂಬೆನು ॥೨೯॥ ನೋಟಭಂಗಪರಸತಿಯರ । ಬ್ಯಾಟಭಂಗಪರಸತಿಯರ। ಕೂಟಭಂಗಪರಸತಿಯರ । ಅದೇನುಕಾರಣವೆಂದರೆ। ಮುಂದೆನರಿಯದೆಕೆಟ್ಟರು ।ಕೀಚಕರಾವಣ ।ದೇವೇಂದ್ರರು ಇನ್ನುಬಯಸುವವರಿಗೆಅದೇವಿಧಿನೋಡಾಅಖಂಡೇಶ್ವರಾ ॥೩೦॥ಗುರುವಚನಪ್ರಮಾಣದಿಂದಹಿಡಿದವ್ರತನೇಮಂಗಳಕವತನಕಾಬಿಡದಿರಬೇಕು ।ಆಣಾವಮಾಯಾಮಲಕಾರ್ಮಿಕಮಲವೆಂಬ ಮಲತ್ರಯಂಗಳ ಬಲೆಯಹರಿಯಬೇಕು। ಹರುಹುಆಚಾರಸತ್ಕ್ರಿಯಾಸಂಪಂನನಾಗಿರಬೇಕು । ಇಂತಿ ಮರ್ಮವನರಿಯದೆ । ದೇವಭಕ್ತರೆಸಿಕೊಂಬಭವಪಾತಕರಯನಗೊಮ್ಮೆತೋರದಿರಯ್ಯಾಅಖಂಡೇಶ್ವರಾ ॥೩೧॥ ನಿಮ್ಮನೋಡಿನೋಡಿಯನ್ನಕಂಗಳುದಣಿಯವಯ್ಯಾ । ನಿಮ್ಮಹಾಡಿಹಾಡಿಎನ್ನಜಿಹ್ವೆದಣಿಯದಯ್ಯಾ ।ನಿಮ್ಮಪೂಜೆಯಮಾಡಿಮಾಡಿಎನ್ನಕೈಗಳುದಣಿಯವಯ್ಯಾ ಅಖಂಡೇಶ್ವರಾ ॥೩೨॥ ಎನ್ನಜನನಮರಣಂಗಳುಜಾರಿಹೋದವಯ್ಯಾ । ನಿಮನೆನಹಿನ ಬಲದಿಂದ ಎನ್ನಕಾಲಕಲ್ಪಿತಗಳುಕರಗಿಹೋದವಯ್ಯಾ ।ನಿಮ್ಮನೆನಹಿನಬಲದಿಂದಎನ್ನಪೂರ್ಣಪಾಪಗಳುಸಲ್ಲಟವಾಗಿಹೋದವಯ್ಯಾ ನಿಮ್ಮನೆನಹಿನಬಲದಿಂದ ಎನ್ನಪಂಚೇಂದ್ರಿಯಸಪ್ತವ್ಯಸನಂಗಳೆಂಬ ವರ್ನಾಶ್ರಮಕುಲ । ಗೋತ್ರಂಗಳೆಂಬತನ್ನಪೂರ್ವಾಶ್ರಯದಪದ್ಧತೆಯುಮರೆಯಾದಿತು । ಇಂದಿಗೆಬೇಕುನಾಳಿಗೆಬೇಕೆಂಬ ಆಶೆಯಕಳೆಯಬೇಕು । ಅಘಂಗಳೆಲ್ಲಾನಷ್ಟವಾದವಯ್ಯಾನಿಮ್ಮನೆನಹಿನಬಲದಿಂದ । ಯನ್ನತನುಕರಣೇಂದ್ರಿಯಂಗಳೆಲ್ಲಾತರಹರವಾದವಯ್ಯಾನಿಮ್ಮನೆನಹಿನಬಲದಿಂದ । ಎನ್ನ ಮನಃಪ್ರಾಣಭಾವಂಗಳೆಲ್ಲಾಬರಿದಾದವಯ್ಯಾ। ನಿಮ್ಮನೆನಹಿನಬಲದಿಂದ ಅಖಂಡೇಶ್ವರಾ ॥೩೩॥ ಎ

ನ್ನ ಕರಕಮಲಮಧ್ಯದಲ್ಲಿಪರಮಶಿವಲಿಂಗತುಂಬಿ । ಆಲಿಂಗಮಧ್ಯದಲ್ಲಿಕಂಗಳುತುಂಬಿ।ಆಕಂಗಳಮಧ್ಯಮನವುತುಂಬಿ।ಆಮನದಮಧ್ಯದಲ್ಲಿಭಾವವುತುಂಬಿ । ಪರಶಿವನಾಗಿದ್ದೆನಯ್ಯಾನಿಮ್ಮೊಳಗೆನಾನುಅಖಂಡೇಶ್ವರಾ ॥೩೪॥ ಪ್ರಾಣಲಿಂಗವನುಂಗಿತೊ । ಲಿಂಗವುಪ್ರಾಣವನುಂಗಿತೊಯೆಂದರಿಯೆನಯ್ಯಾ । ಭಾವವುಲಿಂಗದಲ್ಲಿತುಂಬಿತೊಲಿಂಗವುಭಾವದಲ್ಲಿತುಂಬಿತೊಎಂದರಿಯೆನಯ್ಯಾ ಮನವುಲಿಂಗದಲ್ಲಿಮುಳುಗಿತೊ ।ಲಿಂಗವುಮನದಲ್ಲಿಮುಳುಗಿತೊ । ಎಂದರಿಯೆನಯ್ಯಾ ಅಖಂಡೇಶ್ವರಾ ನಿಮ್ಮ ಕೂಡುವ ವಿಕಳಾವಸ್ಥೆಯಲ್ಲಿ ಯೇನೇನು ಅರಿಯೆನಯ್ಯಾ ॥ ೩೫ ॥ ಘನತರಇಷ್ಟಲಿಂಗದಲ್ಲಿ ಅನಿಮಿಷದೃಷ್ಟಿಬಲಿದುಮನಕರಗಿತನುವುಬ್ಬಿಹೃದಯಕಮಲಪಸರಿಸಿಸರ್ವಾಂಗವುಗುಡಿಗಟ್ಟಿ ಕಂಗಳಲ್ಲಿಪರಿಣಾಮಜಲವುಕ್ಕಿಹೊರಸೂಸುತ್ತಾ ಪರಮಸಾಕ್ಷ್ಯಯಂತೆ ಚಿತ್ರದರುಹಿನಂತೆ । ಪರಬ್ರಹ್ಮಲಿಂಗದತಬೆರದು ।ಪರವಶಗೊಂಡಿರ್ದಮಹಾಶರಣರತೋರಿಸಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ ॥ ೩೬ ॥ ಬೇಕೆಂಬುವನಲ್ಲವಯ್ಯಾನಿಮ್ಮಶರಣ ॥ಬ್ಯಾಡೆಂಬುವನಲ್ಲವಯ್ಯಾನಿಮ್ಮಶರಣ । ಲೋಕದ ನಡತೆಯಂತೆ ನಡಿಯೆನಯ್ಯಾನಿಮ್ಮಶರಣ । ಲೋಕದ ನುಡಿಯಂತೆ ನುಡಿಯೆನಯ್ಯಾನಿಮ್ಮಶರಣ । ಕಾಕುಸಟೆ ಕುಟಿಲಕುಹಕವ್ಯಾಪಾರವ ಹೊದ್ದೆಯನಯ್ಯಾ ನಿಮ್ಮಶರಣಅಖಂಡೇಶ್ವರಾ ॥ ೩೭ ॥ ನಾನಾವರ್ಣದಕಾಷ್ಟವ ಸುಟ್ಟಲ್ಲಿ । ಏಕವರ್ಣದ ಬೂದಿಯಪ್ಪುದಲ್ಲದೆ । ಅಲ್ಲಿಕಾಷ್ಟದಕುಲವುಂಟೆ । ತೊಟ್ಟುಬಿಟ್ಟಹಣ್ಣುಮರಳಿತೊಟ್ಟಹತ್ತಬಲ್ಲದೇನಯ್ಯಾ । ಕಾಷ್ಟಜನ್ಮದಲ್ಲಿಹುಟ್ಟಿದವನಾದರುಆಗಲಿ । ನೆಟ್ಟನೆಶ್ರೀಗುರುಕಾರುಣ್ಯವಪಡೆದು । ನಿಷ್ಟಲಿಂಗಸಂಬಂಧಿಯಾಗಿ ಆಚಾರಕ್ರಿಯಾಸಂಪನ್ನನಾದ ಶರಣನ ಪೂರ್ವಜಾತಿಪೂರ್ವನೆಂತೆಂದುದೂಷಿಸುವ ಪಾತಕರಬಾಯಲ್ಲಿ । ಬಾಲಹುಳಸುರಿಯದೆಮಾಣ್ಬವೇಹೇಳಾ ಅಖಂಡೇಶ್ವರಾ ॥ ೩೮ ॥ ನೀರು ಗಟ್ಟಿಗೊಂಡು ಮುತ್ತಪ್ಪುದಲ್ಲದೆ । ಮುತ್ತು ನೀರಪ್ಪುದೇನಯ್ಯಾ । ಹಾಲುಹೆಪ್ಪುಗೊಂಡು ತುಪ್ಪಆಗುವದಲ್ಲದೆ । ತುಪ್ಪಹಾಲಪ್ಪುದೇನಯ್ಯಾ । ಹೀನಜಾತಿಯಲ್ಲಿ ಜನಿಸಿದನರನುಗುರುವಿನಕಾರುಣ್ಯದಿಂದ ।ಶಿವಜಾತಾಭರಣನಾದಬಳಿಕಾ । ಮರಳಿನರನಪ್ಪನೇನಯ್ಯಾ ಅಖಂಡೇಶ್ವರಾ ॥ ೩೯ ॥ ಜಾತಿ ಪೂರ್ವಾಶ್ರಯಂಗಳಕಳೆದು । ಸೂತಕಪಾತಕಂಗಳನರಿದು । ಅಂಗತ್ರಯಂಗಳಲ್ಲಿಮುಸುಕಿರ್ದಅಜ್ಞಾನತಾಮಸವಜರಿದು । ಅಂಗತ್ರಯಂಗಳ ಸಂಗಸಮರಸವನರಿದ ಶರಣಂಗೆ । ವುತ್ಪತ್ತಿಸ್ಥಿತಿಪ್ರಳಯಂಗಳನೋಡಾ । ಅದೇನುಕಾರಣವೆಂದಡೆ ।

ಇಷ್ಟಲಿಂಗದಲ್ಲಿಉತ್ಪತ್ಯ। ಪ್ರಾಣಲಿಂಗದಲ್ಲಿರಕ್ಷಣ್ಯ। ಭಾವಲಿಂಗದಲ್ಲಿ ಬಯ
ಲನೆಯ್ದಿದಶರಣಂಗೆ। ಹುಟ್ಟುಹೊಂದುಗಳು ನಷ್ಟವಾದವಯ್ಯಾಅಖಂಡೇ
ಶ್ವರಾ ॥ ಎನ್ನಜದನಸೂತಕಹೋಯಿತುಶ್ರೀಗುರುವಿನಪ್ರಸಾದಯಲ್ಲಿ। ಪಾ
ದಪದ್ಮದಲ್ಲಜನಿಸಿದವನಾಗಿ ಯೆನ್ನಜಾತಿಸೂತಕಹೋಯಿತು। ಆಚಾರಲಿಂ
ಗಸಂಬಂಧದಿಂದಯೆನ್ನ ಕುಲಸೂತಕಹೋಯಿತು। ಶಿವನಲ್ಲದೆ ಅನ್ಯವನರಿ
ಯನಾಗಿಎನ್ನ ಫಲಸೂತಕಹೋಯಿತು। ಜೀವಭಾವವಿಲ್ಲವಾಗಿ ಎನ್ನಮ
ನದಸೂತಕಹೋಯಿತು। ಎನ್ನಕೈಯ್ಯಸೂತಕ ಹೋಯಿತಯ್ಯಾನಿಮ್ಮ
ಪೂಜಿಸಿ। ಎನ್ನಕಿವಿಗಳಸೂತಕಹೋಯಿತಯ್ಯ ನಿಮ್ಮಕೀರ್ತನೆಗಳ ಕೇ
ಳಿಕೇಳಿ। ಎನ್ನಜಿಹ್ವೆಯಸೂತಕಹೋಯಿತಯ್ಯಾನಿಮ್ಮಪ್ರಸಾದವ ಸವಿ
ದು। ಇಂತಿಸರ್ವಸೂತಕಗಳಹರಿಹರಿದುಪೂರ್ವಕಲ್ಪಿತಗಳಮೀರಿನಿನ್ನೊ
ಳಗೆನಿಕ್ಷಿತನಿಜವಾಸಿಯಾಗಿದ್ದೇನಯ್ಯಾಅಖಂಡೇಶ್ವರಾ ॥ ೪೧ ॥ ಆಚಾರವಿ
ಚಾರವೆಂದರಿಯದೆ ಅಂತರಂಗಬಹಿರಂಗವೆಂದರಿಯರು। ಸತ್ಕ್ರಿಯಾಸಮ್ಯ
ಜ್ಞಾನವೆಂದರಿಯರು। ಕಾಯಜೀವದಕರ್ಮಕತ್ತಲೆಯಲ್ಲಿಬಿದ್ದಕಾರಣ। ಮ
ದನಕರ್ಕಶದಿಂದ ಹೊಡದಾಡಿಹೊತ್ತುಗಳೆದು ಹೊಲಬುದಪ್ಪಿಸತ್ತು ಹೋ
ಗುವವ್ಯರ್ಥಜೀವಿಗಳ। ಭಕ್ತಮಾಹೇಶ್ವರರೆಂದಡೆಭವಹಿಂಗದಯ್ಯಾ ಅಖಂ
ಡೇಶ್ವರಾ ॥ ೪೨ ॥ ನುಡಿಯನುಡಿಯಲಾಗದು। ನಮ್ಮಯನುಡಿ ಯಿಲ್ಲದವ
ರೊಡನೆ। ನುಡಿಯಲಾಗದುನುಡಿಯಲಾಗದು। ನಮ್ಮನಡೆಯಿಲ್ಲದವರೊಡನೆ
ನುಡಿಯಲಾಗದುನುಡಿಯಲಾಗದು। ದಯಗುಣವಿಲ್ಲದವರೊಡನೆ। ನುಡಿಯ
ಲಾಗದುನುಡಿಯಲಾಗದು। ಭಕ್ತಿಯಿಲ್ಲದವರೊಡನೆ। ನುಡಿಯಲಾಗದುನು
ಡಿಯಲಾಗದು। ಸ್ವಯಜ್ಞಾನವಿಲ್ಲದವರೊಡನೆ। ಶಿವಾನುಭಾವವ। ಅದೇನು
ಕಾರಣವೆಂದರೆ। ತನ್ನಅರುಹಿಂಗೆಹಾಗಿ। ಮಹಾಪರಿಣಾಮಕೆಡುವದು। ಇ
ದುಕಾರಣಕಡುಪಾತಕಜಡಜೀವಿಗಳೊಡನೆಲಕ್ಷಕ್ಕೊಂದು। ಕೋಟಿಗೊಂ
ದುವ್ಯಾಳ್ಯವಾದರು ನುಡಿಯಲಾಗದಯ್ಯಾ ಅಖಂಡೇಶ್ವರಾ ॥ ೪೩ ॥ ಇಷ್ಟ
ಲಿಂಗಪ್ರಾಣಲಿಂಗವೆಂದರಿಯದೆ ಭಿನ್ನವಿಟ್ಟುನುಡಿದಭ್ರಾಂತರಮಾತುಕೇಳ
ಲಾಗದಯ್ಯಾ। ಅದೇನುಕಾರಣವೆಂದಡೆ। ತಿಳಿದುಪ್ಪಗಟ್ಟಿಗೊಂಡುಹೆತ್ತುಪ್ಪ
ವಾದಂತೆ। ನಿರಾಕಾರಪರಬ್ರಹ್ಮವಸಾಕಾರಗೊಳಿಸಿಶ್ರೀಗುರುಸ್ವಾಮಿ ಕರ
ಸ್ಥಳಕ್ಕೆ। ಇಷ್ಟಲಿಂಗವೆಂದುಹೇಳಿಕೊಟ್ಟಬಳಿಕ। ಆಲಿಂಗದಲ್ಲಿನಿಷ್ಟೆಬಲಿಯ
ಲು। ಬಾಹ್ಯಕರಣಂಗಳುತರಹರವಾಗಿಆಲಿಂಗದಚಿತ್ಕಳೆದೃಷ್ಟಿಸೂತ್ರದಿಂ
ದೆ। ಅಂತರಂಗಕ್ಕೆವೇದಿಸಿಪ್ರಾಣಲಿಂಗವೆನಿಸುವದು। ಸ್ಫಟಿಕದಘಟದಲ್ಲಿರಿ

ಸಿದಜ್ಯೋತಿಯಂತೆಹೊರವಳಗೆತೋರುತಿರ್ಪುದು । ಒಂದೇಲಿಂಗವೆಂದರಿಯ ದೆಭ್ರಾಂತಜ್ಞಾನದಿಂದ।ಅಂತರಂಗದಲ್ಲಿಬೇರೆಪ್ರಾಣಲಿಂಗವುಂಟೆಂದುಇಷ್ಟಲಿಂ ಗದಲ್ಲಿ ಅವಿಶ್ವಾಸವಮಾಡುವ । ಭ್ರಷ್ಟಭವಿಗಳಮುಖವ ನೋಡಲಾಗದ ಯ್ಯಾಅಖಂಡೇಶ್ವರಾ ॥ ೪೪ ॥ ಕಾಷ್ಠದಲ್ಲಿಅಗ್ನಿಉಂಟೆಂದಡೆ । ಆಕಾಷ್ಟದ ರೂಪನುಡಲರಿಯದುನೋಡಾ ॥ ಆದೇಹಮಧ್ಯದಲ್ಲಿಪರವಸ್ತು ವುಂಟೆಂದು ಆದೇಹದಜಡಭಾವವುಪರಿಯದುನೋಡಾ। ಅದೆಂತೆಂದಡೆ । ಕಾಷ್ಟದಮಧ್ಯ ದಲ್ಲಿಅಡಗಿರ್ದ್ದಾವುಂದಾಗ್ನಿಯುಮಥನದಿಂದೆ । ಬಹಿಷ್ಕರಿಸಿಆಕಾಷ್ಟವಸುಡು ವಂತೆದೇಹಮಧ್ಯದಲ್ಲಡಗಿರ್ದಪರವಸ್ತುವನ್ನುಶ್ರೀಗುರುಸ್ವಾಮಿತನ್ನಕ್ರಿ ಯಾಶಕ್ತಿಯುಮಥನದಿಂದೆ । ಬಹಿಷ್ಕರಿಸಿಬಹಿರಂಗದಮೇಲೆ ಇಷ್ಟಲಿಂಗವಾ ಗಿಧರಿಸಲು । ಆಇಷ್ಟಲಿಂಗಸತ್ಕ್ರಿಯಾಪೂಜೆಯಿರಿದಸ್ಥೂಲಾಂಗದಕರ್ಮ ಗುಣಧರ್ಮಂಗಳೆಲ್ಲಾನಷ್ಟವಾಗಿ ಆಲಿಂಗಚಿತ್ಕಳೆಯುಸರ್ವಾಂಗಕ್ಕೆ ವೇಧಿ ಸಿ । ಅಂತರಂಗವಂದಾಗಿ ಆತ್ಮನ ಅಹಂಮಮತೆಕೆಟ್ಟು । ಶಿಖಿಕರ್ಪೂರಸಂ ಯೋಗದಂತೆಪರತತ್ವವನೊಡಗೂಡುವಮಹಾತ್ಮಂಗೆ ನಿರವಯವನಿರುವದ ಲ್ಲದೆ ।ಬರಿದೆವಣವಾಗ್ವಾದದ್ವೈತದಿಂದೆಅಹಂಪರಬ್ರಹ್ಮವೆಂದುನುಡಿಯು ದೇಹಪ್ರಾಣಂಗಳಲ್ಲಿಪ್ರಕೃತಿವರ್ತನೆಯಲ್ಲಿನಡಿದುನಿತ್ಯರಾದೆವೆಂಬುನದೆಲ್ಲಾ ಭವಾಂಬುಧಿಯಲ್ಲಿ ಬಿದ್ದುಮುಳುಗುತ್ತೇಳುತ್ತಾ ತಡಿಯಶೇರಲರಿಯದೆ ಕೆ ಟ್ಟುಹೋದರುನೋಡಾಅಖಂಡೇಶ್ವರಾ ॥೪೭॥ ಪರಾತ್ಪರವಾದ ಪರಶಿವಪರ ಬ್ರಹ್ಮವನೊಡಗೂಡುವ । ಅವಿರಳಸಮರಸಭಕ್ತಿಯಿಲ್ಲದೆ।ನಾನುಬ್ರಹ್ಮತಾ ನುಬ್ರಹ್ಮವೆಂದುಪರಬ್ರಹ್ಮದನಿಲವನರಿಯದೆಕೆಟ್ಟುಹೋದರುನೋಡಾ ಅ ಖಂಡೇಶ್ವರಾ ॥೪೬॥ ಹಲವು ಕೆಲಬರುಅದೆಂತೆಂದರೆ। ಅಹಂಬ್ರಹ್ಮವೆಂದು ನುಡಿದಮುನಿಮುನಿಗಳೆಲ್ಲಾಮರುಳರುನೋಡಾ । ಇದನರಿತುಹಂಮನಳಿದು ಹೆಂಮೆ ಹಿರಿಯತನವನೀಗಿ । ಪರಬ್ರಹ್ಮವನೊಡಗೂಡಿ ಸುಖಿಯಾಗಿರ್ಪರ ಯ್ಯಾ ಅಖಂಡೇಶ್ವರಾ ॥೪೭॥ ಕ್ರಿಯವೇಅಧಿಕವೆಂಬದೊಡ್ಡಸಿದ್ಧಾಂತಿಗಳ ಮಾತುಸೊಗಸದಯ್ಯಾಯೆನಗೆ । ಅದೇನುಕಾರಣವೆಂದರೆ । ಆವುದಾನೊಂ ದುಪಕ್ಷಿವುಭಯರೆಕ್ಕೆಯಿಂದ ಗಗನಕ್ಕೆಹಾರುವಂತೆ ಅಂತರಂಗದಲ್ಲಿ ಸಮ್ಯ ಜ್ಞಾನಬಹಿರಂಗದಲ್ಲಿ । ಶಿವಸತ್ಕ್ರಿಯಾಸನ್ನಿಹಿತವಿಲ್ಲದೆ ಪರವಸ್ತುವಕೊಡ ಬಾರದಾಗಿ । ಇದುಕಾರಣಸತ್ಕ್ರಿಯಾಸಮ್ಯಜ್ಞಾನಿರಾದಸಂಪನ್ನರಾದಶರಣ ರತೋರಿಸಿಬದುಕಿಸಯ್ಯಎನ್ನಅಖಂಡೇಶ್ವರಾ ॥೪೮॥ ಶೈವಸಿದ್ಧಾಂತಿಗಳಬ ದ್ಧಭವಿಗಳಮುಖವನೋಡಲಾಗದು । ಅದೇನುಕಾರಣವೆಂದರೆ ।ಸಾಂಗೋ ಪಾಂಗಶುದ್ಧಶರೀರಿಯಾಗಿ ॥ ವುನ್ನತಾಸನಗದ್ದುಗಿಯಲ್ಲಿಕುಳ್ಳಿರ್ದುಕಣ್ಣು

ಮುಚ್ಚಿ । ಅಂತರಂಗದಲ್ಲಿಪರಮಾತ್ಮನಕಳೆಯಧ್ಯಾನಿಸಿಮನಸಿನಲ್ಲಿಕಟ್ಟಿ । ದೃಷ್ಟಿಗೆತಂದುಆದೃಷ್ಟಿಯಿಂದಪುಷ್ಪದಲ್ಲಿತುಂಬಿ । ಮೃತ್ತಿಕೆ । ಪಾಷಾಣಾದಿನಾನಾತೆರದಲಿಂಗಾಕಾರಮೂರ್ತಿಯಲ್ಲಿ ಸ್ಥಾಪಿಸುವರೆಂದುಭಾವಿಸಿ ಜಲಗಂಧಾಕ್ಷತೆ ಪುಷ್ಪದೀಪಧೂಪತಾಂಬೂಲಾದಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳನೆಮಾಡಿ । ಆಪೂಜಾಂತದಲ್ಲಿ ಎನ್ನಮಲಿನವಾದದೇಹದಲ್ಲಿ । ನೀನ್ನಿರ್ಮಲವಾದವಸ್ತುವು ನೀನುಯಿರಬೇಡಹೋಗೆಂದು ತನ್ನ ದೇವರಭಾವಿ ಕೆರೆ । ಹೊಳೆ । ಹಳ್ಳಗಳಲ್ಲಿಹಾಕಿ ಬಿಸಾಡುವಶಿವದ್ರೋಹಿಗೆ । ಕುಂಭೆಸಿಪಾತಕನಾಯಕನರಕತಪ್ಪದಯ್ಯಾ ಅಖಂಡೇಶ್ವರಾ ॥೪೯॥ ಷಡೇಂದ್ರಿ ಸಪ್ತಧಾತುಗಳಲ್ಲಿ ಸಪ್ತ ಭ್ರಮೆಗಳಲ್ಲಿತುಂಬಿಪ್ಪದುವೊಂದೇವಸ್ತುವು । ಪರವಸ್ತುವೆಂದರಿಯರು । ವಳಹೊರಗೆತೆರಹಿಲ್ಲದೆಪರಿಪೂರ್ಣವಾಗಿರ್ಪುದುವಂದೇಪರವಸ್ತುವೆಂದರಿಯರು । ವಿಪರೀತಭ್ರಾಂತಜ್ಞಾನದಿಂದೆವೊಳಗೆಬೇರೆ ಪರವಸ್ತುವುಂಟೆಂದು ಕಣ್ಣುಮುಚ್ಚಿ ನೋಡಿಕಳವಳಗೊಂಡು ಪ್ರಳಯಕ್ಕೊಳಗಾಗಿ ಹೋದರು । ಅವರಕಂಡುನಗುತಿರ್ಪನಯ್ಯನಮ್ಮ ಅಖಂಡೇಶ್ವರಾ ॥೫೦॥ ಜಗದವೊಳಹೊರಗೆಲ್ಲತೆರಹಿಲ್ಲದೆ ಸಂಭ್ರಮಿಸಿ ತುಂಬಿರ್ಪಪರವಸ್ತುವನು ॥ ಆಧ್ಯಾನಿಸೆಬಿಡುವದಕ್ಕೆ ಇಂಬುಂಟೇನೊಮರುಳೆ । ಇಂತೀಅಖಂಡವಾದಪರಿಪೂರ್ಣಪರಬ್ರಹ್ಮನನಿಲವನರಿಯದೆಖಂಡಿತಬುದ್ಧಿಯಿಂದೆಕಲ್ಪಿಸಿ । ಪೂಜಿಸಿ ಕರ್ಮದಬಲೆಯಲ್ಲಿಸಿಲ್ಕಿ ಕಾಲಂಗೆಗುರಿಯಾಗಿ ಹೋದವರಕಂಡು ಬೆರಗಾದೆನಯ್ಯಾಅಖಂಡೇಶ್ವರ ॥ ೫೧ ॥ ಕುರುಹುಂಟೆಮರಳಿಲಿಂಗಕ್ಕೆತೆರಹುಂಟೆ ಮರಳಿಲಿಂಗಕ್ಕೆ ಎಲ್ಲೆಡೆಯೊಳುಪರಿಪೂರ್ಣವಾದಪರಾತ್ಪರ ಲಿಂಗವನಿಲವನರಿಯದೆ । ಹುಸಿಯಕಲ್ಪಿಸಿ । ಹುಸಿಯನೆಪೂಜಿಸಿ । ಹುಸಿಯಫಲಪದವನುಂಡು ಹುಸಿಯಾಗಿಹೋದವರಕಂಡುನಗುತಿರ್ದನಯ್ಯನಮ್ಮ ಅಖಂಡೇಶ್ವರಾ ॥೫೨ ಅಷ್ಟಮೂರ್ತಿಗಳುದೇವರೆಂಬಭ್ರಷ್ಟಭವಿಗಳಮಾತುಕೇಳಲಾಗದು । ಅದೇನುಕಾರಣವೆಂದ । ಪೃಥ್ವಿದೇವರಾದರೆ ಅಪ್ಪುವಿನಪ್ರಳಯದಲ್ಲಿ ಕರಗುವದೆ ಅಪ್ಪುದೇವರಾದರೆಅಗ್ನಿಯಪ್ರಳಯದಲ್ಲಿ ಅರಿತುಹೋಗುವದೇ । ಅಗ್ನಿದೇವರಾದರೆ ವಾಯುವಿನಪ್ರಳಯದಲ್ಲಿ ಹಾರಿಹೋಗುವದೆ । ವಾಯುದೇವರಾದರೆ ಆಕಾಶದಪ್ರಳಯದಲ್ಲಿಲಯವಪ್ಪದೆ । ಆಕಾಶದೇವರಾದಡೆಆತ್ಮನಲ್ಲಿಅಡಗಿಹೋಗುವದೆ । ಆತ್ಮದೇವರಾದಡೆ । ದ್ವಂದ್ವಕರ್ಮಂಗಳನ್ನು ಜನನಮರಣಂಗಳಲ್ಲಿಬಂಧನಪಡುವನೆ । ಚಂದ್ರಸೂರ್ಯರುದೇವರಾದರೆ ಭವಬಂಧನದಲ್ಲಿಸಿಲ್ಕಿ ತೊಳಲಿಬಳಲುವರೆಇದುಕಾರಣ ॥ ಅಷ್ಟತನುಗಳನೆಂತುದೇವರೆಂಬೆನು । ದೇವದೇವಮಹಾದೇವಾ ಮಹಾಮಹಿಮಯೆಂನೊಡೆಯ ಅಖಂಡೇಶ್ವ

ರನೊಬ್ಬನೇದೇವನಲ್ಲದೆವುಳಿದವೆಲ್ಲಾ ಪುಸಿಯೆಂಬೆನೋಡಾ ||೫೩|| ಶರಭರಿಣತಶಿವನು | ಶಿವಭರಿತಶರಣನೆಂಬುದೇಸಹಜವಲ್ಲದೆ | ಶಿವಭರಿತಜಗವು ಜಗಭರಿತಶಿವನೆಂಬುವದೇಹುಸಿಯುನೋಡಾ |ಅದೇನುಕಾರಣವೆಂದರೆ,—ಜಗಕ್ಕೆ ಪ್ರಳಯಮಹಾಪ್ರಳಯಗಳುಂಟು ಇದುಕಾರಣಪ್ರಳಯಾ ತೀತಶರಣಸನ್ನಿಹಿತನಮ್ಮಅಖಂಡೇಶ್ವರಾ ||೫೪|| ಪೃಥ್ವಿದೇವರೆಂಬೆನೆದೇವರಲ್ಲ | ಅಪ್ಪುದೇವರೆಂಬೆನೆದೇವರಲ್ಲ | ಅಗ್ನಿ ದೇವರೆಂಬೆನೆದೇವರಲ್ಲ| ವಾಯುದೇವರೆಂಬೆನೆದೇವರಲ್ಲ|ಆಕಾಶದೇವರೆಂಬೆನೆಆಕಾಶದೇವರಲ್ಲ | ಆತ್ಮದೇವರೆಂಬೆನೆ ಆತ್ಮದೇವರಲ್ಲ|ಚಂದ್ರಸೂರ್ಯರುದೇವರೆಂಬೆನೆಚಂದ್ರಸೂರ್ಯರುದೇವರಲ್ಲ | ಅದೆಂತೆಂದರೆ,— ಪೃಥ್ವಿಶಿವನಸದ್ಯೋಜಾತಮುಖದಲ್ಲಿಪುಟ್ಟಿತು | ಅಪ್ಪುಶಿವನ ಅಘೋರಮುಖದಲ್ಲಿಪುಟ್ಟಿತು||ಅಗ್ನಿಶಿವನವಾಮದೇವಮುಖದಲ್ಲಿಪುಟ್ಟಿತು|ವಾಯುಶಿವನತತ್ಪುರುಷಮುಖದಿಂದಪುಟ್ಟಿತು | ಆಕಾಶಶಿವನಈಶಾನ್ಯಮುಖದಿಂದಪುಟ್ಟಿತು | ಆತ್ಮಶಿವನಗೌಪ್ಯಮುಖದಿಂದಪುಟ್ಟಿತು|ಚಂದ್ರಶಿವನಮನಸ್ಸಿನಲ್ಲಿಪುಟ್ಟಿತು | ಇಂತೀಅಷ್ಟತನುಗಳಿಗೆ ಹುಟ್ಟುಹೊಂದವುಂಟಾದಕಾರಣಇವುಕಲ್ಪಿತವೆಂದುಕಳೆದುನೀನೊಬ್ಬನೇ ನಿತ್ಯಪರಿಪೂರ್ಣನೆಂದು ತಿಳಿದುವುಳಿದೆನಯ್ಯಾಅಖಂಡೇಶ್ವರಾ||೫೫|| ಸರ್ವಗತಾಶಿವನೆಂದುಹೇಳುವಮರುಳುಮಾನವರಮಾತುಕೇಳಲಾಗದು | ಅವರಮುಖವನೋಡಲಾಗದು | ಅದೆಂತೆಂದೊಡೆ,— ಸರ್ವಜೀವರುವನಿತಾದಿವಿಷಯಪ್ರಪಂಚದಲಿಮಗ್ನನಾಗಿಇರುವನೇ| ಶಿವನುಸರ್ವಜೀವರುಗಳಂತೆಪುಣ್ಯಪಾಪಸುಖದುಃಖಸ್ವರ್ಗನರಕಗಳೆಂಬದ್ವಂದ್ವಕರ್ಮಂಗಳಲ್ಲಿ ಹೊಂದಿರ್ಪನೇಶಿವನು | ಸರ್ವಜೀವರುಗಳಂತೆ ಉತ್ಪತ್ತಿಸ್ಥಿತಿ ಪ್ರಳಯಬಂಧನಂಗಳೆಂಬ ಕಷ್ಟಕ್ಕೆಸಿಲ್ಕಿ ಹೊದಕುಳಿಗೊಂಬನೇಶಿವನು | ಇಂತೀಭೇದವನರಿಯದೆಸರ್ವಗತಶಿವನೆಂದುನುಡಿವಕಡುಪಾತಕರಜಡಜೀವಿಗಳಯನಗೊಮ್ಮೆತೋರದಿರಯ್ಯ ಅಖಂಡೇಶ್ವರಾ ||೫೬|| ಪೃಥ್ವಿಆಕಾಶಮಧ್ಯದಲ್ಲಿಉತ್ಪತ್ಯವಾದಸಕಲಪ್ರಾಣಿಗಳೂಶಿವನೆಂದುಭಾವಿಸಲಾಗದು | ಅದೇನುಕಾರಣವೆಂದರೆ,—ಸಕಲಪ್ರಾಣಿಗಳೂಶಿವನಾದರೆಮದಮತ್ಸರಂಗಳಿಂದ|ಒಂದನೊಂದುತಂದುತಿಂದುತೇಗಲ್ಯಾತಕೋ|ಆಸಕಲಪ್ರಾಣಿಗಳುಶಿವನಾದರೆ ಜಾತಿವರ್ಣಾಶ್ರಮಕುಲಗೋತ್ರನಾಮಸೀಮೆಗೆಬಂದುಬಿಟ್ಟಿಗೆಬತಿದಾಡಲ್ಯಾತಕೋ | ಸಕಲಪ್ರಾಣಿಗಳುಶಿವನಾದಡೆಮಲತ್ರಯಂಗಳಬಲೆಯಲ್ಲಿಸಿಲ್ಕಿ | ಭವಭವದಲ್ಲಿತೊಳಲಿಬಳಲಿಬೆಂಡಾಗಲ್ಯಾತಕೋ | ಇದುಕಾರಣಅನಾದಿಸಂಸಿದ್ಧಪರಮಲಿಂಗಜಂಗಮವೇಶಿವನಲ್ಲದೆ|ಭವಬಂಧನಂಗಳಲ್ಲಿಸತ್ತುಹುಟ್ಟುವ ಸಕಲಪ್ರಾಣಿಗಳುಶಿವನೆಂದಡೆ || ಅಘೋರನರಕತಪ

ದಯ್ಯಾಅಖಂಡೇಶ್ವರಾ ॥ ಸರ್ವಜಗದಲ್ಲಿಯುಶಿವನಿಲ್ಲವೆಂಬಡೆ। ಆಜಂಗಮವುಶಿವನೆಂದಲ್ಲದೆಬೇರೆತೋರಲರಿಯದಾಗಿ। ಪದ್ಮಪತ್ರಜಲದಂತೆವಿಶ್ವಪರಿಪೂರ್ಣನಾಗಿ ಹೊಂದಿಹೊಂದದಿರ್ದನುನೋಡಯ್ಯಾ ಅಖಂಡೇಶ್ವರಾ ॥ ೧೮ ॥ ಜಗವಾಗಬಲ್ಲನೋಡಿರೋನಮ್ಮಶಿವನು। ಜಗವಾಗಲರಿಯದೆಯಿರಬಲ್ಲನೋಡಿರೋನಮ್ಮಶಿವನು। ಅನಂತಕೋಟಿಬ್ರಹ್ಮಾಂಡಗಳನಿಮಿಷದಲ್ಲಿಹುಟ್ಟಿಸಬಲ್ಲನೋಡಿರೋನಮ್ಮಶಿವನು। ಇಂತಪ್ಪಶ್ರೀಮಹಾದೇವನಘನವನರಿಯದೆಬೇರೆದೇವರುಗಳುಂಟೆಂದು ಬೊಗಳುವಭವಭಾರಿಗಳಮುಖವನೋಡಲಾಗದಯ್ಯಾಅಖಂಡೇಶ್ವರಾ ॥ ೧೯ ॥ ಹರಿಹರರಿಗೆಸರಿಯೆಂಬರೆ ನಿಜಪರವಾದಿಗಳಿರಾನೀವುಕೇಳಿರೋ। ಹರಿಹತ್ತುಭವದಲ್ಲಿಹುಟ್ಟಿಬಂದುನಮ್ಮಹರಶ್ರೀಚರಣವನರ್ಚಿಸಿವರವಪಡೆದನಲ್ಲದೆ।ನಮ್ಮಹರನುಆವಭವದಲ್ಲಿಹುಟ್ಟಿಆವದೇವರಪೂಜಿಸಿ ಆವಫಲವಪಡೆದನುಬಲ್ಲರೆಹೇಳಿರೋ।ಇದನರಿಯದೆಹರಿಹರಗೆಸರಿಯೆಂಬಪರವಾದಿಗಳಬಾಯಕೆರವಿನಟ್ಟೆಯಲ್ಲಿಹೊಯಿದಡಲ್ಲದೆಯನ್ನಸಿಟ್ಟುಮಾಣದುನೋಡಾ ಅಖಂಡೇಶ್ವರಾ ॥೨೦॥ ಅಜಹರಿಸುರಾಸುರರೆಲ್ಲಾಆವದೇವರನರ್ಚಿಸಿಫಲಪದವಪಡದವರುತಿಳಿದುನೋಡಿರೋ।ಮಾಯಾವಾದಿಗಳುನೀವೆಲ್ಲಾ। ಮನುಮುನಿಗಳುಮರಳುಗೊಂಡವರುಅಷ್ಟದಿಕ್ಪಾಲಕರೆಲ್ಲಾ ಆವದೇವನ ಶ್ರೀಚರಣವರ್ಚಿಸಿ ಫಲಪದವಪಡದರು ತಿಳಿದುನೋಡಿರೋ। ಮಾಯಾವಾದಿಗಳುನೀವೆಲ್ಲಾ। ವೇದಶಾಸ್ತ್ರಗಮಪುರಾಣಆವದೇವನಹೊಗಳುತಿರ್ಪವೋತಿಳಿದುನೋಡಿರೊ । ಮಾಯಾವಾದಿಗಳುನೀವೆಲ್ಲಾ ಇಂತೀಭೇದವಕಂಡು ಕೇಳಿತಿಳಿದು ನಂಬಲರಿಯರೆದಿಂಡೆಯತನದ ಡಂಬಕಮೂಳರಂತಿರಲಿ। ಕಾಕುದೇವರಗಂಡಲೋಕದಸರಿಯತೋರುವೆಮೂಜಗವರಿವಂತೆಕಟ್ಟಿದೆನುಬಿರಿದಾ।ಶಿವಾಚಾರವೆಂದೆಬ್ಯಾರೆಘನವಿಲ್ಲವೆಂದು ಕಟ್ಟಿದೆನುಬಿರಿದಾ॥ಶಿವಶರಣರಲ್ಲದೆಬೇರೆಹಿರಿಯರಿಲ್ಲವೆಂದುಕಟ್ಟಿದೆನುಬಿರಿದಾಅಖಂಡೇಶ್ವರಾನೀಸಾಕ್ಷಿಯಾಗಿ ॥ ಯನ್ನನಡೆನುಡಿಚೈತನ್ಯವನೀವೆಂದರಿದೆ। ಯಂನವಡಲೇಂದ್ರಿಯಂಗಳೆಲ್ಲಾನಿಮ್ಮವೆಂದರಿದ್ದೆ। ನೀವುಭಕ್ತದೇಹನೆಂದುನಂಬಿದಬಳಿಕಯನ್ನಕಡಿಗೆಮಾಕದಿರಯ್ಯಾಅಖಂಡೇಶ್ವರಾ ನಿಮ್ಮಧರ್ಮ ನಿಮ್ಮಧರ್ಮ ॥೨೧॥ ಒಂಮೆಜ್ಞಾನಿಯನಿಸಿ ಒಂಮೆಅಜ್ಞಾನಿಯನಿಸಿ।ಒಂಮೆವಿಕಳನೆನಿಸಿಒಂಮೆನಿಷ್ಕರುಣಿಯೆನಿಸಿ।ಒಂಮೆಶಾಂತನೆನಿಸಿಒಮ್ಮೆಭ್ರಾಂತನೆನಿಸಿನಾನಾತೆರದಿಂದೆಯನ್ನಹುಸಿಥಿಟವಾಡಿಕಾಡದಿರಯ್ಯಾನೀವುದಯಾ।ನಿಧಿಯೆಂದುನಂಬಿದೆ।ನಿಮ್ಮಕರುಣಕಟಾಕ್ಷದಿಂದೆನೋಡಿ ಸಲಹಯ್ಯಾಯನ್ನ ಅಖಂಡೇಶ್ವರಾ ॥೨೨॥ ಸುಖಬಂದಲ್ಲಿನಿಮ್ಮಹಾಡಿಹರಸುವೆನಯ್ಯಾ।ದುಃಖಬಂದಲ್ಲಿನಿಂ

ಮಕೋಪಿಸುವೆನಯ್ಯಾ।ಅದೇನುಕಾರಣವೆಂದಡೆ । ಎನ್ನಸುಖದುಃಖಗಳಿಗೆ ನೀವೆಆಧಾರವಾದಕಾರಣನಿಮ್ಮನ್ನೇಹಾಡುವೆ ನಿಮ್ಮನ್ನೇಹೊಗಳುವೆ । ನಿಮ್ಮಮುಂದೆನ್ನವಡಲ ಕಡುದುಃಖಂಗಳನೆಲ್ಲಾ ನಾನೀಡಾಮೆವೆನಯ್ಯಾ ಅಖಂಡೇಶ್ವರಾ ‖೬೪‖ ತಂದೆನೀವೆಯುಯ್ಯಾಎನಗೆ । ತಾಯಿನೀವೆಯುಯ್ಯಾ ಎನಗೆ ಗತಿನೀವೆಯುಯ್ಯಾಎನಗೆ ‖ ಸಕಲಚೈತನ್ಯವು ನೀವೆಯುಯ್ಯಾ ಎನಗೆ। ಅಖಂಡೇಶ್ವರಾನೀನೆನಗೆದಿಕ್ಕಲ್ಲದೆ ಮತ್ತಾರುಯಿಲ್ಲವಯ್ಯಾ ಎನಗೆ ‖೬೫‖ ದರ್ಪಣವೊಳಗಣರೂಪಿಗೆ । ಚೇಷ್ಟಾಭಾವವು ವುಂಟೆಂದಡೆ ನೋಡುವಾತನ ಚೇತನದಿಂದಲ್ಲದೆಬೇರೆಚೇತನವುಂಟೆನಯ್ಯಾ । ಎನ್ನಕರಣೇಂದ್ರಿಯಂಗಳು ಚೇಷ್ಟಿಸಿದವೆಂಡಡೆನಿಮ್ಮಚೇತನದಿಂದಲ್ಲದೆಬೇರೆ ಅವಕ್ಕೆ ಚೇತನವುಂಟೇನಯ್ಯಾ। ಸೂತ್ರದಬೊಂಬೆಯಂತೆನೀವಾಡಿಸಿದಡೆನಾನಾಡುತಿರ್ದೆನಯ್ಯಾ ಅಖಂಡೇಶ್ವರಾ ‖೬೬‖ ಆಚಾರಲಿಂಗವಾಗಿಬಂದೆನ್ನಘ್ರಾಣೇಂದ್ರಿಯ ನೊಳಕೊಂಡಿರ್ಪಿರಯ್ಯಾನೀವು ।ಗುರುಲಿಂಗವಾಗಿಬಂದೆನ್ನಜಿಹ್ವೇಂದ್ರಿಯನೊಳಕೊಂಡಿರ್ಪಿರಯ್ಯಾನೀವು । ಶಿವಲಿಂಗವಾಗಿಬಂದೆನ್ನನಯನೇಂದ್ರಿಯನೊಳಕೊಂಡಿರ್ಪಿರಯ್ಯಾನೀವು । ಜಂಗಮಲಿಂಗವಾಗಿಬಂದೆನತ್ವಗೇಂದ್ರಿಯನೊಳಕೊಂಡಿರ್ಪಿರಯ್ಯಾನೀವು । ಪ್ರಸಾದಲಿಂಗವಾಗಿಬಂದೆನ್ನಶ್ರೋತ್ರೇಂದ್ರಿಯನೊಳಕೊಂಡಿರ್ಪಿರಯ್ಯಾನೀವು ।ಮಹಾಲಿಂಗವಾಗಿಬಂದೆನ್ನಹೃದಯೇಂದ್ರಿಯನೊಳಕೊಂಡಿರ್ಪಿರಯ್ಯಾನೀವು । ಇಷ್ಟಲಿಂಗವಾಗಿಬಂದೆನ್ನತನುವನೊಳಕೊಂಡಿರ್ಪಿರಯ್ಯಾ ನೀವು । ಪ್ರಾಣಲಿಂಗವಾಗಿ ಬಂದೆನ್ನ ಮನವನೊಳಕೊಂಡಿರ್ಪಿರಯ್ಯಾನೀವು । ಯಿಂತೆನ್ನ ದಶೇಂದ್ರಿಯಂಗಳು ನಿಮ್ಮಲ್ಲಿಸಮರಸವಾದವಾಗಿನಾನುನೀನೆಂಬುವದಕ್ಕೆ ಭಿನ್ನವಿಲ್ಲವಯ್ಯಾಅಖಂಡೇಶ್ವರಾ ‖ ಅರಿದರಿದುಗುರುಭಕ್ತಿನೆಲೆ ಗೊಂಬುವದಯ್ಯಾ । ಅರಿದರಿದುಲಿಂಗಭಕ್ತಿನೆಲೆಗೊಂಬುವದಯ್ಯಾ । ಅರಿದರಿದು ಜಂಗಮಭಕ್ತಿ ನೆಲೆಗೊಂಬುವದಯ್ಯಾ ಇಂತೀತ್ರಿವಿಧವುನೆಲೆಗೊಂಡು ಭಿನ್ನಭಾವವಳಿದಸದ್ಭಕ್ತನು ಮೂರುಲೋಕದೊಳಗೆಅಪೂರ್ವವಯ್ಯಾ ಅಖಂಡೇಶ್ವರಾ ‖೬೮‖ ಜಂಗಮದಲ್ಲಿರೂಪುಕುರುಹನೋಡಲಾಗದಯ್ಯಾ । ಜಂಗಮದಲ್ಲಿ ವುತ್ತಮಮಧ್ಯಮವ ನೋಡಲಾಗದಯ್ಯಾ।ಜಂಗಮದಲ್ಲಿಕುಲಛಲವನೋಡಲಾಗದಯ್ಯಾ । ಜಂಗಮದಲ್ಲಿವ್ರಾಚುನೀಚುಮಾಡಲಾಗದಯ್ಯಾ ।ಜಂಗಮದಲ್ಲಿಹಿರಿದುಕಿರಿದುಮಾಡುವಭಕ್ತಂಗೆಭವಹಿಂಗದಯ್ಯಾಅಖಂಡೇಶ್ವರಾ ‖೬೯‖ ಲಿಂಗಭಕ್ತನಾದಡೆತನ್ನಂಗದಲ್ಲಿ ಧರಿಸಿಹಿಂಗದಯ್ಯಾವಲ್ಲದೆಅನ್ಯವನರಿಯದಿರಬೇಕು ।ಲಿಂಗದಲ್ಲಿನೈಷ್ಟಿಕಭಾವವಳವಡಿಸಿಕೊಂಡಿರಬೇಕು।ಶ್ರೀಲಿಂಗವೇಪತಿ ।ತಾನೆಸತಿಯೆಂಬದೃಢಬುದ್ಧಿನಿ

ಕ್ಷೆಯುವಾಗಿರಬೇಕು। ಹೀಗಲ್ಲದೇತಂನದೇಹದಮೇಲಿರ್ಪಲಿಂಗವಸಾಮಾನ್ಯವ ಮಾಡಿಕಂಡದೇಗುಲದೊಳಗಣಕಲ್ಲಲಿಂಗವೇ ಅಹುದೆಂದುಪೂಜಿಸುವಗಾವಿಲಮೂಳಹೊಲೆಯರಮುಖವನೋಡಲಾಗದಯ್ಯಾಅಖಂಡೇಶ್ವರಾ ॥ ೨೦ ॥ ಶ್ರೀಗುರುಸ್ವಾಮಿಕರುಣಿಸಿ ಕೊಟ್ಟಯಿಷ್ಟ ಲಿಂಗವನ್ನು । ಉರದಲ್ಲಿಧರಿಸಿಕೊಂಡು। ಅದುದೇವರೆಂದುನಂಬದೆಧರೆಯಮೇಲೆಕಂಡಕಂಡದೇವರಕಂಡು । ಕಲ್ಪಿಸಿಹರಿದಾಡುವಭಂಡಮಾದಿಗರಭಕ್ತರೆಂದರೆ । ಅಘೋರನರಕ ತಪ್ಪದಯ್ಯಾಅಖಂಡೇಶ್ವರಾ ॥ ೨೧ ॥ ಸದ್ಭಕ್ತರಾದವರುಸ್ಥಾವರಲಿಂಗವಂಭಜನಯುಮಾಡಲಾಗದು । ಮನದಲ್ಲಿಸ್ಥಾವರಘನವೆಂದುನೆನೆಯಲಾಗದು । ಅದೇನುಕಾರಣವೆಂದರೆ,— ಆದಿಅನಾದಿಯಿಂದತತ್ತ್ವವಾದ ಮಹಾಘನವಸ್ತುವನ್ನು । ಶ್ರೀಗುರುಸ್ವಾಮಿಬೇದಿಸಿತಂದು । ಕೈಯಲ್ಲಿಇಷ್ಟಲಿಂಗವೆನಿಸಿಕರಸ್ಥಳಕ್ಕೆಕೊಟ್ಟಬಳಿಕ । ಆಲಿಂಗದಲ್ಲಿಸಕಲಕ್ಷೇತ್ರಗಳುಂಟೆಂದು । ಭಾವಿಸಿಮುಕ್ತಿಯುಪಡೆಯಲರಿಯದೆ ಖಂಡಿತಬುದ್ಧಿಯಿಂದೆ । ಬೇರೆಮುಕ್ತಿಯುಪಡೆವೆನೆಂದುಕಂಡಕಂಡತೀರ್ಥಕ್ಷೇತ್ರಂಗಳಿಗೆಹೆಯಾಡಿ । ತೊಳಲಿಬಳಲುವಭ್ರಷ್ಟಭವಿಗಳಿಗೆ ನರಕವೇಪ್ರಾಪ್ತಿಯಯ್ಯಾ ಅಖಂಡೇಶ್ವರಾ ॥ ೨೨ ॥ ಪರದೈವವಪೂಜಿಸುವಾತನುಸದ್ಭಕ್ತನೆ । ಅಲ್ಲಲ್ಲಾ । ಪರಸಮಯವ ಬಳಸುವಾತನಸದ್ಭಕ್ತನೇ । ಅಲ್ಲಲ್ಲಾ । ಪರಸ್ತ್ರೀಯರುಗಳ ನಪ್ಪುವಾತಸದ್ಭಕ್ತನೇ ಅಲ್ಲಲ್ಲಾ । ಪರರೊಡವೆಯುಅಪಹರಿಸಿಕೊಂಬಾತ ಸದ್ಭಕ್ತನೇಅಲ್ಲಲ್ಲಾ । ಇಂತೀದುರಾಚಾರದಲ್ಲಿನಡೆದು ದುಃಖಕ್ಕೀಡಾದಾಗಿ । ಹೋಗುವ ಕತ್ತೆಮೂಳೆಹೊಲೆಯರೇ ಸದ್ಭಕ್ತರೆಂದರೆಭವಹಿಂಗದಯ್ಯಾ ಅಖಂಡೇಶ್ವರಾ ॥ ೨೩ ॥ ಅನಂತಕೋಟಿಹೀನಭವಿಜನ್ಮವ ನೀಗಿಶಿವಜನ್ಮಕ್ಕೆಬಂದು । ಶ್ರೀಗುರುಕಾರುಣ್ಯವಪಡೆವದು । ಅದೇನುಕಾರಣವೆಂದಡೆ । ಹಿಂದಣಕ್ರಿಮಿಕೀಟಕಶುನಿಸೂಕರಜನ್ಮವಪ್ಪುದಾಗಿ । ಮುಂದೆಯುಚ್ಚರದಲ್ಲಿನಡೆಯಬೇಕು । ಯುಚ್ಚರತಪ್ಪಿಅರುಹುಮರೆಹಿನಿಂದೆಭವಿಸಂಗವಮಾಡುವಭಕ್ತನ । ವಿಧಿಯೆಂತಾಯಿತೆಂದಡೆ । ದೇವರಿಗೆಂತಾನೇಮಿಸಿನಾಡಿದಮಾಸಲೋಗರವ । ಶ್ವಾನಮುಟ್ಟಿದವಿಧಿಯುಂತಾಯಿತಯ್ಯಾಅಖಂಡೇಶ್ವರಾ ॥ ೨೪ ॥ ಮಾಡಲಾಗದುಭವಿಯುಂಸಂಸ್ಪರ್ಶವ । ನೋಡಲಾಗದುಭವಿಯುದೃಷ್ಟಿಯುಲಿಪೂರಿತವಾಗಿ । ಪಡೆಯಲಾಗದುಭವಿಯುಸಂಗಡಬಟ್ಟೆಯಲ್ಲಿ ಕುಳ್ಳಿರಲಾಗದುಭವಿಯು ಸಹಿತಗದ್ದುಗೆಯಲ್ಲಿ । ಶಯನವಮಾಡಲಾಗದು ಭವಿಯಿರ್ಪಹಾಸಿಗೆಯಲ್ಲಿ । ಭೋಜನವಮಾಡಲಾಗದುಭವಿಯುಕಾಣುವಂತೆ । ಅದೆಂತೆಂದಡೆ,—ಶ್ಲೋ ॥ ಆಸನೆ ಶಯನೆಯಾನೆ ಸಂಪರ್ಕೆಸಹಭೋಜನೆ । ಸಂಚರಂತಿ ಮಹಾಘೋರೆನರಕೆ

ಕಾಲಮುಕ್ಷಯಂ ॥ ೧ ॥ ಎಂದುದಾಗಿಇಂಥಾಭವಿಯ ಮಿಶ್ರವಮಾಡಿದಭಕ್ತ ನು ಚಂದ್ರಸೂರ್ಯರುಳ್ಳಪರಿಯಂತರ । ಮಹಾಘೋರ ನರಕದಕುಳಿಯಲ್ಲಿ ಬಿದ್ದು ॥ ಮುಳುಗುತೇಲುತ್ತತಡಿಯಕಶರಲರಿಯದೆ । ಭಾಧೆಪಡುತ್ತಾಯಿ ರ್ದರಯ್ಯಾಅಖಂಡೇಶ್ವರಾ ॥ ೩೫ ॥ ನೆರೆಹೊಲ್ಲದುರಾಚಾರಿಗಳ । ನೆರೆಹೊ ಲ್ಲಜಾರಚೋರರ । ನೆರೆಹೊಲ್ಲಬ್ರಹ್ಮಹತ್ಯಕಾರರ ॥ ನೆರೆಹೊಲ್ಲಸುರಿಯಭು ಜಂಗರ । ನೆರೆಹೊಲ್ಲಗುರುತಲ್ಪಕರ । ನೆರೆಹೊಲ್ಲಹುಸಿಯಡಂಬಕರ । ಅ ದೇನುಕಾರಣವೆಂದರೆ । ಬಿರುಗಾಳಿಯಸಂಗದಿಂದಜ್ಯೋತಿಯುಅಳಿದುಹೋ ಗುವಂತೆ । ಇಂತಪ್ಪಪಂಚಮಹಾಪಾತಕರನೋಡಲಾಗದಯ್ಯಾ ಅಖಂಡೇ ಶ್ವರಾ ॥ ೩೬ ॥ ಮಾಡಬಾರದುಮಾಡಬಾರದು ಗುಣಹೀನಮತಿಭ್ರಷ್ಟರಸಂ ಗವಮಾಡಬಾರದು ಮಾಡಬಾರದುಪಾಶಬದ್ಧಕ್ಲೇಶಜೀವರಸಂಗವ । ಮಾಡ ಬಾರದುಮಾಡಬಾರದುವ್ರುಸಿಡಂಬಕರಹುಸಿಪುಂಡರಸಂಗವಮಾಡಿದರೆ । ಭ ವದಲ್ಲಿಘಾಸಿಯಲ್ಲದೆಮುಕ್ತಿಯಡೆದೋರಿಯದಯ್ಯಾ ಅಖಂಡೇಶ್ವರಾ ॥ ೩೭ ॥ ಒಬ್ಬರನೊಬ್ಬರುಬಯ ಸತಿರ್ಪರುನೀವ್ರುಕೇಳಿರೊ । ಮನಮನತಾರ್ಕಣ್ಯ ವಾಗದವರಸಂಗವದ್ಯಾತರಸಂಗ । ಬುದ್ಧಿಬುದ್ಧಿಕೂಟಸ್ಥವಾಗದವರಸಂಗ ವದ್ಯಾತರಸಂಗ । ಸೀಲಸೀಲವಂದಾಗದವರಸಂಗವದ್ಯಾತರಸಂಗ । ಭಾವ ಭಾವವಂದಾಗದವರಸಂಗವದ್ಯಾತರಸಂಗ । ದುಃಸಂಗವಲ್ಲದೆ ಇಂತಪ್ಪದು ಸ್ಸಂಗಿಗಳಸಂದೋಹಕ್ಕೆಯಿಹಾಡುಮುಕ್ತಿಯಕೇಡುಕಂಡ್ಯಾಅಯ್ಯಾ ಅಖಂ ಡೇಶ್ವರಾ ॥ ೩೮ ॥ ತನ್ನತಾನರಿಯದೆಅನ್ಯರಗುಣಾವಗುಣಂಗಳಂತೆಣಿಸದೆಂ ನಕ್ಕರಶಿವಶರಣನೆಂತಪ್ಪನಯ್ಯಾಸಜೀನಸದ್ಭಾ ವಿಸತ್ಪುರುಷರುಗಳಮನ ನೋಯುವಂತೆಹಳಿದುಹಾಸ್ಯವಮಾಡಿದೂಷಿಸುವನಕ್ಕರ । ಶಿವಶರಣನೆಂತ ಪ್ಪನಯ್ಯಾ । ಗರ್ವಅಹಂಕಾರವೆಂಬಹಿರಿಯಪರ್ವತವನೇರಿ ಮರವೆಯಿಂದ ಮುಂದುಗಾಣದೆ । ಮನವಪ್ರಪಂಚದಲ್ಲಿನಡೆದು । ಜನನಮರಣಗಳೆಂಬಭ ವಜಾಲದಲ್ಲಿಶಿಲ್ಕಿದುಃಖಪಡುವನಕ್ಕರ । ಶಿವಶರಣನೆಂತಪ್ಪನಯ್ಯಾಅಖಂಡೇ ಶ್ವರಾ ॥ ೩೯ ॥ ತಂನಯುಡೆಯಲ್ಲಿ ನೊಣವನರಸುವ ಮರುಳುಮಾನವನಂತೆ ತಂನಂಗದಮನದ ಅವಗುಣಂಗಳತೊಲಗನೂಕಲರಿಯದೆಅನ್ಯರಲ್ಲಿಯಾವ ಗುಣಂಗಳಸಂಪಾದನೆಯಮಾಡುವ ಕುಂನಿಗಳ ಯನಗೊಂಮೆ. ತೋರದರ ಯ್ಯಾ ಅಖಂಡೇಶ್ವರಾ ॥ ೪೦ ॥ ತಂಮೊಳಗೆತಾವ್ರುತಿಳಿಯರುಪರವಾದಿಗಳು ಹೇಳಿದರುಗ್ರಹಿಸರು । ದುರ್ಬುದ್ಧಿಯಿಂವೆನಡೆವದುರಾಚಾರಿಗಳಯನಗೊ ಮ್ಮೆತೋರದಿರಯ್ಯಾ ಅಖಂಡೇಶ್ವರಾ ॥ ೪೧ ॥ ಸಲ್ಲರುಸಲ್ಲರಯ್ಯಾ ಶಿವಪಥ ಕ್ಕೆದುರ್ನೀತಿ ದುರ್ಗುಣಿಗಳು । ಸಲ್ಲರುಸಲ್ಲರಯ್ಯಾಶಿವಪಥಕ್ಕೆ ದುರ್ಬುದ್ಧಿ

ದುರ್ಭಾವಿಗಳು ಅಖಂಡೇಶ್ವರಾ ॥ ೮೨ ॥ ದಯವಿರಬೇಕುಸಕಲಪ್ರಾಣಿಗಳಲ್ಲಿ । ಭಯವಿರಬೇಕುಗುರುಲಿಂಗಜಂಗಮದಲ್ಲಿ । ಸ್ವಯವಿರಬೇಕುಸ್ವಕಲಗುಣಗಳಲ್ಲಿ । ನಯವಿರಬೇಕುನುಡಿಗಘಣದಲ್ಲಿ । ಇಂತೀಗುಣವಿಲ್ಲದವರಕಂಡರೆ ಸೊಗಸದಯ್ಯಾಎನಗೆ ಅಖಂಡೇಶ್ವರಾ ॥೮೩॥ ಬಲ್ಲವರಚೆಸಿಗೊಂಡರೆ । ಮೆಲ್ಲನಾರೈದುಮೆಲ್ಲನೆನುಡಿಯಬೇಕು । ಕಲ್ಲುಕಲ್ಲುತಾಕಿದಂತೆಸೊಲ್ಲುಬಿರಿಯಾದಡೆ। ನಿಲ್ಲನಿಲ್ಲವಯ್ಯಾಅಖಂಡೇಶ್ವರಾ ॥ ಬಲ್ಲರೆಬಲ್ಲರೆಂಬೆನುಗುರುಲಿಂಗಜಂಗಮವನೊಂದೆಯೆಂದು । ತಿಳಿದುನಡೆಯಬಲ್ಲಡೆಬಲ್ಲರೆಂಬೆನುಲಿಂಗಅಂಗದಕೀಲವನರಿದು ಕೂಡಬಲ್ಲರೆಬಲ್ಲರೆಂಬೆನು । ಸುಜ್ಞಾನದನಲೆಯಬಲ್ಲರೆ ಬಲ್ಲರೆಂಬೆನು । ನಿತ್ಯಾನಿತ್ಯವಬೇರ್ಪಡಿಸಿ । ನಿತ್ಯವಹಿಡಿಯಬಲ್ಲರೆಬಲ್ಲರೆಂಬೆನು । ಇಂತೀಬಲ್ಲವಿವೇಕಿಯಬಗೆಯನರಿಯದೆಸೊಲ್ಲುಸೊಲ್ಲಿಗೆವುತ್ತರಿಸಿ । ಕರಣಮಥನಕರ್ಕಶದಿಂದೆಹೋರುವವರು । ಸಲ್ಲರಯ್ಯನಿಜಪಥಕ್ಕೆಅಖಂಡೇಶ್ವರಾ ॥ ೮೪ ॥ ಅಲ್ಲದದುಹಿಡಿವನಲ್ಲಶರಣ । ಇಲ್ಲದದುನುಡಿವನಲ್ಲ ಶರಣ । ಗೆಲ್ಲುಸೋಲುವಿಗೆಹೋರುವನಲ್ಲಶರಣ ಬಲ್ಲೆನೆಂದು ತನ್ನಬಲ್ಲಿದತನವ ಯಲ್ಲರೊಡನೆ ಬೀರುವನಲ್ಲ, ಶರಣ ಅಖಂಡೇಶ್ವರಾ ॥ ೮೫ ॥ ಸತ್ಯವಚನವ ನುಡಿಯಬಲ್ಲರೆ ಶರಣನೆಂಬೆನು । ಸದಾಚಾರದಲ್ಲಿ ನಡೆಯಬಲ್ಲರೆಶರಣನೆಂಬೆನು । ವೃತ್ತಿಜ್ಞಾನವಳಿದುಚಿತ್ತದ ಕೊನೆಯಲ್ಲಿನಿತ್ಯಲಿಂಗದನೆನಹು । ತುಂಬಿಸುಳಿಯಬಲ್ಲರೆ ಅತನುಶರಣನೆಂಬೆನಯ್ಯಾ ಅಖಂಡೇಶ್ವರಾ ॥ ೮೬ ॥ ಹಾಲ ಹರವಿಯಮೇಲಿಮಜ್ಜಿಗೆಯತುಂಬಿ ಇರಿಸಿದಡೇನು ಹಪ್ಪಾಗಬಲ್ಲದೇನಯ್ಯಾ । ಸಂಮಿಶ್ರದಿಂದಲ್ಲದೆಅಂಗದಮೇಲೆಲಿಂಗಧಾರಣವಮಾಡಿದರೆ । ಸಂಗಸಮರಸವಾಗಬಲ್ಲದೇನಯ್ಯ । ಶಿವಜ್ಞಾನವಿಲ್ಲದೇಅಖಂಡೇಶ್ವರಾ ॥೮೮ ॥ ಕ್ರಿಯದಲ್ಲಿಬಲ್ಲವರು । ಜ್ಞಾನದಲ್ಲಿಸಂಪಂನರೆಂದುಹೇಳಲ್ಯಾತಕೊ । ನಡೆ ನುಡಿಯಲ್ಲಿಕಾಣಬಹುದು । ನಡೆನುಡಿಶುದ್ಧವಿಲ್ಲದವರಲ್ಲಿಯಿರಲೊಲ್ಲನುನೋಡಾಅಖಂಡೇಶ್ವರಾ ॥ ಕಟ್ಟದಬುತ್ತಿಯೆಷ್ಟು ದಿನಯಿರಲಾಪುದು । ಬಿತ್ತಿನಡೆಯದಲ್ಲಿ । ಅಮೃತವತುಂಬಿಯಿರಿಸಿದರೆ। ಎಷ್ಟೊತ್ತುಯಿರಲಾಪುದು ॥ ಖ್ಯಾತಿಯಭಕ್ತಿ ಕಲಿಕೆಯವಿರಕ್ತಿ । ಅದರಂತೆಕಡ್ಯಾಅಯ್ಯಾ । ಸದ್ಗುರುನಾಥವುದ್ಯೋಗಿಸಿಕೊಟ್ಟದ್ದುನಿಜವಲ್ಲದೆವುಳಿದದ್ದೆಲ್ಲ । ಅಬದ್ದವೆಂಬೆನಯ್ಯಾ ಅಖಂಡೇಶ್ವರಾ ॥೯೦॥ ವಲ್ಲೆವಲ್ಲೆನಯ್ಯಾಶಿವನಶಿವಾಚಾರವಿಲ್ಲದಭವಿಗಳ । ಶಿವಭಕ್ತಿಯಿಲ್ಲದವರವಲ್ಲೆನಯ್ಯಾ । ಶಿವನಶಿವಾಚಾರವಿಲ್ಲದವರಭವಪಾತಕರಶಿವಭಕ್ತಿಯಿಲ್ಲದವರವಲ್ಲೆವಲ್ಲೆನಯ್ಯಾ । ಶಿವಜ್ಞಾನವಿಲ್ಲದವರವಲ್ಲೆವಲ್ಲೆನಯ್ಯಾ। ಶಿವಭಾವವಿಲ್ಲದವರವಲ್ಲೆವಲ್ಲೆನಯ್ಯಾ ।ಶಿವಚಿಂತೆಯಿಲ್ಲದವರವಲ್ಲೆವಲ್ಲೆನಯ್ಯಾನಮ್ಮಅಖಂಡೇಶ್ವರಾಶಿವಾಚಾರವಿಲ್ಲದಭವಪಾತಕರಾಯಚ್ಚರವಿರಬೇಕು ನಡೆನು

ಡಿಯಲ್ಲಿ । ಮತ್ಸರವಿರಬೇಕುಭವಸಂಸಾರದಲ್ಲಿ । ಷುಚ್ಚನಾಗಿರಬೇಕುಜಗ
ದಕಂಣಿಗೆ ಮಡವುಲಿಚ್ಚೊತ್ತಿದಂತೆಯಿರಬೇಕು । ಲಿಂಗದಲ್ಲಿಇಂತೀಗುಣಗ
ಳುಳ್ಳಾತವೇಅಚ್ಚಶರಣರುನೋಡಾ ಅಖಂಡೇಶ್ವರಾ ॥೯೨॥ ಇಂದು ನಮ್ಮ
ಮನೆಯಲ್ಲಿದೇವರಹಬೀಗಹನವಾಯಿತು । ನಿಮಗೆಹೋಗಲಡಿಯಿಲ್ಲ । ಎಲೆ
ಕಾಮಕಲಾತಿಗಳಿರಾ । ಮುಂಬಾಗಿಲಲ್ಲಿಕಾಲಾಂತಕನೆಂಬದೇವರುಕುಳ್ಳಿರಿ
ಸಿಪೂಜಿಸುತಿರ್ಪರುಯಮ್ಮವರು । ಇಂತಿದನರಿಯದೆನೀವುನಿಂಮಹಳೆಯ
ವಿಶ್ವಾಸದಿಂದೆ । ಎಮ್ಮನೆಯಕಡೆಗೆಸುಳಿಯದಿರಿ । ಸುಳಿಯದಿರಿಯಿಂದರೆನ
ಮ್ಮನಾಳ್ವಅಖಂಡೇಶ್ವರಕಂಡದೇಶೀಳಿಬಿಸಾಡುವನುಹೋಗಿರಿ । ನಿಮ್ಮಬಾ
ಳುವೆಯನುಳುಹಿಕೊಂಡು॥೯೩॥ ಹೊಂನಿರಾಶೆಯುಳ್ಳನಕಾಪ್ರಾರಬ್ಧಕರ್ಮ
ಬಿಡದು । ಹೆಂಣಿನಾಶೆಯುಳ್ಳವನಕಾಸಂಚಿತಕರ್ಮಬಿಡದು । ಮಂಣಿನಾಶೆ
ಯುಳ್ಳನಕಾಆಗಾಮಿಕರ್ಮಬಿಡದು । ಇಂತೀತ್ರಿವಿಧಆಶೆಯುಳ್ಳನಕಾಭಕ್ತನ
ಲ್ಲ । ಮಹೇಶ್ವರನಲ್ಲ । ಪ್ರಸಾದಿಯಲ್ಲ । ಪ್ರಾಣಲಿಂಗಿಯಲ್ಲ । ಶರಣ
ನಲ್ಲ । ಐಕ್ಯನಲ್ಲ । ಅವನಿಗೆಮುಕ್ತಿಯೆಂಬುದು ಯೆಂದಿಗೂಯಿಲ್ಲ । ಅದೇ
ನುಕಾರಣವೆಂದಡೆ । ಆತ್ರಿವಿಧವೃತ್ತಿಮೂರ್ತಿಗಳಹಂಗಾದಕಾರಣಆತ್ರಿವಿ
ಧಮಲಗಳಬಲೆಯಹರಿದು । ಆತ್ರಿವಿಧಗಳಹಂಗಜರಿದು । ಲಿಂಗವೇಗೂಡಾ
ಗಿರ್ಪಮಹಾಶರಣರತೋರಿಸಿ ಬದುಕಿಸಯ್ಯಾ ಅಖಂಡೇಶ್ವರಾ ॥೯೪॥ ಶಿವ
ಶಿವಾಮಹಾಪ್ರಸಾದವುಎನ್ನಮನದಾಳಾಪವಅವಧರಿಸಯ್ಯಾ । ಸ್ವಾಮಿಯೆ
ನಗೆಹೊಂನುಬೇಡ ಎನಗೆಮಂಣುಬೇಡ । ಎನಗೆಹೆಂಣುಬೇಡ । ಎನಗೆಯಿಹ
ಲೋಕದಭೋಗಬೇಡ । ಎನಗೆಪರಲೋಕದಮೋಕ್ಷಬೇಡ । ಎನಗೆಆವಫಲ
ಪದವುಬೇಡ । ನಿಮ್ಮಶ್ರೀಚರಣವನೊಡಗೂಡುವಅವಿರಳಸಮರಸಭಕ್ತಿಹ
ದವಕರುಣಿಸಿಮತ್ತ್ಯದತ್ತಮರಳಿಬಾರದಂತೆಮಾಡಯ್ಯಾ ಅಖಂಡೇಶ್ವರಾ ॥
೯೫ ॥ ನಿಮ್ಮನಿಂತುಬೇಡಿಕೊಂಬೆನುಕುಚಿತ್ತವಳಿದು । ಸುಚಿತ್ತಆಚಾರಲಿಂ
ಗದಲ್ಲಿ । ಅವಿರಳಸಮರಸಸೌಖ್ಯವನರಿಯಬಲ್ಲದೆಭಕ್ತನೆಂಬೆನು । ಕುಚಿತ್ತ
ಕುಬುದ್ಧಿಯಳಿದುಸುಬುದ್ಧಿನೆಲೆಗೊಂಡುಗುರುಲಿಂಗದಲ್ಲಿ ಅವಿರಳಸಮರಸ
ಸೌಖ್ಯವನರಿಯಬಲ್ಲಡೆ ಮಾಹೇಶ್ವರನೆಂಬೆನು । ಅಹಂಕಾರವನಳಿದು ನಿರ
ಹಂಕಾರವನೆಲೆಗೊಂಡುಶಿವಪ್ರಸಾದಿಯೆಂಬೆನು । ಕಾಮನವಳಿದುಸುಮ
ನವನೆಲೆಗೊಂಡು । ಜಂಗಮಲಿಂಗದಲ್ಲಿ ಅವಿರಳಸಮರಸ ಸೌಖ್ಯವನರಿಯ
ಬಲ್ಲಡೆಪ್ರಾಣಲಿಂಗಿಯೆಂಬೆನು । ಅಜ್ಞಾನವಳಿದುಸುಜ್ಞಾನನೆಲೆಗೊಂಡುಪ್ರಸಾ
ದಲಿಂಗದಲ್ಲಿಅವಿರಳಸಮರಸಸೌಖ್ಯವನರಿಯಬಲ್ಲಡೆಶರಣನೆಂಬೆನು । ದುರ್ಭಾ
ವನಳಿದುಸದ್ಭಾವನೆಲೆಗೊಂಡುಮಹಾಲಿಂಗದಲ್ಲಿ ಅವಿರಳಸಮರಸಸೌಖ್ಯವ

ನರಿಯಬಲ್ಲಡೆ । ಐಶ್ವರ್ಯನೆಂಬೆನು । ಐಕ್ಯನೆಂಬೆನು । ಇಂತೀಷಡ್ವಿಧಬ್ರಹ್ಮವನೊಡಗೂಡಿದ ಮಹಾಶರಣರಪಾದಕ್ಕೆ ನಮೋನಮೋಯೆಂಬೆನಯ್ಯಾ ಅಖಂಡೇಶ್ವರಾ ॥ ಗುರುವಿಗಾದರು ಆಚಾರಸತ್ಕ್ರಿಯವೇಬೇಕು । ಜಂಗಮಕ್ಕಾದರುಅರುಹುಆಚಾರ ಸತ್ಕ್ರಿಯವೇಬೇಕು । ಅದೇನುಕಾರಣವೆಂದಡೆ ಅರುಹುಆಚಾರಸತ್ಕ್ರಿಯಾಸನ್ನಹಿತಶಿವನಾಗಿರ್ಪನು । ಅರುಹುಗೆಟ್ಟುಆಚಾರತಪ್ಪಿಸತ್ಕ್ರಿಯಾಹೀನರಾಗಿರ್ಪವರು ಸಲ್ಲರಯ್ಯಾ ಶಿವಪಥಕ್ಕೆ ಅಖಂಡೇಶ್ವರಾ ॥೯೮॥ ಆಣವಮಲ । ಮಾಯಾಮಲ । ಕಾರ್ಮಿಕಮಲನೆಂಬಮಲತ್ರಯಂಗಳಬಲೆಯಲ್ಲಿಬಿದ್ದು ಮೋಹಿಸ್ಯಾಡು ವಾತಗುರುವಲ್ಲಾ । ಜಂಗಮನಪ್ರಾಣೇಂದ್ರಿಯಗಳಲ್ಲಿಮುಸುಕಿದಜ್ಞಾನಅಹಂಕಾರದಲ್ಲಿ । ಮುಂದುಗಾಣದೆನಡೆಯುವಾತಜಂಗಮವಲ್ಲಾ । ಇವರಿಗೆದೇವರೆಂದು ಪೂಜಿಸುವಾತಭಕ್ತನಲ್ಲಾ । ಅರುಹುಆಚಾರಹೀನರಾದ । ಗುರುಲಿಂಗಜಂಗಮರ ದೇವರೆಂದು ಪೂಜಿಸುವಭಕ್ತಂಗೆ । ಭವರಾಟದಲ್ಲಿಸತ್ತುಸತ್ತುಹುಟ್ಟಿಹುಟ್ಟಿ ಸುತ್ತಿಸುತ್ತಿಯಿರ್ಪದುತಪ್ಪದುನೋಡಾಅಖಂಡೇಶ್ವರಾ ॥೯೯॥ ಇಷ್ಟಲಿಂಗದಲ್ಲಿತನುವಸವಿಯುದೆ । ಪ್ರಾಣಲಿಂಗದಲ್ಲಿಮನವಸವಿಯುದೆ। ಭಾವಲಿಂಗದಲ್ಲಿಧನವಸವಿಯುದೆಬರಿದೆನಾ । ಸುಜಂಗಮತಾನುಜಂಗಮವೆಂದುತಂಮ ಅಗಮ್ಯವವನುಡಿದುಕೊಂಡು । ಭಕ್ತಿಯುಮರತುಮುಕ್ತಿಶೂನ್ಯರಾಗಿ । ಮುಕ್ತಿಯಹೊಲಬುತಪ್ಪಿಆಣವಮಲಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳಕಚ್ಚಿ । ಮೂತ್ರದಕುಳಿಯಲ್ಲಿಮುಳಿಗ್ಯಾಡುತಿರ್ಪರಪ್ಪಾ ಮೂಳಹೊಲೆಯರನೋಡಲಾಗದಯ್ಯಾಅಖಂಡೇಶ್ವರಾ ॥೯೯॥ ಜಡೆಬೋಳುಲೋಚುದಿಗಂಬರವಧರಿಸಿಕೊಂಡುನಟಿಸುವಅಂಣಗಳಿರಾನಿಮ್ಮಜಡೆಯಾವದು । ಬೋಳಾವುದು ಲೋಚಾವುದು ದಿಗಂಬರವಾವುದು ನೀವುಬಲ್ಲರೆಹೇಳಿರೊ । ಅರಿಯದ್ದರೆನೀವುಕೇಳಿರೋ । ಭಕ್ತಿಜ್ಞಾನವೈರಾಗ್ಯದವುಂಜವೇಜಡೆತನುವಿನಾಶವುನಪವಾಸನಾಧರ್ಮವನಳಿದುದೇಬೋಳು । ಸಚರಾಚರಪ್ರಾಣಿಗಳಮೇಲಣಕರುಣವೇಲೋಚು । ಸೃಷ್ಟಿಸ್ಥಿತಿಪ್ರಳಯ ನಷ್ಟವಾದುದೆ ದಿಗಂಬರ । ಇಂತೀಭೇದವನರಿಯದೆತನುವಿನವೇಷವಧರಿಸಿ ಮನದಪ್ರಕೃತಿಯಲ್ಲಿ । ಹರಿದಾಡುವ ಬಿನಗುಜೀವಿಗಳಾದವರಯನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ ॥೧೦೦॥ ಷಡ್ವರ್ಗಂಗಳಸಡಲಿಸಿ ವಡಲುಪಾಧಿಕೆಯ ನುರುಹಿ । ಷಡುಸ್ಥಲದನುವನರಿದುಷಡ್ವಾಂಹಪಸಂಯೋಗವನರಿಯದೆ । ಪ್ರೊಡವಿಪ್ರಪಂಚದಲ್ಲಿಸಿಕ್ಕುಹೊಡಿದಾಡಿ ಹೊತ್ತುಗಳೆದುಮಡಿದುಹೋಗುವಕಡುಪಾತಕರ । ವಿರಕ್ತರೆನ್ನಬಹುದೇ ಅಯ್ಯಾಅಖಂಡೇಶ್ವರಾ ॥ ೧೦೧ ॥ವ

ಳಗೆಬೋಳಾಗಲರಿಯದೆ। ಹೊರಗೆವೇಷದಬೋಳಿನಲ್ಲಿಸುಳಿವಅಂಣಗಳಕಂಡುಬೆರಗಾದೆನಯ್ಯಾ। ಅದೇನುಕಾರಣವೆಂದರೆ । ತನುಕರಣೇಂದ್ರಿಯವಿಷಯಾದಿಗಳ। ಘನಮಹಾಲಿಂಗದಲ್ಲಿತರಹರವಾಗಿರಬಲ್ಲರೇಬೋಳು। ಹಂಮುಬಿಮ್ಮುಗರ್ವ ಅಹಂಕಾರವನಳಿದುದೇಬೋಳು। ಅನಂತಕೋಟಿಬ್ರಂಹ್ಮಾಂಡಗಳೊಳಹೊರಗೆ॥ ತುಂಬಿತೊಳಗಿಬೆಳಗುವ ಅಖಂಡ ಪರಿಪೂರ್ಣವಾದ ಪರಬ್ರಹ್ಮದಲ್ಲಿ ಭಾವತುಂಬಿರಬಲ್ಲಡೇಬೋಳು। ಇಂತೀಬೋಳಿನಘನವನರಿಯಾದೆ। ಗಂಡುದೊತ್ತಿನಂತ್ತೆ ಮಂಡೆಯಬೋಳಿಸಿಕೊಂಡು। ದಿಂಡೆಯತನದಿಂದ ಕಂಡಕಂಡವರಕೂಡೆಕೆಲದಾಡುತ್ತಾ। ಮದಮತ್ಸರಂಗಳುಮುಂದುಗೊಂಡುಚರಿಸುತ್ತಾ। ಬಂದಭವದಲ್ಲಿ ಮುಳುಗ್ಯಾಡುತಿರ್ಪವರೆಬೋಳುಗಳೆಲ್ಲಾ ಜಾಳುಬೋಳುನೋಡಾ ಅಖಂಡೇಶ್ವರಾ ॥೧೦೨॥ವಿರಕ್ತವಿರಕ್ತರೆಂದುನುಡಿದುಕೊಂಬ ಅಂಣಗಳೇ ನಿಮ್ಮವಿರಕ್ತಿಯ ಪರಿಯುಂತುಂಟುಹೇಳಿರೋ। ಅರಿಯದಿದ್ದರೆಕೇಳಿರೋ। ವಿರಕ್ತನಾದಬಳಿಕ ಅಶನವ್ಯಸನವಿಷಯವಿಕಾರಕ್ಕೆದೂರನಾಗಿರಬೇಕು। ವಿರಕ್ತನಾದಬಳಿಕಮುಂನಹೇರಿಸಿಬಿಟ್ಟ।ಹೊಂನ್ನುಹೆಂಣುಮಂಣುಯಂಬಿವರಳಿಮುಟ್ಟದಿರಬೇಕು ವಿರಕ್ತನಾದಬಳಿಕ ಆಶಪಾಶತಾಮಸವತೊಲಗಿಸಬೇಕು। ವಿರಕ್ತನಾದಬಳಿಕಅಷ್ಟಮದಅರಿಷಡ್ವರ್ಗಂಗಳನಷ್ಟಮಾಡಬೇಕು। ವಿರಕ್ತನಾದಬಳಿಕ ಹಂಮುಬಿಂಮುಗರ್ವಅಹಂಕಾರವಕಡೆಮೆಟ್ಟಿರಬೇಕು।ವಿರಕ್ತನಾದಬಳಿಕ ಅಂಗಮನ ಪ್ರಾಣೇಂದ್ರಿಯಗಳಲ್ಲಿ ಅಜ್ಞಾನಕತ್ತಲೆಯಕಳೆದು। ಸರ್ವಾವಸ್ಥೆಯಲ್ಲಿಲಿಂಗವರ್ಪಿಸಬೇಕು। ವಿರಕ್ತನಾದಬಳಿಕಸಂಕಲ್ಪವಿಕಲ್ಪವನಳಿದುಮನವುಮಹಾಲಿಂಗದಲ್ಲಿನಿಕ್ಷೇಪವಾಗಿರಬೇಕು। ವಿರಕ್ತನಾದಬಳಿಕ ಚಿಂತೆಭ್ರಾಂತಿಗಳಳಿದುಭಾವನಿರ್ಭಾವವಾಗಿಮಹಾಭವವು ನಿಜವಾಸವಾಗಿರಬೇಕು। ಇಷ್ಟುಳ್ಳರೆಪರಮವಿರಕ್ತನೆಂಬನು। ಪಾಶಾವಿರಹಿತನೆಂಬನು।ವೀರಮಾಹೇಶ್ವರನೆಂಬೆನು॥ ಹೀಗಲ್ಲದೆಭ್ರಾಂತಿಬುದ್ಧಿಯಿಂದೆ। ಪರರೊಡವೆಪರಸ್ತ್ರೀಪರದಾರಗಮನಗಳಲ್ಲಿ। ಹರಿದಾಡುವಂಥಾಸೂಳೆಯಮಕ್ಕಳವಿರಕ್ತರೆಂದರೆ ನಗುವರಯ್ಯಾನಮ್ಮಶರಣರು ಅಕಂಡೇಶ್ವರಾ ॥೧೦೩॥ ನಡವಗತಿಯಲ್ಲಿಲಿಂಗದನಡೆಯತುಂಬಿನಡೆಯಬಲ್ಲಡೆವಿರಕ್ತರೆಂಬೆನು। ನುಡಿಯಕೊನೆಯಲ್ಲಿಲಿಂಗವತುಂಬಿನುಡಿಯಬಲ್ಲರವಿರಕ್ತನೆಂಬೆನು,ಮನದಕೊನೆಯಲ್ಲಿಲಿಂಗದನೆನಹುತುಂಬಿನೆನೆಯಬಲ್ಲರೆವಿರಕ್ತನೆಂಬೆನು।ಭಾವದಕೊನೆಯಲ್ಲಿಲಿಂಗದಬೆಳಗುತುಂಬಿಸುಳಿಯಬಲ್ಲರೆ ವಿರಕ್ತನೆಂಬೆನು। ಇಂತೀಲಿಂಗಾಂಗಸಮರಸದಪರಮಸುಖವನರಿಯದೆ। ಅರುಹುಹೀನರಾಗಿಮರವರು। ಮುಂದುಗೊಂ

ಡುದುರಾಚಾರಗಳಲ್ಲಿವಡೆವಭವಭಾರಿಗಳ ಮುಖವನೋಡಲಾಗದಯ್ಯಾ ಅ
ಖಂಡೇಶ್ವರಾ ॥ ೧೦೪ ॥ ಈಶನವುರೆಯಲ್ಲಿವೇಶವೆಕೊಟ್ಟಾಡುವರೆಲ್ಲಾ ಜಂ
ಗವುವೇ । ಅಲ್ಲಲ್ಲಾ ಅದೇನುಕಾರಣವೆಂದರೆ—ತಮ್ಮನೀಲವು ತಾವುಕಾಣ
ರು । ಮುನ್ನಹೋದಪುರಾತನರಬಟ್ಟೆಯನರಿಯರು । ಭಿನ್ನಪ್ರಭೆಯಲ್ಲಿ
ಮನಮುಗ್ನರಾಗಿರ್ಪಭಿನ್ನಜೀವಿಗಳಂತಿರಲಿ । ಇನ್ನುನಿಜಜಂಗಮುದನೀವು
ಯಂತೆಂದಡೆ । ತಥ್ಯಮಿಥ್ಯರಾಗದ್ವೇಷವನಳಿದುಸ್ತುತಿನಿಂದಾ । ಸಮನಾ
ಗಿಯಿಹಪರದಗತಿಗೆಡಿಸಿ । ದ್ವೈತಾದ್ವೈತಂಗಳನೀಗಿ ।ಸತ್ಯಸದಾಚಾರವೇ
ಅಂಅವಾಗಿ । ಭಕ್ತಿಜ್ಞಾನವೈರಾಗ್ಯವೇಭೂಷಣಗಳಾಗಿಅಂಗಮನಪ್ರಾಣಾ
ದಿಸಕಲಕರಣೇಂದ್ರಿಯಂಗಳೆಲ್ಲಾಲಿಂಗದಲ್ಲಿನಿಕ್ಷೇಪವಾಗಿ । ಸ್ಪಟಿಕದಘಟ
ದಲ್ಲಿಜ್ಯೋತಿಯನಿರಿಸಿದಂತೆತನ್ನವಳಹೊರಗೆಮಹಾಜ್ಞಾನವೇತುಂಬಿ । ತೂ
ಳಗಿಬೆಳಗುತ್ತಾ । ವಡಲುಪಾಧಿಕೆಯನುರುಹಿಭಕ್ತಿಭಿಕ್ಷಾಂದೇಹಿಯೆಂದು
ಸುಳಿವಪರಮಜಂಗಮದಸುಳಹಿಲ್ಲ ।ಜಗತ್ಪಾವನಆತನನುಡಿಗಡಣವೆಲ್ಲಾಪ
ರಮಬೋದೆ।ಆತನದರ್ಸನಸ್ಪರ್ಶನವೆಲ್ಲಾಮಹಾಪುಣ್ಯವು। ಆತನಕೃಪೆಯಿಂ
ದನೋಡಿದನೋಟವೆಲ್ಲಾಸಕಲಪ್ರಾಣಿಗಳಿಗೆಸಾಲೋಕ್ಯಪದವು ।ಇಂತಪ್ಪ
ಮಹಾಘನಪರಾತ್ಪರವಾದಪರಮಜಂಗಮದಶ್ರೀಪಾದಕ್ಕೆ ದವೋನವೋ
ಎಂಬೆನಯ್ಯಾಅಖಂಡೇಶ್ವರಾ ॥ ೧೦೫ ॥ ಯನ್ನಗರ್ವಾಹಂಕಾರವ ಕೆಡಿಸ
ಯ್ಯಾ ।ಯನ್ನಅಂಗಮನಪ್ರಾಣಗಳಸುತ್ತಿದಆಶಾಪಾಶವೆಂಬತೊಡಕಿನಗಂ
ಟುಬಡಿಸಯ್ಯಾ । ಯನ್ನಸದಾಚಾರದಲ್ಲಿನಡಿಸಯ್ಯಾ । ಯನ್ನ ಪರಮಜೀ
ವಾನುಭಾವನುಡಿಸಯ್ಯಾ । ಯನಗೆಭಕ್ತಿಜ್ಞಾನವೈರಾಗ್ಯದಭೂಷಣವತೂ
ಡಿಸಿನಿಮ್ಮಕರುಣದಕಂದನೆಂದುಸಲಹಯ್ಯಾ ಅಖಂಡೇಶ್ವರಾ॥೧೦೬॥ ನಿತ್ಯ
ಲಿಂಗಾರ್ಚನೆಯಮಾಡಿಕೊಂಡುಸದ್ಭಕ್ತರನರಸುತ್ತಾ ಭಕ್ತಭಿಕ್ಷವಬೇಡುವೆ
ನೆಂದುಬರುವಾಗಗ್ರಾಮದಬಾಗಿಲಲ್ಲಿತಡಿಯುವಂತೆಮಾಡಯ್ಯಾಯನ್ನ । ಆ
ರಾರುತಡೆಯದಿದ್ದರೆ। ಆಗ್ರಾಮವಪೊಕ್ಕುಮನೆಮನೆಯತಿರುಗುವಂತೆಮಾ
ಡಯ್ಯಾಯನ್ನ । ಮನೆಮನೆಯತಿರುಗಿದಡೆ । ಯನ್ನಕಂಡು ಸರ್ವರು ಅ
ಡ್ಡಮೋಗೆಯನ್ನಿಕ್ಕುವಂತೆಮಾಡಯ್ಯಾಯನ್ನ । ಆಗ್ರಾಮವನುಳಿದು ಮ
ತ್ತೊಂದುಗ್ರಾಮವನರಿಸಿಕೊಂಡು ಬರುವಬಟ್ಟೆಯಲ್ಲಿ । ಕಳತಗಲಿ ತಲೆ
ಗುಂದಿಮುಖಬಾಡಿ ವಡಲೊಳಗಣ ಕ್ಷುಧಾಗ್ನಿಭಡಾಳಿಸಿ ತನುವಸುಟ್ಟು ನ
ಡವಗತಿಗೆಟ್ಟುಧ್ರವಗುಂದಿಧರೆಗೆಬೀಳುವಂತೆಮಾಡಯ್ಯಾಯನ್ನ । ಆಸವು
ಯದಲ್ಲಿ ನಿಮ್ಮನೆನಹುಮರೆದ। ಜಗದಭೋಗವ ನಾಶಮಾಡು ಅಖಂಡೇಶ್ವ
ರಾ । ನಿಮ್ಮಚರಣಕ್ಕೆಡುರಸ್ತನಮಾಡಯ್ಯಾನನ್ನದೇವಾದಿದೇವ ॥ ೧೦೭ ॥

ವಲ್ಲಿನುವಲ್ಲೆನಯ್ಯಾ ಜಗದಭೋಗೋಪಭೋಗವನು । ಅದೇನುಕಾರಣವೆಂದರೆ । ಹಿಂದೆಅರಿಯದೆಮರತುಜಗದಭೋಗವನಾಶಮಾಡಿ ಮರ್ತ್ಯಲೋಕದಲ್ಲಿಹುಟ್ಟಿನೊಂದುಬೆಂದುಕಂದಿಕುಂದಿದೆನಯ್ಯಾ । ಇದುಕಾರಣಯಿನ್ನುಮುಂದೆಬಯಸಿದೆನಾದಡೆ ಅಖಂಡೇಶ್ವರಾನಿಮ್ಮಾಣೆನಿಮ್ಮಪಾದದಾಣೆ । ನಿತ್ಯಲಿಂಗಾರ್ಚನೆಯುಮಾಡುವ । ಸತ್ಯಸದಾಚಾರವುಳ್ಳಸದ್ಭಕ್ತರ ಮಠಮಾನ್ಯವನರಿಸಿಕೊಂಡುಹೋಗಿ । ಲಿಂಗವುಂತಭಿಕ್ಷವಬೇಡುವೆ ಅವರಿಕ್ಕಿದಪದಾರ್ಥವಚಿತ್ತಶುದ್ಧವಾಗಿಕೊಂಡುಯನ್ನೊಡೆಯಅಖಂಡೇಶ್ವರಲಿಂಗಸಹಿತವಾಗಿಸಲಿಸುವೆ ||೧೦೮|| ಅಂಜುವೆಅಂಜುವೆನಯ್ಯಾಗುರುವಿನಾಣೆಯಿಡಲಮ್ಮದೆ । ಅಂಜುವೆಅಂಜುವೆನಯ್ಯಾಲಿಂಗದಾಣೆಯುಯಿಡಲಮ್ಮದೆ । ಅಂಜುವೆಅಂಜುವೆನಯ್ಯಾಜಂಗಮ ದಾಣೆಯುಯಿಡಲಮ್ಮದೆ । ಅಂಜುವೆಅಂಜುವೆ ನಯ್ಯಾ ಅಡಿಗಡಿಗೆನಮ್ಮ ಶರಣರಾಣೆಯುನಿಡಲಮ್ಮದೆ ಅಖಂಡೇಶ್ವರಾ ||೧೧೯|| ಜಗವೆಲ್ಲಾ ಮುನಿದಡಂಜೆ । ಆಧಿವಾಧಿಗಳುಬಂದುತನುವನಂಡಲಿಸದೆಡಂಜೆ । ರಾಜಭಯಚೋರಭಯಮೃಗಭಯಗ್ರಹಭಯಂಗಳು ಬಂದುನಾಲ್ಕುದೆಶೆಯಲ್ಲಿನಿಂತುಮುಸುಕಿದಡಂಜೆ। ಮತ್ತೊಂದಕ್ಕೆಅಂಜಿಅಳಕುವೆನಯ್ಯಾ । ಪರರೊಡವೆ। ಪರಧನ । ಪರಸ್ತ್ರೀಯಿರೆಮುಟ್ಟಲಮ್ಮದನೀಸಾಕ್ಷಿಯಾಗಿಅಖಂಡೇಶ್ವರಾ || ೧೧೦ || ಮನದೊಡೆಯಮನವನೋಡಿಹನೆಂದುನಾಲ್ಕುದಿಸೆಯಲ್ಲಿಭಯವನೊಡ್ಡಿದರೆ ಹೆದರಿಹಿಂಮೆಟ್ಟಿದಿರುಮನವೇಕಳೆವಳಗೊಳದೆ । ಸಂಚಳವನಳೆದುಅತಿಕಲವಂತನಾದಯಾದರೆ। ಅಘಹರಅಖಂಡೇಶ್ವರನುನಸುನಗುತಬಂದುಯತ್ತಿಕೊಂಡು ಮುದ್ದಾಡಿತಂನೊಳಗಿಂಬಿಟ್ಟು ಕೊಂಬನುಕೇಳಾಯೆಲೆಮನವೆ ||೧೧೧|| ವೀರಶೈವದಮಾಹೇಶ್ವರನುಅಂಗಲಿಂಗದೊಳಗಡಗುವನುಯಿದುಶೀಲವು । ನೇಮಂಗಳಸೀಮೆಯಕಟ್ಟಿನಡೆಯಬೇಕೆಂದುನುಡಿವೃತಿರ್ಪುದುಯನಗೆಸಲ್ಲದು॥ ನೇಮಂಗಳುಅವಾವೆಂದಡೆ । ಪರಧನಪರಸ್ತ್ರೀಯರಮುಟ್ಟೆನೆಂಬುದೆಂನಶೀಲ । ವಡಲುಪಾಧಿಕೆಯವಿಡಿದು ಅನ್ಯರಅನ್ನವಸ್ತ್ರಗಳಬೇಡೆ ನೆಂಬುದೆಯನ್ನವ್ರತಾ । ಸಕಲಪದಾರ್ಥಗಳು ಲಿಂಗಕ್ಕೆಕೊಡದೆಯುಂನಂಗದಿಚ್ಚೆಗೆಕೊಳ್ಳೆನೆಂಬುದೇಯುಂನನೇಮ ।ಯಿಂತಿವೆಲ್ಲವುಅನೇಮಂಗಳನಳವಡಿಸಿಕೊಂಡುಯುಂನೊಡೆಯ ಅಖಂಡೇಶ್ವರಲಿಂಗವನೊಡಗೂಡಿಮರಳಿಬಾರನೆಂಬುದೇಯುಂನಅರುಹಿನಗೊತ್ತು || ೧೧೨ || ನಡೆಯೊಳಗೆನುಡಿಯತುಂಬಿ । ನುಡಿಯೊಳಗೆನಡೆಯತುಂಬಿ । ನಡೆನುಡಿಯರಡುಪರಿಪೂರ್ಣದಲ್ಲಿತುಂಬಿಲಿಂಗವಕೊಡಬಲ್ಲಾತನೇಶರಣನೋಡಾಅಖಂಡೇಶ್ವರಾ ||ನಡೆದತಪ್ಪುವನಲ್ಲಾ ಶರಣರು । ನುಡಿದಹುಸಿವರಲ್ಲಾ ಶರಣರು । ವಡಲುಪಾದಿಕೆ

ಯುಹೊದ್ದುವರಲ್ಲಿಶರಣರು । ಅಖಂಡೇಶ್ವರನಿಂಮ ಶರಣರಪರಿಯನೀಬಲ್ಲೆ॥ ಬಲ್ಲಿದರಲ್ಲದೆನಾನೆತ್ತ ಬಲ್ಲೆನಯ್ಯ ಅಖಂಡೇಶ್ವರಾ ॥ ೧೧೪ ॥ ಗಂಡಸತ್ತನೆಂದುಗಂಡನೊಡನೆಕೊಂಡವಬೀಳುವೆನೆಂದುಪುಂಡತಾನುದಂಡೆಯಕಟ್ಟಿಕೊಂಡುಹೆದರಿಹಿಮ್ಮೆಟ್ಟಿದರೆ ಅವಳಿಗಾದಭಂಗವಲ್ಲದೆಖಂಡೆಯವಪಿಡಿದುಕಂಡಕಂಡಜನರಮುಂದೆ ಮೆರದುಕೊಂಡುಬಂದು ಕಿಚ್ಚಿನಕೆಂಡವಕಂಡುಹೆದರಿಹಿಂಮೆಟ್ಟಿದರೆಅವಳಿಗದೇಭಂಗವಲ್ಲದೆಶೃಂಗಾರವೆರವುದೇಅಯ್ಯಾ ಪತಿಲಿಂಗಸತಿಶರಣ। ತಂನಪತಿವ್ರತಾಭಾಷೆಯನುಡೆನಡೆಯಲಿತಪ್ಪಿದಡೆಅವನಭಂಗಕ್ಕೆತುದಿವೊದಲಿಲ್ಲನೋಡಾಅಖಂಡೇಶ್ವರಾ॥ ನುಡಿಯಂತೆನಡೆಯಿಲ್ಲವಯ್ಯಾಯೆಂನನಲಿ । ನಡೆಯಂತೆನುಡಿಯಿಲ್ಲವಯ್ಯಾಯೆಂನಲ್ಲಿ । ನುಡೆಹೀನಕಡುಪಾಪಿಯಯ್ಯಾನಾನು । ಮಾನಹೀನ। ಮಹಾಪರಾಧಿಯಯ್ಯಾನಾನು। ಯೆಂನೊಳಗೆಮಹಾಪರಾಧವನರಸಿದಡೇನು ಹುರುಳಿಲ್ಲವಯ್ಯಾನೀವೇಕರುಣಿಸಿ । ಪಾಲಿಪುದಯ್ಯಾಯೆನ್ನ ಅಖಂಡೇಶ್ವರಾ ॥ ೧೧೫ ॥ ಯೆಂನಮಾನಾಪಮಾನಗಳೆಲ್ಲಾ ನಿಂಮವಯ್ಯಾ। ಯೆಂನಹಾನಿವೃದ್ಧಿಗಳೆಲ್ಲಾ ನಿಂಮವಯ್ಯಾ ಅಖಂಡೇಶ್ವರಾ ನೀವುಭಕ್ತದೇಹಿಕನಾಗಿಯೆಂನಸರ್ವಸುಖಪರಿಣಾಮ ವೆಲ್ಲಾನಿಮ್ಮವೆಂದರಿದೆನಯ್ಯಾ॥೧೧೬ ॥ ಶಿವಶಿವಮಹಾಪ್ರಸಾದಯೆಂನಮನವುನಿಂಮಲ್ಲಿ । ಒಂದುಬಯಸಿಬಡವಾಗುತಿರ್ಪುದು । ಅವಧರಿಸಯ್ಯಾಸ್ವಾಮಿ ।ಶಿವನಡೆಶಿವನುಡಿಶಿವಭಾವಶಿವಾಚಾರಶಿವಭಕ್ತಿಶಿವಜ್ಞಾನಶಿವಾನುಭವಶಿವಶರಣರಸಂಗಯಿವನ್ನುಕರುಣಿಸಿಬದುಕಿಸಯ್ಯಾಯೆಂನಅಖಂಡೇಶ್ವರಾ ॥ ೧೧೭ ॥ ಅಂತರಂಗದಲ್ಲಿಅಖಂಡಪರಿಪೂರ್ಣದಜ್ಞಾನದನಿಲವನರಿದು । ಬಹಿರಂಗದಲ್ಲಿಸತ್ಯಸದಾಚಾರವನಳವಡಿಸಿಕೊಂಡು । ಹಿಂದುಮುಂದಣಬಯಕೆಹರಿದುಆನಂದವೇಪಥವಾಗಿ ಅಭೇದ್ಯಲಿಂಗವಾಗಿ ಬೆಳಕಿನಲ್ಲಿ ಸುಳಿವು ಅಷ್ಟಾವರಣಾಭರಣವತೋರಿಸಿಬದುಕಿಸಯ್ಯಾಯೆಂನಅಖಂಡೇಶ್ವರಾ ॥ ೧೧೮ ॥ಸೃಷ್ಟಿಸ್ಥಿತಿಪ್ರಸ್ಥಲಿಂಗದಲ್ಲಿ ನೆಟ್ಟನೆಮನವಡಗಿ ತೊಟ್ಟುಬಿಟ್ಟಹಣ್ಣಿನಂತೆಸುಳಿವಶ್ರೇಷ್ಠಶರಣಪಾದಕ್ಕೆ ನಮೋನಮೋಯೆಂಬೆನಯ್ಯಾ ಅಖಂಡೇಶ್ವರಾ । ಎಲೆಶಿವನೆಭಕ್ತದೇಹಿಕದೇವ ಯೆನಗೆ ನಿಶ್ಚಯವಾಗಿಕಾಣಬಂದಿತು । ಅದೇನುಕಾರಣವೆಂದಡೆ ।ಯೆನಂತನುವೆನಿಂಮತನುವಾಯಿತ್ತಾಗಿಯೀತನುವಿಡಿದುದಂಗುರುವಿನಕಂಡೆ । ಈತನುವಿಡಿದುಲಿಂಗವಕಂಡೆ । ಈತನುವಿಡಿದುಜಂಗಮವಕಂಡೆ । ಯೀತನುವಿಡಿದುಪಾದತೀರ್ಥಪ್ರಸಾದವಕಂಡೆ।ಯೀತನುವಿಡಿದುನಿಂಮಶರಣರಮಹಾನುಭಾವವಕಂಡೆ। ಯಿತನುವಿಡಿದುನೀನೇನಾನಾದಪರಿಯೆಂಕಂಡುಬೆರಗಾದೆನಯ್ಯಾ ಅಖಂಡೇಶ್ವರಾ ॥೧೧೯॥ ಹತ್ತುದಿಕ್ಕಿನವಳಹೊರಗೆಸುತ್ತಿಸುತ್ತಿಸು

ಳಿದಾಡುವಯಂನಮನವು । ನಿಲುವದಕ್ಕೆ ನೀವೇದೇ ಬೇರೆಮತ್ತಾವಸ್ಥಾನವುಂಡೇನಯ್ಯಾ । ಗಾಳಿಗಂಧವನಪ್ಪಿದಂತೆ । ನಿಂಮುಮುಟ್ಟಿದಚಿತ್ತುಯುತ್ತತ್ತಹರಿದಾಡೆಯೇನುಭಯವಿಲ್ಲ । ಅತತ್ತನೀವೆಯಲ್ಲದೆಬೇರೆಮತ್ತೇನುಯಿಲ್ಲವಯ್ಯಾಅಖಂಡೇಶ್ವರಾ ॥೧೨॥ ಮಾಡಿದಮಾಟವಮರೆದೆನಯ್ಯಾನಿಂಮೊಳಗೆ । ನೋಡಿದನೋಟವಮರೆದೆನಯ್ಯಾನಿಂಮೊಳಗೆ । ಕೂಡಿದಕೂಟವಮರೆದೆನಯ್ಯಾನಿಂಮೊಳಗೆ। ಕರ್ಪೂರದಗಿರಿವುರಿದಂತಾದೆನಯ್ಯಾನಿಂಮೊಂಳಗೆಅಖಾಂಡೇಶ್ವರಾ.

## ಪ್ರಸಾದಿಯಸ್ಥಲವು

ಲಿಂಗಕ್ಕೆಸಮರ್ಪಿಸಿದಸಕಲದ್ರವ್ಯಂಗಳಂನು । ಲಿಂಗಸಹಿತವಾಗಿಭೋಗಿಸಬೇಕು। ಅನರ್ಪಿತವಮುಟ್ಟದಿರಬೇಕು ॥ ಅಂಗದಲ್ಲಿಅತಿಸಾವಧಾನಭಕ್ತಿನೆಲೆಗೊಂಡಿರಬೇಕು । ಅದೆಂತೆಂದೊಡೆ ॥ಶ್ಲೋಕ॥ ಲಿಂಗಾರ್ಪಿತಪ್ರಸಾದಂಚಸುಭೋಗಿಲಿಂಗಸಂಯುತಂ ॥ ಅನಾರ್ಪಿತವಿಸರ್ಜಂಚಪ್ರಸಾದಿಸುಲಮುತ್ತಮಂ ॥೧॥ ಯೆಂದುದಾಗಿ ಯಿಂತಪ್ಪಪರಮಪ್ರಸಾದಿಗಳಶ್ರೀಪಾದಕ್ಕೆನಮೋನಮೋಯಂಬೆನಯ್ಯಾಅಖಂಡೇಶ್ವರಾ ॥೧॥ ತ್ರಿಕರಣಂಗಳುಶುದ್ಧವಾಗಿ ॥ ತ್ರಿಪದಾರ್ಥಗಳತ್ರಿವಿಧಲಿಂಗಕ್ಕೆ ಅರ್ಪಿಸಿ ತ್ರಿವಿಧಪ್ರಸಾದವನೆಗ್ರಹಿಕನಾಗಿಪಾರ್ಥನೆತ್ರಿಜಗದೊಡೆಯನಯ್ಯಾಅಖಂಡೇಶ್ವರಾ ॥೨॥ ಗುರುಪ್ರಸಾದಿಯಾದರೆ । ಗುರುಭಕ್ತಿಯಿಂದೆಗುರುವಿಂಗೆತನುವಸಮರ್ಪಿಸಬೇಕು। ಲಿಂಗಪ್ರಸಾದಿಯಾದರೆಲಿಂಗಭಕ್ತಿಯಿಂದೇಲಿಂಗಕ್ಕೆಮನವಸಮರ್ಪಿಸಬೇಕು । ಜಂಗಮಪ್ರಸಾದಿಯಾದರೆ ಜಂಗಮಭಕ್ತಿಯಿಂದೇಜಂಗಮಕ್ಕೆಧನವಸಮರ್ಪಿಸಬೇಕು । ಇಂತಿತ್ರಿವಿಧಭಕ್ತಿಯಿಲ್ಲದೆಕಂಡವರಕಂಡು ಕಾದಿಲುಸಿಕ್ಕಿಸಿಕೊಂಡು ಅವಿಶ್ವಾಸದಿಂದಕೊಂಡರೆ। ಕಂಡದಂತಿಪ್ಪುದಯ್ಯಾಅಖಂಡೇಶ್ವರಾ ॥ ೩ ॥ ಗುರುಪ್ರಸಾದಿಯಾದರೆ । ಗುರುವುಹರನಿಗಿಂದಧಿಕನೆಂದು ಗುರುವಾಕ್ಯವಮೀರದಿರಬೇಕು । ಲಿಂಗಪ್ರಸಾದಿಯಾದರೆತಂನಂಗದಮೇಲಿರ್ಪಲಿಂಗವಲ್ಲದೆ । ಅನ್ಯದೈವಂಗಳಿಗೆರಗದಿರಬೇಕು । ಜಂಗಮಪ್ರಸಾದಿಯಾದಡೆ । ತಾನುತನ್ನದೆಂಬಅಹಂಮಮತೆಗೆಟ್ಟು। ತಾನೆತಾನಾಗಿರಬೇಕು । ಇಂತೀತ್ರಿವಿಧಪ್ರಸಾದವಕೊಂಬನದವಳಿಯನರಿಯದೆ। ಪಜ್ಜೆಯಲ್ಲಿಕುಳಿತುಕಂಡವರಕಂಡು ವಂತಿಗೆಕ್ಕೈವಡ್ಡಿಯಿಕ್ಕಿಸಿಕೊಂಡುಅಂತರಂಗದಲ್ಲಿವಿಶ್ವಾಸವಿಲ್ಲದೆಮನಸಿಗೆಬಂದತೆಮುಗಿವ ಸಂತೆಸೂಳೆಯ ಮಕ್ಕಳಿಗೆಶಿವಪ್ರಸಾದದವಲುಮೆಯಿಂನೆಲ್ಲಿಯದಯ್ಯಾ ಅಖಂಡೇಶ್ವರಾ॥೪॥ ಗುರುಪ್ರಸಾದವಕೊಂಬನೇಮವಿದ್ದಬಳಿಕಾ । ಗುರುನಿಂದ್ಯವಕೇಳಲಾಗದು । ಲಿಂಗಪ್ರ

ಸಾದವಕೊಂಬ ನೇಮವಿದ್ದಬಳಿಕಾ ಲಿಂಗನಿಂದ್ಯಯುಕೇಳದಿರಬೇಕು । ಜಂಗಮಪ್ರಸಾದಿಯಾದರೆ ಜಂಗಮನಿಂದಯುಕೇಳದಿರಬೇಕು । ಇಂತೀ ನೇಮವುಳ್ಳಅತ್ಯಂತಭಕ್ತನುಅನ್ಯರಿಂದಬಂದಕುಂದುನಿಂದೆಯುಕೇಳಿಸುಮ್ಮನಿರ್ದಡೆ । ತಾನುಹಿಂದೆಕೊಂಡ ಪ್ರಸಾದವೆಲ್ಲಾ ಕಾಳಕೂಟವಿಷವ ಕೊಂಡಹಾಗಾಯಿತುನೋಡಾ ಅಖಂಡೇಶ್ವರಾ ॥೫॥ ನೇಮವಿರಬೇಕುಗುರು ಪ್ರಸಾದವಲ್ಲದೆ ಅನ್ಯವಮುಟ್ಟೆನೆಂಬನೇಮವಿರಬೇಕು । ಲಿಂಗಪ್ರಸಾದವಲ್ಲದೆ ಅನ್ಯಮುಟ್ಟೆನೆಂಬನೇಮವಿರಬೇಕು । ಜಂಗಮಪ್ರಸಾದವಲ್ಲದೆಅನ್ಯಪ್ರಸಾದವಮುಟ್ಟೆನೆಂಬನೇಮವಿರಬೇಕು ।ಇಂತೀನೇಮವುಳ್ಳಭಕ್ತಂಗೆ । ಗುರುಲಿಂಗಜಂಗಮ । ವುಂಟು । ಜಂಗಮಪಾದೋದಕಪ್ರಸಾದವುಂಟು । ಭಕ್ತಿಮುಕ್ತಿಯುಂಟು । ಇಂತೀನೇಮದಕಟ್ಟಳೆಯಿಲ್ಲದೆ ಬಾಯಿಗೆಬಂದಂತೆತಿಂದು ಮನಸಿಗೆಬಂದಂತೆ ಪರಿಣಾಮಿಸುವಾತಗೆ ಗುರುವಿಲ್ಲ । ಲಿಂಗವಿಲ್ಲ । ಜಂಗಮವಿಲ್ಲ ! ಪಾದೋದಕವಿಲ್ಲ । ಪ್ರಸಾದವಿಲ್ಲ । ಭಕ್ತಿಮುಕ್ತಿ ಯುಂಬುವದು ಯೆಂದಿಗೂಯಿಲ್ಲನೋಡಾ ಅಖಂಡೇಶ್ವರಾ ॥ ೬ ॥ ಕಾಯದಕೈಯುಮುಟ್ಟಿ ಇಷ್ಟಲಿಂಗಕ್ಕೆರೂಪವನ್ನುಸಮರ್ಪಿಸಿದಲ್ಲಿ ।ಸಿದ್ಧಪ್ರಸಾದವೆನಿತ್ತು । ಮನದಕೈಮುಟ್ಟಿಪ್ರಾಣಲಿಂಗಕ್ಕೆರುಚಿಯನರ್ಪಿಸಿದಲ್ಲಿ ಸಿದ್ಧಪ್ರಸಾದವೆನಿಸಿತು ಇಂತೀಶುದ್ಧಪ್ರಸಾದಗ್ರಹಿಕರತೋರಿಸಿಬದುಕಿಸಯ್ಯಾಅಖಂಡೇಶ್ವರಾ॥೭ ಒಂದುವೇಳ್ಯಲಿಂಗಕ್ಕೆಕೊಟ್ಟ ಮತ್ತೊಂದು ವೇಳ್ಯಲಿಂಗವಬಿಗಿಬಿಗಿದು ಕಟ್ಟಿಕೊಂಡು।ಬಂದಬಂದಪದಾರ್ಥವತನ್ನವಡಲಿಚ್ಛೆಗೆಕೊಂಡಡೆ।ಅಮೇಧ್ಯವನ್ನುಕಲ್ಬಿಷವಂನಂಕೂಡಿಸಿತಿಂದುತಾಯಿತು।ಒಂದುವೇಳ್ಯಪ್ರಸಾದವೆಂದುಕೊಂಡು । ಮತ್ತೊಂದುವೇಳ್ಯೆಯುಂಜಲೆಂದುಚಲ್ಲಿದಡೆ ಪ್ರಸಾದದ್ರೋಹಿ ।ಅದೆಂತೆಂದೊಡೆ,—ಅಂಗಭೋಗಅನಾರ್ಪಿತಂ । ಲಿಂಗಭೋಗಪ್ರಸಾದವೆಂದುಗುರುವಚನವು ।ಅದುಕಾರಣ। ಅಂತಪ್ಪಪಂಚಮಹಾಪಾತಕ । ಉಭಯಭ್ರಷ್ಟರಯನಗೊಮ್ಮೆತೋರದಿರಯ್ಯಾಅಖಂಡೇಶ್ವರಾ ॥೮॥ ಗುರುಪ್ರಸಾದವನರಿಯದವರಿಗೆಲಿಂಗಪ್ರಾಸಾದವಿಲ್ಲ ।ಲಿಂಗಪ್ರಸಾದವನರಿಯದವರಿಗೆಜಂಗಮಪ್ರಸಾದವಿಲ್ಲ । ಜಂಗಮಪ್ರಸಾದನರಿಯದವರಿಗೆಅರಹುಆಚಾರವಿಲ್ಲ।ಅರುಹುಆಚಾರವನರಿಯದವರಿಗೆಇಹಪರವಿಲ್ಲ । ಇಹಪರವನರಿಯದವರಿಗೆಭವಭವದಲ್ಲಿಬಪ್ಪುದುನೋಡಾಅಖಂಡೇಶ್ವರಾ ॥೯॥ ಒಳಗೆತಿಳಿಯದೆಹೊರಗೆಮಾಡುವಮಾಟವೆಲ್ಲಾ । ಅಜ್ಞಾನಗಡಣದೊಳಗುವಳಗು । ಗುರುಲಿಂಗಜಂಗಮಪಾದೋದಕಪ್ರಸಾದವಕೊಂಡೆವೆಂದು । ಹೊರಗೆಮಾಡುವ ಭಕ್ತಿಯುಟಟ್ಟರೆ । ಮುಂದೆವದಗುವ ಮುಕ್ತಿಯಾಕೇಡು । ಅದೆಂತೆಂದರೆ,—

ಅಸೆಲುಕಳೆದಬಳಿಕಲಾಭವುಂಟೇ ? ಇಲ್ಲ|ನಿಲ್ಲುವಮಾಣುವಳಗಣಕೂಟ | ಒಳಗಣವಮಾಟವನರಿಯದೆಕೆಟ್ಟರುನೋಡಾಹಿರಿಯರು | ಯಲ್ಲಾ ಅಖಂಡೇಶ್ವರಾ ॥೧೦॥ ಆಧಾರದಲ್ಲಿಗುರುಸಂಬಂಧವು | ಸ್ವಾದಿಷ್ಟಾನದಲ್ಲಿಲಿಂಗಸಂಬಂಧವು | ಅನಹಾತದಲ್ಲಿಪಾದೋದಕಸಂಬಂಧವು | ಅರುಹಿಡಿದುಗುರುವಕಂಡು|ಲಿಂಗವನೋಡಿ | ಜಂಗಮುಕೂಡಿಪಾದೋದಕಪ್ರಸಾದಫನವಕಾಂಬುವದೇ ಅಂತರಂಗವೆನಿಸುವದು | ಈಅಂತರಂಗವಸ್ತುವು | ಭಕ್ತಿಹಿತಾರ್ಥವಾಗಿ ಬಹಿರಂಗಕ್ಕೆಬಂದಲ್ಲಿ | ಗುರುಭಕ್ತಿಲಿಂಗಪೂಜೆ | ಜಂಗಮಾರಾಧನೆ | ಪಾದೋದಕಪ್ರಸಾದಸೇವನೆಯಲ್ಲಿಪ್ರೇಮವುಳ್ಳಡೆ | ಬಹಿರಂಗವೆನಿಸುವದು | ಇಂತೀಅಂತರಂಗಬಹಿರಂಗದಮಾಟಕೂಟವಬೆರದಿರ್ಪ ಪರಮಪ್ರಸಾದಿಗಳ | ವಳಹೊರಗೆಭರಿತನಾಗಿರ್ಪ ನಮ್ಮಅಖಂಡೇಶ್ವರಾ ॥೧೧॥ ಶಿವನೆಗುರುವೆಂದುತಿಳಿದುವಿಶ್ವಾಸಭಾವತುಂಬಿರಬೇಕು | ಪಾದೋದಕಪ್ರಸಾದದಲ್ಲಿಯಿಂತಪ್ಪವರಲ್ಲಿ | ವಿಶ್ವಾಸಭಾವವಿಲ್ಲದವಂಗೆ|ಗುರುವಿಲ್ಲ|ಲಿಂಗವಿಲ್ಲ | ಜಂಗಮವಿಲ್ಲ | ಪಾದೋದಕವಿಲ್ಲ | ಪ್ರಸಾದವಿಲ್ಲ | ಮುಕ್ತಿಯೆಂಬುವದಾಯೆಂದೆಂದಿಗೂಯಿಲ್ಲ | ಆವನೆಷ್ಟುದಿನವಿದ್ದರೂ ವ್ಯರ್ಥಕಾಯನಯ್ಯಾ ಅಖಂಡೇಶ್ವರಾ ॥ ೧೨ ॥ ವಿಶ್ವಾಸನೋಟಜಾರಿದಡೆ ಜಾರುವನಯ್ಯಾ ಶ್ರೀಗುರು |ವಿಶ್ವಾಸನೋಟವುಜಾರಿದಡೆಜಾರುವನಯ್ಯಾಶಿವಲಿಂಗವು | ವಿಶ್ವಾಸನೋಟವುಜಾರಿದಡೆ ಜಾರುವನಯ್ಯಾಚರಮಜಂಗಮು ॥ ವಿಶ್ವಾಸನೋಟವುಜಾರಿದಡೆಜಾರುವನಯ್ಯಾಪಾದೋದಕಪ್ರಸಾದಗಳು | ಇಂತೀ ಪಂಚವಿಧವುಪರಬ್ರಹ್ಮವೆಂದುನಂಬಿದಭಕ್ತರಹೃದಯದಲ್ಲಿಹನಮ್ಮ ಅಖಂಡೇಶ್ವರಾ॥ ೧೩ ॥ ಶುದ್ಧಸುಮಿಧಾನದಲ್ಲಿ ಭಯವಿಶ್ವಾಸವಿರಬೇಕು | ಪಾದೋದಕಪ್ರಸಾದದಲ್ಲಿಶುದ್ಧ ಸುಮಿಧಾನಭಯವಿಶ್ವಾಸವಿರಬೇಕು | ಗುರುವಿನಲ್ಲಿ ಶುದ್ಧಸುಮಿಧಾನಭಯವಿಶ್ವಾಸವಿರಬೇಕು | ಲಿಂಗದಲ್ಲಿಶುದ್ಧ ಸುಮಿಧಾನಭಯವಿಶ್ವಾಸವಿರಬೇಕು | ಜಂಗಮದಲ್ಲಿಯಿಂತಿವರಲ್ಲಿಶುದ್ಧಸುಮಿಧಾನಭಯವಿಸವಿಲ್ಲದವರುಸಲ್ಲರಯ್ಯಾನಿಮ್ಮನಿಜಪದಕ್ಕೆ ಅಖಂಡೇಶ್ವರಾ ॥ ೧೪ ॥ ಭಕ್ತನಾದಡೆ ಭಕ್ತಿಚಿತ್ತನಿಶ್ಚಲವಾಗಿಭಕ್ತಿನೆಲೆಗೊಂಡಿರಬೇಕು|ಮಹೇಶನಾದಡೆ ಸಕಲಧರ್ಮವೃಕ್ಷಮಯವಾಗಿರಬೇಕು | ಪ್ರಸಾದಿಯಾದಡೆಶಿವಜ್ಞಾನಪರಾಯಣನಾಗಿರಬೇಕು| ಪ್ರಾಣಲಿಂಗಿಯಾದರಿನಿತ್ಯಾನಿತ್ಯವಿಚಾರವನರಿಯಬೇಕು ಶರಣನಾದೊಡೆಸರ್ವಅಹಂಕಾರದದವನೊಳಿಯುಮುರಿಯಬೇಕು | ಐಕ್ಯನಾದಡೆಭಿನ್ನಭಾವವನಳಿದುಸಮ್ಯಜ್ಞಾನದೊಳಗೆವ್ಯೋಲ್ಯಾಡಬೇಕು | ಅದೆಂತೆಂದೊಡೆ,—ಶ್ಲೋಕ ॥ ಭಕ್ತಿಕರ್ಮಗ್ಕ್ರಯೋಬುದ್ಧಿ | ಆಚಾರೊಧರ್ಮಸಂ

ಕ್ಷುಯಃ । ಸಮ್ಯಜ್ಞಾನಮಿತೀಲೋಲಂ । ಸ್ಥಲಷಟ್ಕಮ್ರ್ಮದಂತಿಕಂ ॥ ೧ ॥ ಎಂದುದಾಗಿಯಿಂತಪ್ಪಷಡುಸ್ಥಲವೇಧ್ಯರಾದಮಹಾಶರಣವಕ್ತ್ರಮಿಕ್ಕ । ಪ್ರಸಾದವನೆನಗೆಕರುಣಿಸಿಬದುಕಿಸಯ್ಯಾಅಖಂಡೇಶ್ವರಾ ॥ ೧೫ ॥ ಧರ್ಮಾರ್ಥಕಾಮಮೋಕ್ಷವೆಂಬಚತುರ್ವಿಧಫಲಪುರುಷಾರ್ಥಂಗಳ ನಾನೊಲ್ಲೆನಯ್ಯಾ ಸಾಲೋಕ್ಯ । ಸಾಮಿಪ್ಯ । ಸಾರೂಪ್ಯ । ಸಾಯುಜ್ಯವೆಂಬ ಚತುರ್ವಿಧಫಲಂಗಳ ನಾನೊಲ್ಲೆನಯ್ಯಾ । ಅಣಿಮಾದಿ ಅಷ್ಟಸಿದ್ಧಿಗಳ ನಾನೊಲ್ಲೆನಯ್ಯಾ । ಎಲೆಶಿವನೆ । ನಿಮ್ಮಶರಣರುವುಂಡು ವುಳಿದುವುಗುಳಿದವಕ್ತ್ರದಕೊಂಡುಮಿಕ್ಕಪ್ರಸಾದಕ್ಕೆ ಯೋಗ್ಯನಮಾಡಿ ಬದುಕಿಸಯ್ಯಾ ಯೆನ್ನ, ಅಖಂಡೇಶ್ವರಾ ॥೧೬॥ ಜೀವಭಾವನದಿಂದೆಜೀವಜೀವನ್ನತಿಂದು । ಜೀವನಜನನಮರಣಂಗಳಿಂದದುಃಖಪಡುತಿರ್ಪವುನೋಡಾ । ಸಕಲಪ್ರಾಣಿಗಳುಅದೆಂತೆಂದೊಡೆ,—ಶ್ಲೋ ॥ ಪೃಥ್ವೀಬೀಜಸ್ತಥಾಮಾಂಸಂ ಅಪ್ಪುದ್ರವ್ಯಸುರಾಮಯಂ ಆತ್ಮಜೀವಸಮಾಯುಕ್ತಂ ಜೀವಂಜೀವೇನಭಕ್ಷಯೇತ್ ॥ ಎಂದುದಾಗಿ ಇಂತಪ್ಪಜೀವಮಯವಾದಪದಾರ್ಥವನ್ನು ಶುದ್ಧಸಂಸ್ಕಾರವಮಾಡಿ । ಲಿಂಗಜಂಗಮ ಮುಖದಲ್ಲಿಮಾಡಿಗಿ ಪರಮ ಪ್ರಸಾದವನ್ನು ಭೋಗಿಸುವಂಥಾ ಸದ್ಭಕ್ತಂಗೆ । ಜನನಮರಣಂಗಳುದೂರವಾಗಿರ್ಪವಯ್ಯಾ ಅಖಂಡೇಶ್ವರಾ ॥ ಪರಿಪಾಕವಾದಸಕಲಪದಾರ್ಥಂಗಳ । ಹಸ್ತಸ್ಪರ್ಶದಿಂದಶುದ್ಧಸಂಸ್ಕಾರವಮಾಡಿದಲ್ಲದೆಲಿಂಗಕ್ಕೆಸಮರ್ಪಿಸಲಾಗದು । ಅದೇನುಕಾರಣವೆಂದರೆ,—ಹಸ್ತಸ್ಪರ್ಶವಿಲ್ಲದ ಪದಾರ್ಥವುಚಿಷ್ಟವೆನಿಸಿತು । ಹಸ್ತಸ್ಪರ್ಶವಿಲ್ಲದಪದಾರ್ಥವು । ಪಂಚಭೂತಪ್ರಕೃತಿಜೀವಮಯವೆನಿಸಿತು । ಹಸ್ತಸ್ಪರ್ಶನವಿಲ್ಲದಪದಾರ್ಥವು ಜೀರ್ಣಗೋಮಾಂಸವೆನಿಸಿತು । ಹಸ್ತಸ್ಪರ್ಶ ವಿಲ್ಲದಪದಾರ್ಥವು । ಅಶುದ್ಧಕಿಲ್ಬಿಷವೆನಿಸಿತು । ಇದಕ್ಕೆಸಾಕ್ಷಿ ॥ಶ್ಲೋಕ॥ ಜಂಗಮಂ ಹಸ್ತಸ್ಪರ್ಶಂಚ ಸರ್ವದ್ರವ್ಯಂನಶುದ್ಧತೆ । ತಸ್ಯಪಾಕನಾಸ್ತಿಸ್ಪರ್ಶಂ ಪಾಪಕಿಲ್ಬಿಷಭುಂಜಯೇತ್ ॥೧॥ ಎಂದುದಾಗಿ ಇಂತಪ್ಪಪದಾರ್ಥದ ಪೂರ್ವಾಶ್ರಯವನ್ನು । ಶಿವಮಂತ್ರಶ್ರೀವಿಭೂತಿಯಿಂದೆಕಳೆದು । ಶುದ್ಧಸಂಸ್ಕಾರವೆನಿಸಿ । ಶಿವನೇತ್ರದಿಂದನೋಡಿಶಿವಹಸ್ತದಿಂದಮುಟ್ಟಿ । ಶಿವಲಿಂಗಕ್ಕೆಅರ್ಪಿಸಿದಲ್ಲಿಶಿವಪ್ರಸಾದವೆನಿಸಿತು । ಆಶಿವಪ್ರಸಾದವನ್ನು ಶಿವಲಿಂಗಸನ್ನಹಿತನಾಗಿ ಶಿವಜಿಹ್ವೆಯಲ್ಲಿಭೋಗಿಸಬಲ್ಲಾ ತನೇಶಿವಶರಣನು । ಆತನೇಶಿವಪ್ರಸಾದಿ । ಆತನೇಶಿವಾನುಭಾವಿ । ಇಂತೀಭೇದವನರಿಯದೆ ಮಾಡುವಮಾಟವೆಲ್ಲವು ಜೀವಗಡಣದೊಳಗಯ್ಯಾಅಖಂಡೇಶ್ವರಾ ॥೧೭॥ ಇಷ್ಟಲಿಂಗಕ್ಕೆ ರೂಪಪದಾರ್ಥವನರ್ಪಿಸಿ । ಇಷ್ಟಲಿಂಗಮುಖದಲ್ಲಿಯೇ ರೂಪು ಪ್ರಸಾದವಪಡೆಯಬಲ್ಲ

ಡೆಶಿವಪ್ರಸಾದಿಯುಂಬೆನು | ಪ್ರಾಣಲಿಂಗಕ್ಕೆರುಚಿಪದಾರ್ಥವನರ್ಪಿಸಿ ಪ್ರಾಣಲಿಂಗದಮುಖದಲ್ಲಿಯೇ ರುಚಿಪ್ರಸಾದವಪಡೆಯಬಲ್ಲಡೆ ಶಿವಪ್ರಸಾದಿಯುಂಬೆನು | ಭಾವಲಿಂಗಕ್ಕೆ ತೃಪ್ತಿಪದಾರ್ಥವನರ್ಪಿಸಿ | ಆ ಭಾವಲಿಂಗದಲ್ಲಿಯೇ ತೃಪ್ತಿ ಪ್ರಸಾದವಪಡೆಯಬಲ್ಲಡೆ ಶಿವಪ್ರಸಾದಿಯುಂಬೆನು | ಇಂತೀಭೇದವನರಿಯದೆ ವಡಲಕಕ್ಕುಲಾತಿಗೆವಗುಮಿಕ್ಕಲಾಗಿನಟ್ಟಿಸಿಕೊಂಡು | ಬಾಯಿಗೆ ಬಂದಂತೆತಿಂದುತನುವಕೆಡಹಿಮನಹೇಸಿರಣಭೂತನಂತೆ | ಕಂಡಕಂಡತ್ತ ಚೆಲ್ಲಾಡುವಡಿಂಡೆಮೂಳ ಭಂಡಹೊಲೆಯರಿಗೆ ಶಿವಪ್ರಸಾದದವಲುಮೆಯಿನ್ನೆಲ್ಲಿಯದಯ್ಯಾಅಖಂಡೇಶ್ವರಾ ‖ ೯ ‖ ಸಿಂಗದಮೊಲೆವಾಲುಶೀಳುಗಲ್ಲದೆ | ಶೀಳುನಾಯಿಗೆಯೋಗ್ಯವೇಅಯ್ಯಾ | ಶಿವಪ್ರಸಾದದವಲುಮೆ ಶಿವಶರಣಂಗಲ್ಲದೆ|ವ್ರಳಿದಾದಭವಭಾರಿಗಳಿಗಳವಡವುದೇ ಅಯ್ಯಾಅಖಂಡೇಶ್ವರಾ ‖ ೧೦ ‖ ಶಿವಪ್ರಸಾದವನಾರೋಗಣೆಯಮಾಡುವಲ್ಲಿ ಕರಣಂಗಳುಕಡಿಗೆನೂಕ ದಿರಬೇಕುಚಿತ್ತವುಅತ್ತಿತ್ತಲುಹರಿಯದಿರಬೇಕು |ಶಿವಧ್ಯಾನಪರಾಯಣನಾಗಿರಬೇಕು | ಶಿವಪ್ರಸಾದದಲ್ಲಿಮನವುಲೀಯವಾಗಿರಬೇಕು | ಪ್ರಸಾದವೇಪರಬ್ರಹ್ಮವೆಂದುಭಾವಬಲಿದಿರಬೇಕು | ಭೋಜಿಭೋಜಿಗೆಶಿವಮಂತ್ರವನ್ನುಭಜಿಸಬೇಕು | ಶಿವಪ್ರಸಾದದಮನವಕಂಡುಮನಹಿಗ್ಗಿ | ಪರಮಪರಿಣಾಮದೊಳಗೋಲ್ಯಾಡಬೇಕು | ಇಂತೀಭೇದವಬಲ್ಲಾತನೇ ಅಚ್ಚಪ್ರಸಾದಿಯಯ್ಯಾಅಖಂಡೇಶ್ವರಾ ‖ ೧೧ ‖ ದೇವದೇವಮಹಾಪ್ರಸಾದತಿ ಕರಣಶುದ್ಧವಾಗಿ | ಯನ್ನಭಾವದನಂಬುಗೆಯಭಾಷೆಯಬಂಣಿಸುತಿರ್ಪೆನು ಅವಧರಿಸಯ್ಯಾಸ್ವಾಮಿ | ಗುರುಲಿಂಗಜಂಗಮದಪ್ರಸಾದವನ್ನು ಪರಬ್ರಹ್ಮವೆಂದು ಹರುಷಾನಂದದಿಂದಕೈಕೊಂಡುಪರಮಾನಂದತುಂಬಿ ಆರೋಗಣೆಯಮಾಡುವ | ಆ ಪ್ರಸಾದದಲ್ಲಿ | ಉಪ್ಪು ಸೊಪ್ಪು ಹುಳಿ ಕಹಿ'ವಳಿತುಹೊಲ್ಲೆ | ವೃಚ್ಚನೀಚವನರಸಿದನಾದಡೆ | ಆಣೆನಿಮ್ಮಾಣೆಯ್ಯಾ ‖೧೨‖ ಮುಂದಿದ್ದಶಿವಪ್ರಸಾದದಘನವಮರದು ಯನ್ನವಡಲಕಕ್ಕುಲಾತಿಗೆ ಮತ್ತೊಂದು ಪದಾರ್ಥಕ್ಕೆಮನವಳಸಿದೆನಾದೊಡೆ | ಅಖಂಡೇಶ್ವರಾ ಆಣೆ ನಿಮ್ಮಾಣೆಅಯ್ಯಾ | ಜಂಗಮದದರ್ಶನಸ್ಪರ್ಶನದಿಂದೆನ್ನ ತನುಶುದ್ಧವಾಯಿತು|ಜಂಗಮದಪಾದೋದಕಪ್ರಸಾದದಿಂದೆನ್ನಪ್ರಾಣಶುದ್ಧವಾಯಿತು| ಜಂಗಮದಜ್ಞಾನಾನುಭವದಿಂದೆನ್ನಮನಶುದ್ಧಿಯಾಯಿತು| ಜಂಗಮವೆನ್ನಪ್ರಾಣವೆಂದರಿದೆನಾಗಿಯನ್ನ ಸರ್ವಾಂಗಶುದ್ಧವಾಯಿತಯ್ಯಾಅಖಂಡೇಶ್ವರಾ ‖ ೧೩ ‖ ಜಂಗಮಜಂಗಮವೆಂದುನುಡಿಯುತಿರ್ಪರಲ್ಲಾ | ಜಂಗಮದಘನವನಾರು ಅರಿಯರಲ್ಲಾ | ಜಂಗಮವೆಂದರೆನಿರ್ನಾಮವು| ನಿದ್ರೋಹಿ | ಜಂಗಮವೆಂದರೆನಿರ್ಜಾತನಿರಾ

ವರ್ಣ । ಜಂಗಮವೆಂದಡೆ । ನಿಸ್ಸೀಮನಿರ್ಜಾತ । ಜಂಗಮವೆಂದಡೆ । ನಿರುಪಮನಿರ್ಭೇದ್ಯ ।ಜಂಗಮವೆಂದಡೆ । ನಿರಾಳನಿರಾಲಂಬ । ಜಂಗಮವೆಂದಡೆ ನಿರಂಜನನಿರವಯುವು। ಇಂತಪ್ಪಸಚ್ಚಿದಾನಂದನಿತ್ಯಪರಿಪೂರ್ಣಜಂಗಮದ ಪ್ರಸಾದವಕೊಂಡು ಜನನಮರಣಂಗಳತೊಡಕುಹರಿದೆನಯ್ಯಾ ಅಖಂಡೇಶ್ವರಾ ॥೧೪॥ ಗುರುಪ್ರಸಾದವಕೊಂಡುಯನ್ನ ತನುವು ಶುದ್ಧಪ್ರಸಾದವಾಯಿತು । ಲಿಂಗಪ್ರಸಾದವಕೊಂಡುಯನ್ನ ಮನವುಸಿದ್ಧಪ್ರಸಾದವಾಯಿತು ಜಂಗಮಪ್ರಸಾದವಕೊಂಡುಯನ್ನಪ್ರಾಣವುಪ್ರಸಿದ್ಧಪ್ರಸಾದವಾಯಿತು । ಇಂತೀತ್ರಿವಿಧಪ್ರಸಾದವಕೊಂಡುಯನ್ನಭವನಾಸ್ತಿಯಾಗಿತ್ತಾಗಿಅಖಂಡೇಶ್ವರಾ ॥ ೧೫ ॥ ಗುರುವೇಲಿಂಗವೆಂದರಿದೆನಾಗಿ ಲಿಂಗದಲ್ಲಿ ಗುರುವಿನನಿಲುವ ಕಂಡೆ । ಲಿಂಗವೇಜಂಗಮವೆಂದರಿದೆನಾಗಿಜಂಗಮದಲ್ಲಿಲಿಂಗದನಿಲುವಕಂಡೆ। ಜಂಗಮವೇನೀವೆಂದರಿದೆನಾಗಿನಿಮ್ಮಲ್ಲಿಲಿಂಗಜಂಗಮದನಿಲುವ್ಹಕಂಡೆ । ನೀವೇಪ್ರಸಾದವೆಂದರಿದೆನಾಗಿ ಪ್ರಸಾದದಲ್ಲಿನಿಮ್ಮನಿಲುವಕಂಡೆ । ಪ್ರಸಾದವೇನಾನೆಂದರಿದೆನಾಗಿಯೆನ್ನೊಳಗೆನಿಮ್ಮಮಹಾಪ್ರಸಾದದನಿಲುವಕಂಡೆನಯ್ಯ ಅಖಂಡೇಶ್ವರಾ ॥೧೬॥ ಒಮ್ಮೆನೀವೇದೇವನಾದಲ್ಲಿಭಕ್ತನಾಗಿರ್ಸನು । ಮತ್ತೊಮ್ಮೆನಾದೇವನಾದಲ್ಲಿ ನೀವುಭಕ್ತರಾಗಿರ್ಪಿರಿ । ಅದೆಂತೆಂದೊಡೆ । ಯನ್ನತನುಮನಪ್ರಾಣೇಂದ್ರಿಯಂಗಳು ನಿಮಗರ್ಪಿತವಾಗಿ ನಿಮ್ಮೊಳಗರವು । ನಿಮ್ಮಮಹಾಪ್ರಸಾದವು ಯೆನ್ನೊಳಗೆಯಿತ್ತಾಗಿಅಖಂಡೇಶ್ವರಾನೀವೇಪ್ರಸಾದಿನಾನೇ ಪ್ರಸಾದವಯ್ಯ ॥ ೧೭ ॥ ಗುರುಭಕ್ತಿಯಮಾಡಿದರು ಮಾಡಬಹುದು । ಲಿಂಗಭಕ್ತಿಯಮಾಡಬಾರದಯ್ಯ । ಅವರಿಗೆಯುಲಿಂಗಭಕ್ತಿಯಮಾಡಿದರೂಮಾಡಬಹುದು। ಜಂಗಮಭಕ್ತಿಯಮಾಡಬಾರದುಅವರಿಗೆಯು ಇಂತೀಚತುರ್ವಿದಭಕ್ತಿಯ ಭೇದವನರಿದು ಇಂಬುಗೊಂಡು ಸಂಗನಬಸವಣ್ಣನೆಂಬಸದ್ಭಕ್ತಂಗೆನಮೋನಮೋಯೆಂಬೆನಯ್ಯ ಅಖಂಡೇಶ್ವರಾ ॥೧೮॥ ತನುವಿನಲ್ಲಿಗುರುಭಕ್ತಿನೆಲೆಗೊಂಡು ಮನದಲ್ಲಿಲಿಂಗಭಕ್ತಿನೆಲೆಗೊಂಡುಪ್ರಾಣದಲ್ಲಿಪ್ರಸಾದಭಕ್ತಿನೆಲೆಗೊಂಡು । ಆತ್ಮದಲ್ಲಿ ಜಂಗಮಭಕ್ತಿನೆಲೆಗೊಂಡು ಇಂತೀ ಚತುರ್ವಿದಸ್ಥಾನಂಗಳಲ್ಲಿ ಚತುರ್ವಿಧಭಕ್ತಿ ನೆಲೆಗೊಂಡು ಭಕ್ತರ ತೋರಿಸಿಬದುಕಿಸಯ್ಯ ಎನ್ನ ಅಖಂಡೇಶ್ವರಾ ॥೧೯॥ ಕ್ರಿಯಾದೀಕ್ಷೆಯಿಂದಇಷ್ಟಲಿಂಗದಲ್ಲಿ ಯನ್ನತನುಮನವ ಸಂಯೋಗವಮಾಡಿದನಯ್ಯಾ ಶ್ರೀಗುರುವು । ಮಂತ್ರದೀಕ್ಷೆಯಿಂದ ಪ್ರಾಣಲಿಂಗದಲ್ಲಿ ಯನ್ನಮನವಸಂಯೋಗವಮಾಡಿದನಯ್ಯಶ್ರೀಗುರುವು । ವೇಧದೀಕ್ಷೆಯಿಂದಭಾವಲಿಂಗದಲ್ಲಿ ಎನ್ನ ಜೀವಸಂಯೋಗವಮಾಡಿದನಯ್ಯಾಶ್ರೀಗುರುವು । ಇಂತಿ ತ್ರಿವಿಧಲಿಂಗದಕ ಸ

ನ್ನಪ್ರಸಾದದಲ್ಲಿಎನ್ನಪ್ರಾಣಸಂಯೋಗವಮಾಡಿದ ಶ್ರೀಗುರುವಿಗೆನಮೋ
ನಮೋನಮೋಯೆಂಬೆನಯ್ಯಾಅಖಂಡೇಶ್ವರಾ ||೩೦|| ಶ್ರೀಗುರುವಿಗಿಂದಧಿಕ
ರುಆವಲೋಕದೊಳಗಿಲ್ಲವಯ್ಯಾ । ಶ್ರೀಗುರುವಿನಿಂದ ಪರೋಪಕಾರಿಗಳು
ಮತ್ತಾರನ್ನು ಕಾಣೆನಯ್ಯಾಅದೆಂತೆಂದೊಡೆ । ಎನ್ನ ಕಂಗಳಭಕ್ತ್ರವಮಾಡಿದ
ನಯ್ಯಾಶ್ರೀಗುರುಪರಮಶಿವಲಿಂಗಕ್ಕೆ ಎನ್ನ ಕಿವಿಗಳಭಕ್ತ್ರವಮಾಡಿದನಯ್ಯಾ ।
ಶ್ರೀಗುರುಪರಮಶಿವಲಿಂಗಕ್ಕೆ ಎನ್ನ ನಾಸಿಕನಾಲಿಗೆಯಭಕ್ತ್ರ ಮಾಡಿದನ
ಯ್ಯಾ।ಶ್ರೀಗುರುಪರಮಶಿವಲಿಂಗಕ್ಕೆ ಎನ್ನ ಕರಚರಣಂಗಳಭಕ್ತ್ರ ಮಾಡಿದನ
ಯ್ಯಾ।ಶ್ರೀಗುರುಪರಮಶಿವಲಿಂಗಕ್ಕೆ ಎನ್ನ ತನುಮನಪ್ರಾಣಂಗಳಭಕ್ತ್ರವಮಾ
ಡಿದನಯ್ಯಾ।ಶ್ರೀಗುರುವುಪರಮಶಿವಲಿಂಗಕ್ಕೆ। ಇಂತಿವುಮೊದಲಾಗಿಎನ್ನಸ
ರಾವಯವಗಳೆಲ್ಲಾಲಿಂಗಾರ್ಪಿತಕ್ಕನುಗೊಳಿಸಿದಶ್ರೀಗುರುವಿನಮಹಾನಿಲು
ವಿಂಗೆನಮೋನಮೋಯೆಂಬೆನಯ್ಯಾಅಖಂಡೇಶ್ವರ ||೩೧|| ತಾರಕಾಕೃತಿನಕಾ
ರಪ್ರಣಮಆಧಾರಚಕ್ರಸದ್ಭಕ್ತನೇಅಂಗಸುಚಿತ್ತವೆಂಬ ಹಸ್ತಆಚಾರಲಿಂಗ
ಘ್ರಾಣವೆಂಬಮುಖಕ್ರಿಯಾ ಶಕ್ತಿಶ್ರದ್ಧಾಭಕ್ತಿ ಸುಗಂಧಪದಾರ್ಥ ಗಂಧಪ್ರ
ಸಾದನಿವೃತ್ತಿ ಕಲೆಕರ್ಮಸಾದಾಖ್ಯಸತ್ತುವೆಂಬಲಕ್ಷಣ । ಪರವೆಂಬಸಂಜ್ಞೆರು
ಗ್ವೇದಯಿಂತಿವೆಲ್ಲವು।ಇಷ್ಟಲಿಂಗದವೃತ್ತದಲ್ಲಿಸಂಬಂಧವು ।ದಂಡಕಾಕೃತಿ
ಮಕಾರಪ್ರಣಮ।ಸ್ವಾಧಿಷ್ಠಾನಚಕ್ರಮಹೇಶ್ವರನೇಅಂಗ।ಸುಬುದ್ಧಿಯೇಹ
ಸ್ತಗುರುಲಿಂಗಜಿಂಹೆಯೆಂಬ ಮುಖಜ್ಞಾನಶಕ್ತಿನೈಷ್ಠಿಕಾ ಭಕ್ತಿಸುರಸಪದಾ
ರ್ಥರಸಪ್ರಸಾದಪ್ರತಿಷ್ಠಾಕಲೆ।ಕರ್ತೃಸಾದಾಖ್ಯಚಿತ್ತುವೆಂಬಲಕ್ಷಣ।ಗೂಢ
ವೆಂಬಸಂಜ್ಞಾಯಜುರ್ವೇದ। ಇಂತಿವೆಲ್ಲವುಇಷ್ಟಲಿಂಗದಕಟಿಯಲ್ಲಿಸಂಬಂಧವು
ಕುಂಡಲಾಕೃತಿಶಿಕಾರಪ್ರ ಮಣಮಣಿಪೂರಕಚಕ್ರ ಪ್ರಸಾದಿಯಅಂಗನಿರ
ಹಂಕಾರಹಸ್ತಶಿವಲಿಂಗನೇತ್ರವೆಂಬಮುಖಇಚ್ಛಾಶಕ್ತಿಸಾವಧಾನಭಕ್ತಿಸು
ರೂಪಪದಾರ್ಥರೂಪುಪ್ರಸಾದವಿದ್ಯಾಕಲೆಮೂರ್ತಿ ಸಾದಾಖ್ಯಆನಂದವೆಂಬ
ಲಕ್ಷಣಶೀರಸಂಜ್ಞಾಸಾಮವೇದಇಂತಿವೆಲ್ಲವುಇಷ್ಟಲಿಂಗದವರ್ತುಳದಲ್ಲಿಸಂ
ಬಂಧವುಅರ್ಧಚಂದ್ರಾಕೃತಿವಕಾರಪ್ರಮಣ॥ ಅನಹಾತ ಚಕ್ರಪ್ರಾಣಲಿಂ
ಗಿಯೇಅಂಗಸುಮನವೆಂಬಹಸ್ತ ಜಂಗಮಲಿಂಗತ್ವಕ್ಕುವೆಂಬ ಮುಖಆದಿಶ
ಸ್ತಅನುಭಾವಭಕ್ತಿಸ್ಪರ್ಶನಪದಾರ್ಥಸ್ಪರ್ಶನಪ್ರಸಾದಶಾಂತಿಕಲೆಮೂರ್ತಿ
ಸಾದಾಖ್ಯನಿತ್ಯವೆಂಬಲಕ್ಷಣಜಂಗಮಲಿಂಗಕ್ಷೇತ್ರಸಂಜ್ಞೆಅಥರ್ವಣವೇದ ।
ಇಂತಿವೆಲ್ಲವುಇಷ್ಟಲಿಂಗದಗೋಮುಖದಲ್ಲಿಸಂಬಂಧವು । ದರ್ಪಣಾಕೃತಿಯ
ಕಾರಪ್ರಣಮ । ವಿಶುದ್ಧಿಚಕ್ರಶರಣನೇಅಂಗ ಸುಜ್ಞಾನವೇಹಸ್ತ ಪ್ರಸಾದ
ಲಿಂಗಶ್ರೋತ್ರವೆಂಬಮುಖ । ಇಂತಿವೆಲ್ಲವುಇಷ್ಟಲಿಂಗದನಾಳದಲ್ಲಿಸಂಬಂಧ

ವು ಜ್ಯೋತಿರ. ಕ್ಷೇತ್ರ ಓಂಕಾರ ಪ್ರಣವು ಆಜ್ಞಾಚಕ್ರ ಸತ್ಯನೆ ಅಂಗ ಸದ್ಭಾವಹ
ಸ್ತ | ಮಹಾಲಿಂಗಸ್ಪದಯವೆಂಬಮುಖ ಸುತೃಪ್ತಿಯೆಂಬಪದಾರ್ಥ ತೃಪ್ತಿಪ್ರಸಾದ
ಚಿಚ್ಛಕ್ತಿ ಸಮರಸಭಕ್ತಿ ಶರಂತಾತೀತಕಲೆ | ಮಹಾನಾದಾಖ್ಯ ಅಖಂಡವೆಂಬ ಲ
ಕ್ಷಣ ಮಹಾಸೌಜ್ಞ ಗಾಯತ್ರಿ ವೇದ | ಇಂತಿವೆಲ್ಲವು ಇಷ್ಟಲಿಂಗದಲ್ಲಿ ಸಂಬಂಧ
ವು | ಇಂತೀ ತೊಂಭತ್ತಾರು ಸಕೀಲ ಲಿಂಗಗಳನೊಳಕೊಂಡ ಮಹಾಘನ ಪರಾತ್ಪರ
ವಾದ ಇಷ್ಟಲಿಂಗವನ್ನು ಕರಮನಭಾವದೊಳಗೆ ತುಂಬಿ ಪೂಜಿಸಿ ಅರ್ಚಿಸಿ
ಧ್ಯಾನಿಸಿ ಕೂಡಿ ಸುರಾಳಿದ ಮಹಾಶರಣರ ಶ್ರೀಚರಣಕ್ಕೆ ನಮೋ ನಮೋ ಎಂ
ಬೆನಯ್ಯಾ ಅಖಂಡೇಶ್ವರಾ || ೩ || ಕೇಳುವ ಸುಗೀತವ | ನೋಡುವ ಸುರೂಪುಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು | ವಾಸಿಸುವ ಗಂಧರು
ಚಿಸುವ ಸುರಸಂಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನ
ಯ್ಯಾ | ತಟ್ಟುಮುಟ್ಟು ಭೋಗಸುಭೋಗ ಸಂಬಂಧಗಳ ಲಿಂಗಾರ್ಪಿತ
ವಮಾಡಬಲ್ಲರೆ ಪರಮಪ್ರಸಾದಿಯೆಂಬೆನು || ಕಲ್ಲುಕಟ್ಟಿಗೆ ಮುಳ್ಳು ಮೊದಲಾ
ದ ಎಲ್ಲಾ ಪದಾರ್ಥಂಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮ ಪ್ರಸಾದಿಯೆಂ
ಬೆನಯ್ಯಾ | ಚಳಿ ಮಳೆ ಗಾಳಿ ಬಿಸಿಲು ಸಿಡಿಲು ಮಿಂಚು ನೀರು ಮೊದಲಾದನ
ರಳು ಗಳ ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು | ಸೃಷ್ಟಿಗಗ
ನ ತೋರಿಕೆ ಸೂರ್ಯ ಚಂದ್ರಾಗ್ನಿ ತಾರಕಾ ಪ್ರಕಾಶಂಗಳ ಲಿಂಗಾರ್ಪಿತವ ಮಾಡ
ಬಲ್ಲರೆ ಪರಮಪ್ರಸಾದಿಯೆಂಬೆನು | ಇಂತೀ ಲಿಂಗಾರ್ಪಿತವ ಶೀಲವನರಿಯದೆ ಬರಿ
ದೆ ಪ್ರಸಾದಿಯೆಂದು ನುಡಿದುಕೊಂಬವರ ಜಾರಕೆಂಡ ಮಾಡಿಬಿಡುವೆನಯ್ಯಾ ಅ
ಖಂಡೇಶ್ವರಾ || ೩೬ || ಪೃಥ್ವಿ ಅಂಗವಾದ ಭಕ್ತಂಗೆ ಸುಚಿತ್ತವೆಂಬ ಹಸ್ತ | ಆಹಸ್ತ
ಕ್ಕೆ ಕ್ರಿಯಾಶಕ್ತಿ | ಆಶಕ್ತಿಗೆ ಆಚಾರಲಿಂಗ | ಆ ಲಿಂಗಕ್ಕೆ ಘ್ರಾಣೇಂದ್ರಿಯವೇ ಮುಖ |
ಆ ಮುಖಕ್ಕೆ ಸುಗಂಧಪದಾರ್ಥವನ್ನು ಘ್ರಾಣದಲ್ಲಿ ಹಿಡಿದು ಆಚಾರಲಿಂಗಕ್ಕೆ ಭಕ್ತಿಯಿಂ
ದರ್ಪಿಸಿ ಸುಗಂಧಪ್ರಸಾದವನು ಪಡೆವನು ಆತನೇ ಸದ್ಭಕ್ತನು | ಅ
ಪ್ಪು ಅಂಗವಾದ ಮಹೇಶ್ವರಂಗೆ ಸುಬುದ್ಧಿಯೆಂಬ ಹಸ್ತ | ಆಹಸ್ತಕ್ಕೆ ಜ್ಞಾನಶಕ್ತಿ |
ಆಶಕ್ತಿಗೆ ಗುರುಲಿಂಗ | ಆಲಿಂಗಕ್ಕೆ ಜಿಹ್ವೇಂದ್ರಿಯವೇ ಮುಖ | ಆಮುಖಕ್ಕೆ ಸು
ರಸಪದಾರ್ಥವನ್ನು | ಜಿಹ್ವೆಯಲ್ಲಿ ಹಿಡಿದು ಗುರುಲಿಂಗಕ್ಕೆ ನೈಷ್ಠಿಕಾಭಕ್ತಿಯಿಂದ
ರ್ಪಿಸಿ | ಸುರಸಪ್ರಸಾದವನು ಪಡೆದು ಸುಖಿಸುವಾತನೇ ಮಹೇಶ್ವರನು | ಅ
ಗ್ನಿ ಅಂಗವಾದ ಪ್ರಸಾದವನು ಪಡೆವ | ಸುಖಿಸುವಾತನೇ ಮಹೇಶ್ವರನು |
ಅಗ್ನಿ ಅಂಗವಾದ ಪ್ರಸಾದಿಗೆ ಸುಮನವೆಂಬ ಹಸ್ತ | ಆಹಸ್ತಕ್ಕೆ ಇಚ್ಛಾಶ
ಕ್ತಿ | ಆಶಕ್ತಿಗೆ ಶಿವಲಿಂಗ | ಆಲಿಂಗಕ್ಕೆ ನಯನೇಂದ್ರಿಯವೇ ಮುಖ | ಆಮುಖಕ್ಕೆ ಸು
ರೂಪಪದಾರ್ಥ | ಆಪದಾರ್ಥವನು ನೇತ್ರದಲ್ಲಿ ಹಿಡಿದು ಶಿವಲಿಂಗಕ್ಕೆ ಸಾವಧಾನ

ಭಕ್ತಿಯಿಂದರ್ಪಿಸಿ। ಆಸುರೂಪುಪ್ರಸಾದವಪಡೆದುಸುಖಿಸುಸುವಾತನೇಪ್ರಸಾದಿ । ಪವನಾಂಗವಾದಪ್ರಾಣಲಿಂಗಿಗೆಸುಮನವೆಂಬಹಸ್ತ। ಆಹಸ್ತಕ್ಕೆಆದಿಶಕ್ತಿ। ಆದಿಶಕ್ತಿಗೆಜಂಗಮಲಿಂಗ । ಆಲಿಂಗಕ್ಕೆತ್ವಗೇಂದ್ರಿಯೇಮುಖ । ಆಮುಖಕ್ಕೆಸುಸ್ಪರ್ಶಪದಾರ್ಥ। ಆಪದಾರ್ಥವಂನುತ್ವಕ್ಕಿನಲ್ಲಿಹಜಂಗಮಲಿಂಗಕ್ಕೆ । ಅನುಭಾವಭಕ್ತಿಯಿಂದರ್ಪಿಸಿ। ಆಸುಸ್ಪರ್ಶಪದಾರ್ಥವಪಡದುಸುಖಿಸುವಾತನಪ್ರಾಣಲಿಂಗಿ । ಗಗನಾಂಗವಾದಶರಣಂಗೆಸುಜ್ಞಾನವೆಂಬಹಸ್ತ । ಆಹಸ್ತಕ್ಕೆಪರಶಕ್ತಿ ।ಆಶಕ್ತಿಗೆಪ್ರಸಾದಲಿಂಗ । ಆಲಿಂಗಕ್ಕೆಶ್ರವಣೇಂದ್ರಿಯಮುಖ । ಆಮುಖಕ್ಕೆಸುಶಬ್ದಪದಾರ್ಥ । ಆಪದಾರ್ಥವನ್ನು ಕರ್ನದಲ್ಲಿಹಪ್ರಸಾದಲಿಂಗಕ್ಕೆಆನಂದಭಕ್ತಿಯಿಂದರ್ಪಿಸಿ।ಆಸುಶಬ್ದಪ್ರಸಾದವಪಡದುಸುಖಿಸುವಾತನೇಶರಣನು ॥ ಆತ್ಮನೇಅಂಗವಾದಐಕ್ಯಂಗೆಸದ್ಭಾವವೆಂಬಹಸ್ತ । ಆಹಸ್ತಕ್ಕೆಚಿಚ್ಛಕ್ತಿ।ಆಚಿಚ್ಛಕ್ತಿಗೆಮಹಾಲಿಂಗ। ಆಲಿಂಗಕ್ಕೆಹೃದಯೇಂದ್ರಿಯೇಮುಖ । ಆಮುಖಕ್ಕೆಸುತೃಪ್ತಿಪದಾರ್ಥ । ಆಪದಾರ್ಥವಂನುಹೃದಯದಲ್ಲಿಹಮಹಾಲಿಂಗಕ್ಕೆ ॥ ಸಮರಸಭಕ್ತಿಯಿಂದರ್ಪಿಸಿ । ಆತೃಪ್ತಿಪ್ರಸಾದವಪಡೆದುಸುಖಿಸುವಾತನೇಐಕ್ಯನು॥ಇಂತೀಆರುವಿಧಸಕೀಲಸಂಬಂಧದರ್ಪಿತಅವಧಾನವರಿದುಆನಂದಿಸುವ । ಮಹಾಪ್ರಸಾದಿಗಳ ತೋರಿಸಿಬದುಕಿಸಯ್ಯಾ ಅಖಂಡೇಶ್ವರಾ ॥೫೪॥ ಪೃಥ್ವಿಯೆಂಬಭೂತಾಂಗದಪ್ರಕೃತಿವಿಕಾರವಾದಗುಣವಳಿದುಭಿಂನಗಂಧಹಂಗನುಹರಿದು ।ಆಚಾರಲಿಂಗಕ್ಕೆವದನವಾಗಿರ್ಪುದಯ್ಯಾಯೆಂನಘ್ರಾಣವು । ಅಪ್ಪುವೆಂಬಭೂತಾಂಗದಪ್ರಕೃತಿವಿಕಾರವಾದಗುಣವಳಿದುಭಿಂನರುಚಿಯಹಂಗಂನಹರಿದು।ಗುರುಲಿಂಗಕ್ಕೆವದನವಾಗಿರ್ಪುದಯ್ಯಾಯೆಂನಜಿಹ್ವೆಯು । ಅಗ್ನಿಯೆಂಬ ಭೂತಾಂಗದಪ್ರಕೃತಿವಿಕಾರವಾದಗುಣವಳಿದುಭಿಂನರೂಪಿನ ಹಂಗನುಬಿರಿದು । ಶಿವಲಿಂಗಕ್ಕೆವದನವಾಗಿರ್ಪುದಯ್ಯಾಯೆಂನನೇತ್ರ।ಪವನವೆಂಬಭೂತಾಂಗದಪ್ರಕೃತಿವಿಕಾರವಾದಗುಣವಳಿದುಭಿಂನಸ್ಪರ್ಶನದಹಂಗಂನುರಿದು । ಜಂಗಮಲಿಂಗಕ್ಕೆವದನವಾಗಿರ್ಪುದಯ್ಯಾಯೆಂನಸರ್ವಾಂಗವು।ಆಕಾಶವೆಂಬಭೂತಾಂಗದಪ್ರಕೃತಿವಿಕಾರವಾದಗುಣವಳಿದುಭಿನ್ನಶಬ್ದದಹಂಗನ್ನುಹರಿದು।ಪ್ರಸಾದಲಿಂಗಕ್ಕೆವದನವಾಗಿರ್ಪುದಯ್ಯಾಯೆಂನಶ್ರೋತ್ರ। ಇಂತೀಷಡ್ವಿಧಭೂತಾಂಗದಪ್ರಕೃತಿವಿಕಾರವಾದಗುಣವಳಿದುಷಡ್ವಿಧಭಿನ್ನಪದಾರ್ಥದಹಂಗಂನರಿದುಷಡ್ವಿದೇಂದ್ರಿಯಗಳಷಡ್ವಿಧಲಿಂಗಕ್ಕೆ । ವದನವಾಗಿಅಖಂಡೇಶ್ವರಾನಾನೇನೀನಾದೆಯಯ್ಯಾ ॥೫೫॥ ಯೆಂನತನುವಿನೊಳಗೆನಿಂಮತನುಅಡಗಿರ್ಪುದಯ್ಯಾ ।ನಿಂಮತನುವಿನೊಳಗೆಯೆಂನತನು ಪ್ರಅಡಗಿರ್ಪುದಯ್ಯಾ । ಯೆಂನಮನದೊಳಗೆನಿ

ಮ್ಮ ಮನವುಅಡಗಿರ್ಪುದಯ್ಯಾನಿಮ್ಮ ಮನದೊಳಗೆಯುಂನಮನವುಅಡಗಿರ್ಪುದಯ್ಯಾ । ಯುಂನಪ್ರಾಣದೊಳಗೆನಿಂಮಪ್ರಾಣ ಅಡಗಿರ್ಪುದಯ್ಯಾ। ನಿಂಮಪ್ರಾಣದೊಳಗೆಯುಂನಪ್ರಾಣಅಡಗಿರ್ಪುದಯ್ಯಾ । ಯುಂನಜೀವದೊಳಗೆ ನಿಮ್ಮಜೀವಅಡಗಿರ್ಪುದಯ್ಯಾ।ನಿಮ್ಮಜೀವದೊಳಗೆಯುಂನಜೀವಅಡಗಿರ್ಪುದಯ್ಯಾ । ಯುನ್ನ ಕರಣೇಂದ್ರಿಯಗಳೊಳಗೆನಿಂಮಕರಣಂಗಳು ಅಡಗಿರ್ಪುದಯ್ಯಾ । ನಿಂಮಕರಣಂಗಳೊಳಗೆಯುಂನಕರಣಂಗಳು ಅಡಗಿರ್ಪುದಯ್ಯಾ ಯುಂನಿಂದ್ರಿಯಂಗಳೊಳಗೆ ನಿಮ್ಮಿಂದ್ರಿಯಗಳು ಅಡಗಿರ್ಪುದಯ್ಯಾ ॥ ನಿಂಮಿಂದ್ರಿಯಗಳೊಳಗೆಯುಂನಿಂದ್ರಿಯಗಳುಅಡಗಿರ್ಪುದಯ್ಯಾ । ಯುಂನವಿಷಯಂಗಳೊಳಗೆಯೆನ್ನ ವಿಷಯಗಳುಅಡಗಿರ್ಪುದಯ್ಯಾ । ನಿಮ್ಮ ವಿಷಯಂಗಳೊಳಗೆನಿಂಮವಿಷಯಂಗಳು ಅಡಗಿರ್ಪುದಯ್ಯಾ । ನಾನುನೀವೆಂಬಭಿನ್ನ ಭಾವವಳಿದು ಪುಷ್ಪಪರಿಮಳದಂತೆ ರೂಪರುಚಿಯಂತೆ । ಆಶಿರಳಸಮರಸವಾಗಿರ್ದೆನಯ್ಯಾನಿಂಮೊಳಗೆಅಖಂಡೇಶ್ವರಾ ॥೩೬॥ ಎಂನಚಿತ್ತ ಸುಚಿತ್ತವಾಯಿತಯ್ಯಾ । ಯುಂನಬುದ್ಧಿ ಸುಬುದ್ಧಿ ಯಾಯಿತಯ್ಯಾ । ಯುನ್ನ ಅಹಂಕಾರನಿರಹಂಕಾರಮಾಯಿತಯ್ಯಾ । ಯುಂನಮನಸುಮನವಾಯಿತಯ್ಯಾಯುನ್ನಜ್ಞಾನಸುಜ್ಞಾನವಾಯಿತಯ್ಯಾ । ನಿಮ್ಮ ಮಹಾಜ್ಞಾನಸಂಗದಿಂದ ಯುನ್ನ ಸಕಲ ।ಕರಣಂಗಳು । ನಿಮ್ಮಲ್ಲಿತರಹರವಾದವಾಗಿ ಅಖಂಡೇಶ್ವರಾನಿಂಮಪರಮಪ್ರಸಾದವ್ರುಯುನಗೆಸಾಧ್ಯವಾಯಿತಯ್ಯಾ ॥೩೭॥ ಹಾಡಿದರೆ ಹಾಡುವೆನಯ್ಯಾನಿಮ್ಮ ಪರಮಪ್ರಸಾದವಂನೇ। ಬೇಡಿದರೆಬೇಡುವೆನಯ್ಯಾನಿಮ್ಮ ಪರಮಪ್ರಸಾದವನೆಅಖಂಡೇಶ್ವರಾ ॥ ೩೮ ॥ ಆನಿಮ್ಮ ಪ್ರಸಾದವೇಯುನಗೆತನುವಾಯಿತು । ನಿಮ್ಮ ಪ್ರಸಾದವೇ ಯುನಗೆಮನವಾಯಿತು । ನಿಂಮಪ್ರಸಾದವೇಯುನಗೆಪ್ರಾಣವಾಯಿತು । ನಿಮ್ಮ ಪ್ರಸಾದವೇಯುನಗೆಜೀವವಾಯಿತು । ನಿಂಮಪ್ರಸಾದವೇಯುನಗೆಕರಣೇಂದ್ರಿಯವಿಷಯಗಳಾದವು।ಇದುಕಾರಣ ಅಖಂಡೇಶ್ವರಾ ನಿಂಮಮಹಾಪ್ರಸಾದದ । ನಿಲುವಿನೊಳಗೆ ಯುರಡಳಿದುಪರಮಸುಖಿಯಾಗಿರ್ದೆನಯ್ಯಾ ॥ ಯುಂನಕರಸ್ಥಲದಲಿಂಗವನ್ನು ಮನಸ್ಥಳದಲ್ಲಿಕುಳ್ಳಿರಿಸಿ ಪ್ರಾಣವೆಂಬಭಾಜನದಲ್ಲಿಸುಗಂಧಪದಾರ್ಥವಗಡಣಿಸಿ । ಸುಚಿತ್ತವೆಂಬಹಸ್ತದಿಂದರ್ಪಿಸಿ ।ಆಸುಗಂಧಪ್ರಸಾದವಗ್ರಹಿಸಬಲ್ಲಾತನೇಪ್ರಸಾದಿ । ಜಿಹ್ವೆಯೆಂಬಭಾಜನದಲ್ಲಿಸುರಸಪದಾರ್ಥವಗಡಣಿಸಿ । ಸುಬುದ್ಧಿಯೆಂಬ ಹಸ್ತದಿಂದರ್ಪಿಸಿ।ಆಸುರಸಪ್ರಸಾದವಗ್ರಹಿಸಬಲ್ಲಾತನೇಪ್ರಸಾದಿನೇತ್ರವೆಂಬ ಭಾಜನದಲ್ಲಿ।ಸರೂಪುಪದಾರ್ಥವಗಡಣಿಸಿನಿರಹಂಕಾರವೆಂಬಹಸ್ತದಿಂದರ್ಪಿಸಿ ಆಸುರೂಪುಪ್ರಸಾದವಗ್ರಹಿಸಬಲ್ಲಾತನೇಪ್ರಸಾದಿ। ತ್ವಕ್ಕೆಂಬಭಾಜನದಲ್ಲಿ

ಸ್ಪರ್ಶನಪದಾರ್ಥವಗಡಣಿಸಿ । ಸುಮುದವೆಂಬಹಸ್ತದಿಂದರ್ಪಿಸಿ ॥ ಆಸುಸ್ಪರ್ಶನಪ್ರಸಾದವಗ್ರಹಿಸಬಲ್ಲಾನೇಪ್ರಸಾದಿ। ಶ್ರೋತ್ರವೆಂಬಭಾಜನದಲ್ಲಿಸುಶಬ್ದಪದಾರ್ಥವಗಡಣಿಸಿ ॥ ಸುಜ್ಞಾನವೆಂಬಹಸ್ತದಿಂದರ್ಪಿಸಿ । ಅಸುಶಬ್ದಪ್ರಸಾದಗ್ರಹಿಸಬಲ್ಲಾತನೇಪ್ರಸಾದಿ । ಹೃದಯವೆಂಬಭಾಜನದಲಿಸುತೃಪ್ತಿವದಾರ್ಥವಗಡಣಿಸಿಸದ್ಭಾವವೆಂಬಹಸ್ತದಿಂದರ್ಪಿಸಿತಸುತೃಪ್ತಿಪ್ರಸಾದವಗ್ರಹಿಸಬಲ್ಲಾತನೇಪ್ರಸಾದಿ । ಇಂತೀಷಡೇಂದ್ರಿಯಂಗಳೆಂಬಜನದಲ್ಲಿಷಡ್ವಿಧಪದಾರ್ಥವಗಡಣಿಸಿಷಡ್ವಿಧಹಸ್ತದಿಂದರ್ಪಿಸಿ । ಷಡ್ವಿಧಪ್ರಸಾದವಗ್ರಹಿಸಲರಿಯದೆಬರಿದೆಪ್ರಸಾದಿಗಂದರೆನಗುವನಯ್ಯಾನಂಮಅಖಂಡೇಶ್ವರಾ ॥ ೪೦ ॥ ಲಿಂಗಪ್ರಾಣದಲ್ಲಿಲಿಂಗಕ್ಕೆಲಿಂಗಗಂಧವನರ್ಪಿಸಿ । ಲಿಂಗಪ್ರಸಾದವಗ್ರಹಿಸುತಿರ್ಪನಯ್ಯಾನಿಂಮಪ್ರಸಾದಿ । ಲಿಂಗಜಿಹ್ವೆಯಲ್ಲಿಲಿಂಗಕ್ಕೆಲಿಂಗರುಚಿಯನರ್ಪಿಸಿಲಿಂಗಪ್ರಸಾದವಗ್ರಹಿಸುತಿರ್ಪನಯ್ಯಾನಿಂಮಪ್ರಸಾದಿ। ಲಿಂಗತ್ವಕ್ಕಿನಲ್ಲಿಲಿಂಗಕ್ಕೆಲಿಂಗಸ್ಪರ್ಶನವನರ್ಪಿಸಿ । ಲಿಂಗಪ್ರಸಾದವಗ್ರಹಿಸುತಿರ್ಪನಯ್ಯಾನಿಮ್ಮಪ್ರಸಾದಿ। ಲಿಂಗಶ್ರೋತ್ರದಲ್ಲಿಲಿಂಗಕ್ಕೆಲಿಂಗಶಬ್ದವನರ್ಪಿಸಿಲಿಂಗಪ್ರಸಾದವಗ್ರಹಿಸುತಿರ್ಪನಯ್ಯಾ ನಿಮ್ಮಪ್ರಸಾದಿ । ಲಿಂಗನೇತ್ರದಲ್ಲಿಲಿಂಗಕ್ಕೆಲಿಂಗರೂಪವನರ್ಪಿಸಿಲಿಂಗಪ್ರಸಾದವಗ್ರಹಿಸುತಿರ್ಪನಿಮ್ಮಪ್ರಸಾದಿ । ಇಂತೀವಳಯೊರಗೆತೆರಹಿಲ್ಲದೆಲಿಂಗಕ್ಕೆಲಿಂಗವನರ್ಪಿಸಿಪ್ರಸಾದವಗ್ರಹಿಸಿಘನಲಿಂಗವಾಗಿರ್ಪಮಹಾಪ್ರಸಾದಿಗಳಶ್ರೀಪಾದಕ್ಕೆನಮೋನಮೋಯೆಂಬೆನಯ್ಯಾ ಅಖಂಡೇಶ್ವರಾ ॥೪೧॥ ಯೆನ್ನಪ್ರಾಣದಪರಿಣಾಮವನಿಮಗರ್ಪಿತವಯ್ಯಾ। ಎನ್ನನೇತ್ರದಪರಿಣಾಮನಿಮಗರ್ಪಿತವಯ್ಯಾ ॥ಎನ್ನತ್ವಕ್ಕಿನಪರಿಣಾಮನಿಮಗರ್ಪಿತವಯ್ಯಾ ॥ ಯೆನ್ನಶ್ರೋತ್ರದಪರಿಣಾಮನಿಮಗರ್ಪಿತವಯ್ಯಾ ಯೆನ್ನಹೃದಯದಪರಿಣಾಮನಿಮಗರ್ಪಿತವಯ್ಯಾ ॥ ಯೆನ್ನಸರ್ವಾಂಗದಪರಿಣಾಮನಿಮಗರ್ಪಿತವಯ್ಯಾಅಖಂಡೇಶ್ವರಾ ॥ ೪೨ ॥ ಯೆನ್ನಪ್ರಾಣದಕೊನೆಯಲ್ಲಿಕುಳ್ಳಿರ್ದಷಡ್ವಿಧಗಂಧವೆಂಬ ಭಕ್ತಿಪದಾರ್ಥವಕೈಕೊಂಡು ಯೆನಗೆಮುಕ್ತಿಯಪ್ರಸಾದವನ್ನು ಕರುಣಿಸುವಾತನು ನೀನೇಯಯ್ಯಾ । ಯೆನ್ನಜಿಹ್ವೆಯಕೊನೆಯಲ್ಲಿಕುಳ್ಳಿರ್ದ ಷಡ್ವಿಧರಸವೆಂಬಭಕ್ತಿಯಪದಾರ್ಥವಕೈಕೊಂಡು ಯೆನಗೆ ಮುಕ್ತಿಪ್ರಸಾದವನ್ನು ಕರುಣಿಸುವಾತನು ನೀನೇಯಯ್ಯಾ । ಯೆನ್ನನೇತ್ರಂಗಳಕೊನೆಯಲ್ಲಿ ಕುಳ್ಳಿರ್ದ ಷಡ್ವಿಧ ರೂಪುವೆಂಬ ಭಕ್ತಿಪದಾರ್ಥವಕೈಕೊಂಡುಯೆನಗೆಮುಕ್ತಿಯಪ್ರಸಾದವನ್ನು ಕರುಣಿಸುವಾತನುನೀನೆಯಯ್ಯಾ । ಯೆನ್ನತ್ವಕ್ಕಿನಕೊನೆಯಲ್ಲಿ ಕುಳ್ಳಿರ್ದ ಷಡ್ವಿಧಸ್ಪರ್ಶನವೆಂಬ ಭಕ್ತಿಪದಾರ್ಥವ ಕೈಕೊಂಡುಯೆನಗೆ ಮುಕ್ತಿಪ್ರಸಾದವಕ

ರುಣಿಸುವಾತನು ನೀನೆಯಯ್ಯಾ । ಯನ್ನ ಶ್ರೋತ್ರಗಳಕೊನೆಯಲ್ಲಿ ಕು
ಳ್ಳಿರ್ದು ಷಡ್ವಿಧಶಬ್ದವೆಂಬ ಭಕ್ತಿಪದಾರ್ಥವ ಕೈಕೊಂಡುಯನಗೆ ಮುಕ್ತಿ
ಪ್ರಸಾದವನು ಕರುಣಿಸುವಾತನುನೀನೆಯಯ್ಯಾ ॥ ನನ್ನ ಹೃದಯುದಕೊನೆ
ಯಲ್ಲಿಕುಳ್ಳಿರ್ದು ಷಡ್ವಿಧತೃಪ್ತಿಯುಂಬ ಭಕ್ತಿಪದಾರ್ಥವನ್ನು ಕೈಕೊಂಡು
ಯನಗೆಮುಕ್ತಿ ಪ್ರಸಾದವನ್ನು ಕರುಣಿಸುವಾತನು ನೀನೇಯಯ್ಯಾ ಅಖಂ
ಡೇಶ್ವರಾ॥೪೩॥ ಎನ್ನ ಶ್ರೋತ್ರಗಳುಶಬ್ದವಗ್ರಹಿಸುವದಕ್ಕೆ ಮೊದಲೇನಿಮು
ಗರ್ಪಿತವಯ್ಯಾ । ಎನ್ನ ನೇತ್ರಗಳು ರೂಪವಗ್ರಹಿಸುವದಕ್ಕೆ ಮೊದಲೇನಿ
ಮುಗರ್ಪಿತವಯ್ಯಾ । ಎನ್ನ ಘ್ರಾಣವುಗಂಧವಗ್ರಹಿಸುವದಕ್ಕೆ ಮೊದಲೇನಿ
ಮುಗರ್ಪಿತವಯ್ಯಾ । ಎನ್ನ ಜಿಹ್ವೆಯುರುಚಿಯುಗ್ರಹಿಸುವದಕ್ಕೆ ಮೊದಲೇನಿ
ಮುಗರ್ಪಿತವಯ್ಯಾ । ಎನ್ನ ತ್ವಕ್ಕುಸ್ಪರ್ಶನವಗ್ರಹಿಸುವದಕ್ಕೆ ಮೊದಲೇನಿ
ಮುಗರ್ಪಿತವಯ್ಯಾ । ಇದುಕಾರಣ ಅಖಂಡೇಶ್ವರನೇ ನಿಮುಗರಿದುಕೊಡಬೇ
ಕೆಂಬಕಂಡಿತಭಾವವುಅಖಂಡಮನವಾಯಿತಯ್ಯಾ ॥ ೪೪ ॥ ಎನ್ನ ಘ್ರಾಣಸ
ಮರಸವಾಯಿತಯ್ಯಾ । ನಿಮ್ಮಗಂಧಪ್ರಸಾದವಗ್ರಹಿಸಿ ನಿಂವೊಳಗೆ । ಎಂ
ನಜಿಹ್ವೆಸಮರಸವಾಯಿತಯ್ಯಾ । ನಿಮ್ಮರುಚಿಯುಪ್ರಸಾದವಗ್ರಹಿಸಿ । ನಿ
ಮ್ಮೊಳಗೆಯೆನ್ನನೇತ್ರ ಸಮರಸವಾದವಯ್ಯಾ । ನಿಮ್ಮರೂಪಪ್ರಸಾದವಗ್ರ
ಹಿಸಿನಿಮ್ಮೊಳಗೆ । ಎನ್ನ ತ್ವಕ್ಕು ಸಮರಸವಾಯಿತೆಯ್ಯಾ । ನಿಮ್ಮಸ್ಪರ್ಶನ
ಪ್ರಸಾದವಗ್ರಹಿಸಿ । ನಿಮ್ಮೊಳಗೆಯನ್ನ ಶ್ರೋತ್ರಸಮರಸವಾದವಯ್ಯಾ।ನಿ
ಮ್ಮಶಬ್ಧಪ್ರಸಾದನಗ್ರಹಿಸಿನಿಮ್ಮೊಳಗೆ । ಯನ್ನ ಹೃದಯಸಮರಸವಾಯಿ
ತಯ್ಯಾ । ನಿಮ್ಮತೃಪ್ತಿಪ್ರಸಾದವಗ್ರಹಿಸಿ ನಿಮ್ಮೊಳಗೆಯನ್ನ ಸರ್ವಾಂಗವು
ಸಮರಸವಾಯಿತಯ್ಯಾ । ನಿಮ್ಮಮಹಾ ಪ್ರಸಾದವಗ್ರಹಿಸಿ ನಿಮ್ಮೊಳಗೆ ॥
ಅಖಂಡೇಶ್ವರಾ ॥೪೫॥ ಎನ್ನ ತನುವುನಿಮ್ಮತೃಪ್ತಿಪ್ರಸಾದವನೆಸೋಂಕುತಿ
ರ್ಪುದಯ್ಯಾ ।ಎನ್ನ ಮನವು ನಿಮ್ಮಪ್ರಸಾದವನೆಹಾರೈಸುತಿರ್ಪುದಯ್ಯಾ ॥
ಎನ್ನ ಪ್ರಾಣವುನಿಮ್ಮಪ್ರಸಾದವನೆಹಾರೈಸುತಿರ್ಪುದಯ್ಯಾ। ಎನ್ನ ಭಾವವು
ನಿಮ್ಮಪ್ರಸಾದವನೆಹಾರೈಸುತಿರ್ಪುದಯ್ಯಾ ! ಎನ್ನ ಕರಣೇಂದ್ರಿಯಂಗಳು
ನಿಮ್ಮಪ್ರಸಾದವನೆಗ್ರಹಿಸುತಿರ್ಪವಯ್ಯಾಅಖಂಡೇಶ್ವರಾ ॥೪೬॥ ಎನ್ನ ನೇ
ತ್ರಪ್ರಸಾದವಯ್ಯಾ ।ಎನ್ನ ಶ್ರೋತ್ರಪ್ರಸಾದವಯ್ಯಾ । ಎನ್ನ ಘ್ರಾಣಪ್ರ
ಸಾದವಾಯಿತಯ್ಯಾಎನ್ನ ಜಿಹ್ವೆಪ್ರಸಾದವಾಯಿತಯ್ಯಾ । ಎನ್ನಂತನುಪ್ರ
ಸಾದವಾಯಿತಯ್ಯಾ । ಎನ್ನ ಮನವು ಪ್ರಸಾದವಾಯಿಯ್ಯಾ । ಎನ್ನ ಪ್ರಾ
ಣವುಪ್ರಸಾದವಾಯಿತಯ್ಯಾ।ಎನ್ನ ಭಾವವುಪ್ರಸಾದವಾಯಿತಯ್ಯಾ ।ಎನ್ನ
ಜೀವವುಪ್ರಸಾದವಾಯಿತಯ್ಯಾ ।ಎನ್ನ ಸಕಲಕರಣೇಂದ್ರಿಯಂಗಳೆಲ್ಲಾಪ್ರ

ಸಾದವಯ್ಯಾಅಖಂಡೇಶ್ವರಾ । ನಿಮ್ಮಮಹಾಪ್ರಸಾದದಬೆಳಗಿನೊಳಗೋಲ್ಯಾಡುತಿರ್ಪೆನಯ್ಯಾ।೪೮॥ ಎನ್ನಆಧಿವ್ಯಾಧಿಗಳೆಲ್ಲಾಪ್ರಸಾದವಯ್ಯಾ । ಎನ್ನ ಆಗುಹೋಗುಗಳೆಲ್ಲಾಪ್ರಸಾದವಯ್ಯಾ । ಎನ್ನವಿರೋಧಗಳೆಲ್ಲಾ ಪ್ರಸಾದವಯ್ಯಾ । ಎನ್ನಅರುಹುಮರುಹುಗಳೆಲ್ಲಾಪ್ರಸಾದವಯ್ಯಾ॥ ಎನ್ನ ಸುಖದುಃಖಗಳೆಲ್ಲಾಪ್ರಸಾದವಯ್ಯಾ । ಎನ್ನಮಾನಾಪಮಾನಗಳೆಲ್ಲಾ ಪ್ರಸಾದವಯ್ಯಾ । ಎನ್ನ ಚಿತ್ತುಸುಚಿತ್ತುಗಳೆಲ್ಲಾಪ್ರಸಾದವಯ್ಯಾ ॥ ಎನ್ನ ಬುದ್ಧಿಸುಬುದ್ಧಿಗಳೆಲ್ಲಾಪ್ರಸಾದಯ್ಯಾ । ಎನ್ನ ಸುಮನವ್ಯಾಕುಲಗಳೆಲ್ಲಾಪ್ರಸಾದವಯ್ಯಾ । ಎನ್ನಸಜ್ಜನವುಮತೆಗಳೆಲ್ಲಾಪ್ರಸಾದವಯ್ಯಾ। ಎನ್ನಸುಳುಹುಸಂಚಾರಗಳೆಲ್ಲಾ ಪ್ರಸಾದವಯ್ಯಾ। ಎನ್ನ ಹಾನಿವೃದ್ಧಿಗಳೆಲ್ಲಾಪ್ರಸಾದವಯ್ಯಾ। ಎನ್ನಭಯಭೀತಿಗಳೆಲ್ಲಾ ಪ್ರಸಾದವಯ್ಯಾ। ಎನ್ನ ಲಜ್ಜೆಮೋಹಗಳೆಲ್ಲಾಪ್ರಸಾದವಯ್ಯಾ । ಎನ್ನಜ್ಞಾನಾಜ್ಞಾನಗಳೆಲ್ಲಾ ಪ್ರಸಾದವಯ್ಯಾ । ಎನ್ನ ಭಾವಸದ್ಭಾವಗಳೆಲ್ಲಾ ಪ್ರಸಾದವಯ್ಯಾ। ಎನ್ನತತ್ವ ಕೋರಿಕೆಗಳೆಲ್ಲಾ ಪ್ರಸಾದವಯ್ಯಾ । ಎನ್ನ ಒಳಹೊರಗೆ ಪ್ರಸಾದವಯ್ಯಾ। ಎನ್ನ ಕೀಳುಮೇಲುಗಳೆಲ್ಲಾ ಪ್ರಸಾದವಯ್ಯಾ। ಎನ್ನಯುಡಬಲವೆಲ್ಲಾಪ್ರಸಾದವಯ್ಯಾ। ಇಂತಾಗಿ ಅಖಂಡೇಶ್ವರನೆಂಬಪ್ರಸಾದ ಶರಧಿಯೊಳಗೆನಾನೆಂಬುದು ಮುಳಿಗಿನೆಲೆದಪ್ಪಿಹೋದೆನಯ್ಯಾ ॥ ಪೃಥ್ವೀ ಆಕಾಶದೊಳಗೆಲ್ಲಾ ನಿಮ್ಮಪ್ರಸಾದದ ಬೆಳಗುತುಂಬಿರ್ಪುದಯ್ಯಾ । ಯಲ್ಲಿಡೆಯಲ್ಲಿನಿಂಮಮಹಾಪ್ರಸಾದದಬೆಳಗುತುಂಬಿರ್ಪುದಯ್ಯಾ । ಇಲ್ಲುಂಟುಅಲ್ಲಿಲ್ಲವೆಂಬುವದಕ್ಕೆತೆರಹಿಲ್ಲವಯ್ಯಾ ಅಖಂಡೇಶ್ವರಾ ॥ ೪೯ ॥ ಕಾಯವಿಲ್ಲದಪುರುಷನು । ಕಸವಿಲ್ಲದಭೂಮಿಯಲ್ಲಿಕಾಮಿತವಿಲ್ಲದಬೀಜವಬಿತ್ತಲು ಅದುಅಂಕುರಿಸಿಎಡೆಯುರಡಾಯಿತು । ಶಾಖೆಮೂರಾಯಿತು । ಕೊಂಬೆಆರಾಯಿತು । ಕುಸುಮವುವ್ವತ್ತಾರಾಯಿತು ॥ ಕಾಯಿಇನ್ನೂರಾಹದಿನಾರಾಯಿತು। ಹಂಣುವಿಶ್ವಪರಿಪೂರ್ಣವಾಯಿತು । ಅದು ಅಜಾಂಡರಸ ತುಂಬಿಬಟ್ಟಲಲ್ಲಿಯುಬತೂಟ್ಟುಬಿತ್ತು। ಆಹಂಣ್ಣನಾನೂಕಂಣಿಲ್ಲದೆನೋಡಿದೆ।ಕೈಯಿಲ್ಲದೆಮುಟ್ಟಿದೆ । ಬಾಯಿಲ್ಲದೆಸವಿದು ।ಮನವಿಲ್ಲದೆಸರಿಣಾಮಿಪದೆನಾಗಿಅಖಂಡೇಶ್ವರನುತಂನೂಳಗೆಯಿಂಬಿಟ್ಟುಕೊಂಡನು ॥೫೦॥ ಆದಿಮುಡಿಯಿಲ್ಲದಪ್ರಸಾದ । ನಡುಕಡೆಯಿಲ್ಲದಪ್ರಸಾದ । ಯಡೆಬಿಡವಲ್ಲದಪ್ರಸಾದ।ಅಕಂಡೇಶ್ವರಾನೀವೆಂಬಮಹಾಘನಪರಾತ್ಪರಪರಿಪೂರ್ಣ ।·ಪ್ರಸಾದದೊಳಗೆಮನವಡಗಿನೆನಹುನಿಷ್ಪತ್ತಿಯಾಗಿಯೇನುನರಿಯದಿರ್ದೆನಯ್ಯಾಅಖಂಡೇಶ್ವರಾ॥ ॥೫೧॥

## —ಪ್ರಾಣಲಿಂಗಿಯಸ್ಥಲವು.—

ಪ್ರಾಣವಾಯುಗಳಸಂಚಳಗುಣವಳಿದಿರಬೇಕು। ಮುಂಚುವಕರಣಂಗಳವರ್ತನೆಯುಗತಿಗಳಳಿದಿರಬೇಕು।ಲಿಂಗದಲ್ಲಿಅಚ್ಚೊತ್ತಿದಂತಿರಬೇಕುಪ್ರಾಣವುಲಿಂಗದಲ್ಲಕೂಡಿ। ಲಿಂಗಪ್ರಾಣದಲ್ಲಿಕೂಡಿ।ಭಿನ್ನವಿಲ್ಲದೇಕಸಮರಸವಾಗಿರಬೇಕು। ಸುಖದುಃಖನಾಸ್ತಿಯಾಗಿರಬೇಕು ।ಇಷ್ಟುವುಳ್ಳಾತನೇಪ್ರಾಣಲಿಂಗಿ । ಅದೆಂತೆಂದೊಡೆ॥ ಶ್ಲೋ । ವಾಯುಪ್ರಾಣಗುಣಾಲಿಂಗಿ ಲಿಂಗಪ್ರಾಣಸಮೋಹಿತಃ । ಸುಖದುಃಖಭವಂನಾಸ್ತಿಪ್ರಾಣಲಿಂಗಸ್ಥಲಂಭವೇತ್॥೧॥ ಎಂದುದಾಗಿ ಇಂತಪ್ಪಪ್ರಾಣಲಿಂಗಿಗಳಶ್ರೀಪಾದಕ್ಕೆನಮೋನಮೋಯೆಂಬೆನಯ್ಯಾ ॥ಅ॥ ಪ್ರಾಣಿಲಿಂಗಿಯೆಂದುಪ್ರಾಣಲಿಂಗವನುಡಿಗಡಣವ। ಕಲಿತುನುಡಿಯುವರೆಲ್ಲಾ ಪ್ರಾಣಲಿಂಗದಹೊಲಬುನರಿಯ ಪ್ರಾಣಲಿಂಗದಸ್ಥಲವನರಿಯದೆ । ಪ್ರಾಣಲಿಂಗದಬೆಳಗನರಿಯದೆ ।ಪ್ರಾಣಲಿಂಗದಕಳೆಯನರಿಯರು । ಪ್ರಾಣಲಿಂಗದಮನೆವನಿಮ್ಮ ಅನಾಥನಾಥಪ್ರಾಣಲಿಂಗಿಯೇಬಲ್ಲನಲ್ಲದೆವುಳಿದಾದಪ್ರಪಂಚದೇಹಿಗಳೆಂತುಬಲ್ಲರಯ್ಯಾ ॥ಅ।೨॥ ಕ್ಷೀರದರುಚಿಯಹಂಸಬಲ್ಲದಲ್ಲದೆನೀರೊಳಗಿರ್ದನೀರಕೋಳಿತ್ತಬಲ್ಲದಯ್ಯಾ ।ಕಬ್ಬಿನಸ್ವಾದವನುದಗಜಬಲ್ಲದಲ್ಲದೆ ಸೋಗೆಯತಿಂಬಕುರಿಯತ್ತಬಲ್ಲದಯ್ಯಾ । ಪುಷ್ಪದಪರಿಮಳವಭ್ರಮರಬಲ್ಲದಲ್ಲದೆ ಮರವಕಡಿದಹುಳವೆತ್ತಬಲ್ಲದಯ್ಯಾ । ಆದಿಯಸ್ಥಳಕುಲದನಿರ್ಣಯವ ಅನಾದಿಶರಣಬಲ್ಲನಲ್ಲದೆಯಿಲೋಕದಗಾದೆಯಮನುಜರುಯತ್ತಬಲ್ಲರಯ್ಯಾ ॥೩॥ ಪಿಂಡದೊಳಗೆಪ್ರಾಣವಿರ್ಪುದನೆಲ್ಲರುಬಲ್ಲರಲ್ಲದೆಪ್ರಾಣದೊಳಗೆಶಬ್ದಇರ್ಪುದನ್ಯಾರುಅರಿಯರಲ್ಲಾ । ಪ್ರಾಣದೊಳಗೆಶಬ್ದಇರ್ಪುದನೆಲ್ಲರುಬಲ್ಲರಲ್ಲದೆ ಶಬ್ದದೊಳುನಾದಯಿರ್ಪುದನ್ಯಾರುಅರಿಯರಲ್ಲಾ ಶಬ್ದದೊಳಗೆನಾದಯಿರ್ಪುದುಬಲ್ಲರಲ್ಲದೆನಾದದೊಳಗೆ । ಮಂತ್ರಯಿರ್ಪುದನ್ಯಾರು ಅರಿಯರಲ್ಲಾ । ಅದರೊಳಗೆ ಮಂತ್ರಯಿರ್ಪುದನೆಲ್ಲರುಬಲ್ಲರಲ್ಲದೆ। ಮಂತ್ರದೊಳಗೆ ಶಿವನಿರ್ಪುದನ್ಯಾರುಅರಿಯರಲ್ಲಾ । ಮಂತ್ರದೊಳಗೆಶಿವನಿರ್ಪುದನೆಲ್ಲರುಬಲ್ಲಿರಲ್ಲದೆಆಶಿವನಕೂಡುವಅವಿರಳಸಮರಸಮಂಯಾರುಅರಿಯರಲ್ಲ ಅಖಂಡೇಶ್ವರಾ ॥೪॥ ವೇದಶಾಸ್ತ್ರಆಗಮಪುರಾಣತರ್ಕವ್ಯಾಕರಣಇತಿಹಾಸಗಳನೋದಿ ಕೇಳಿಹೇಳುವಾತ ಜಾಣನೆಅಲ್ಲಲ್ಲಾ । ಚಾತಿಗೊಂದು ಮಾತುಕಲಿತುಸರ್ವರಿಗುಹೇಳುವಾತಜಾಣನೆಅಲ್ಲಲ್ಲಾ । ಮತ್ತಾವನುಜಾಣನಂದರೆ। ಮಂದಮತಿಯಂಬಕತ್ತಲೆಯಕಳೆದು ತಥ್ಯಮಿಥ್ಯರಾಗದ್ವೇಷಗಳನುಳಿದುನಿತ್ಯಲಿಂಗದಲ್ಲಿ ।ಚಿತ್ತವಡಗಿರ್ಪಚಿನ್ಮಯಶರಣನೇಜಾಣನಯ್ಯಾ

ಅಖಂಡೇಶ್ವರಾ॥ವೇದವನೋದಿದವೇದಜ್ಞರುಸರಿಯಲ್ಲ। ಶಾಸ್ತ್ರವನೋ
ದಿದಶಾಸ್ತ್ರಗಳುಸರಿಯಲ್ಲ। ಆಗಮವನೋದಿದಆಗಮಜ್ಞರುಸರಿಯಲ್ಲ।
ಆದಿಅನಾದಿಯಿಂದತತ್ತ್ವಾದಮಹಾಘನವಸ್ತುವನೊಡಗೂಡಿದವೆಶರಣಂಗೆ।
ಇವರ್ಯಾರುಸರಿಯಲ್ಲವಯ್ಯಾಅಕಂಡೇಶ್ವರಾ ॥ ೬॥ವೇದಂಗಳು ನಿಮ್ಮ ಭೇ
ದಿಸಿಕಂಡಿಹವೆಂದರೆ। ಕಾಣಲರಿಯದೆಬಳಲಿಬೆಂಡಾಗಿಹೋದವುಶಾಸ್ತ್ರಂಗ
ಳುಸಾದಿಸಿಕಂಡಿಹವೆಂದರೆ ಕಾಣಲರಿಯದೆಸಂದೇಹಕ್ಕೊಳಗಾಗಿಹೋದವು
ಆಗಮಂಗಳುಅರಿಸಿಕಂಡಿಹೆವೆಂದರೆ ಕಾಣಲರಿಯದೆ ಮೂಗಾಗಿಹೋದವು
ಯಿಂತೀವೇದಶಾಸ್ತ್ರಆಗಮಂಗಳನೋದಿ ನಿಮ್ಮಕಂಡಿಹವೆಂಬವರೆಲ್ಲಾ ಯಿಂ
ನತ್ತ ಕಂಡಿಹರಯ್ಯಾ ಅಖಂಡೇಶ್ವರಾ ।೭। ವೇದಂಗಳಿಗೆ ಅಭೇದ್ಯನಾದಶಿ
ವನಭೇದಿಸಿಕಂಡರುನೋಡಾಶರಣಶರಣರು।ಶಾಸ್ತ್ರಂಗಳಿಗೆಸಾಧ್ಯನಾದಶಿವ
ನಸಾಧಿಸಿಕಂಡರುನೋಡಾಶರಣರು । ಆಗಮಂಗಳುಮಿತಿಹಾಸತಕ್ಕ ಸಾ
ಧ್ಯನಾದಶಿವನಅರಸಿಕಂಡರುನೋಡಾಶರಣರು । ಅಗಮ್ಯಅಪ್ರಮಾಣವಾ
ದ ಪರಶಿವಂಪ್ರಮಾಣಿಸಿಕಂಡು ವಳಹೊಕ್ಕುಬೆರಸಿದನುನೋಡಾ ನಿಮ್ಮಶರ
ಣರು ಅಖಂಡೇಶ್ವರಾ ॥೮॥ ಇತರರಹಳಿದುತನ್ನಬಂಣಿಸುವನಕ್ಕರ । ಶಿವಜ್ಞಾ
ನಿಯಂತಪ್ಪನೆಯ್ಯಾ । ಹಂಮುಬಿಂಮುಹಂಮೆಹಿರಿಯತನವುಳ್ಳನಕ್ಕಾ ಶಿವ
ಜ್ಞಾನಿಯುಂಪ್ಪನೆಯ್ಯಾ। ಅಶೆ ವೇಷ ಕ್ಲೇಶ ತಾಮಸವುಳ್ಳನಕ್ಕಾಶಿವಾನು
ಭಾವಿಯುಂತಪ್ಪನಯ್ಯಾ ಅಖಂಡೇಶ್ವರಾ ॥೯॥ಅನುಭಾವಅನುಭಾವವೆಂದು
ನುಡಿವುತಿರ್ಪಗೆಲ್ಲಿರು । ಅನುಭಾವದಕೀಲವನ್ಯಾರು ಅರಿಯರೆಲ್ಲಾ । ಅನು
ಭಾವವೆಂದರೆಅಂತರಂಗದ ಹೃದಯಕಮಲದಷ್ಟದಳಂಗಳಮೆಟ್ಟಿಚರಿಸುವ
ಜೀವಹಂಸನಕೊಂದು ಇಂದ್ರದಿಕ್ಕಿನಲ್ಲಿತೋರುವಭಕ್ತಿಯನಳಿದು। ಅಗ್ನಿ
ದಿಕ್ಕಿನಯೆಸಳಿನಲ್ಲಿತೋರುವ ವೈಶ್ಯವಿಕಾರವೆಮುಸುಳಿಸಿ । ನೈರುತ್ಯದಿಕ್ಕಿ
ನಯೆಸಳಿನಲ್ಲಿತೋರುವಪಾಪದುಷ್ಕೃತಪಲ್ಲಟಿಸಿ । ವರುಣದಿಕ್ಕಿನಯೆಸಳಿ
ನಲ್ಲಿತೋರುವಮರದಗಮನವಪರಿಹರಿಸಿ । ವಾಯುವ್ಯದಿಕ್ಕಿನ ಯೆಸಳಿನಲ್ಲಿ
ತೋರುವದುಸ್ಸಂಚಾರವದೂರಮಾಡಿ । ಕುಬೇರದಿಕ್ಕಿನಯೆಸಳಿನಲ್ಲಿತೋ
ರುವದ್ರವ್ಯದಾಶೆಯಧಿಕ್ಕರಿಸಿ । ಈಶಾನ್ಯದಿಕ್ಕಿನಯೆಸಳಿನಲ್ಲಿತೋರುವವ
ನಿತಾದಿವಿಷಯಗಳಪ್ರಪಂಚವನೀಡಾಡಿನೂಂಕಿ । ಇಂತೀಅಷ್ಟದಳಂಗಳ
ಮೆಟ್ಟಿದುತೋರುವಪ್ರಕೃತಿಗುಣಗಳನಷ್ಟಮಾಡಿ। ನಟ್ಟನಡುಚೌದಳದಮ
ಧ್ಯದಲ್ಲಿರ್ಪಪರಬ್ರಹ್ಮವನಟ್ಟಿಗೆನೋಡಿಕೂಡಿ ॥ ಅಷ್ಟಾವಧಾನಿಯಾಗಿಅಚ
ಲಿತಜ್ಞಾನದಲ್ಲಿಸುಳಿಯಬಲ್ಲಾತನೇನಿಜಾನುಭಾವಿ । ಆತನೇನಿತ್ಯಮುಕ್ತನು
ಆತನೆನಿರ್ಭೇದ್ಯನು ಇಂತೀಭೇದವನರಿಯದೆ । ಮಾತುಕಲಿತಭೂತನಂತೆಆ

ಮಾತುಈಮಾತು ಹೊಸಮಾತುಗಳ ಕಲಿತು । ಕಂಡಕಂಡಲ್ಲಿ ನಿಂದನಿಂದಲ್ಲಿ ಹರಟೆಗುಟ್ಟುವವಣಹರಟಕಾರರ ಶಿವಾನುಭಾವಿಯೆಂಬರೆನಯ್ಯಾ॥ಅ॥೧೦ ತನುವಿನಮಧ್ಯದಲ್ಲಿಹೂಳಿರ್ದಯಿಷ್ಟಲಿಂಗದಲ್ಲಿ। ತನುವನಿಕ್ಷೇಪವಮಾಡಬಲ್ಲಗೆ ಅನುಭಾವಿಯೆಂಬೆನು। ಇಂತೀಅನುಭಾವದಅನುವನರಿಯದೆ ।ತನುವಿನಕೈಯಲ್ಲಿಘನಲಿಂಗವಹಿಡಿದಿರ್ದರೇನು । ಅದುಹುಟ್ಟುಕುರುಡನಕೈಯಲ್ಲಿಕನ್ನಡಿಯಕೊಟ್ಟಂತೆಕಾಣಾ ಅಖಂಡೇಶ್ವರಾ ॥೧೧॥ಅನುಭಾವಿಯಾದಡೆ ತಿರುಳುಕರಗಿದಹುರಿದಬೀಜದಂತಿರಬೇಕು । ಅನುಭಾವಿಯಾದರೆಸುಟ್ಟಸರವೆಯಿದ್ದಹಾಗೆಯಿರಬೇಕು। ಅನುಭಾವಿಯಾದರೆದಗ್ಧಪಟನ್ಯಾಯದಂತಿರಬೇಕು । ಅನುಭಾವಿಯಾದರೆದರ್ಪಣನೊಳಗಣಪ್ರತಿಬಿಂಬದಂತಿರಬೇಕು। ಅನುಭಾವಿಯಾದರೆಕರಡಳಿದ ಕರ್ಪೂರದಂತಿರಬೇಕು । ಇಂತಪ್ಪಮಹಾಜ್ಞಾನಿಗಳುಆವಲೋಕದೊಳುಅಪೂರ್ವವಯ್ಯಾ ॥ಅ॥೧೨॥ ಲಿಂಗದನಡೆಲಿಂಗದನುಡಿಲಿಂಗದನೋಟ ।ಲಿಂಗದಬೇಟ।ಲಿಂಗದಲ್ಲಿಮನವಡಗಿರ್ದಲಿಂಗಾನುಭಾವಿಗಳಸಂಗದಲ್ಲಿರಿಸಿಸಲಹು ಯೆನ್ನ ॥ಅ॥೧೩॥ ಕಾಯಜೀವದಕೀಲನರಿದು। ಜನನಮರಣಂಗಳಾಯಾಸವಳಿದು । ಅಂಗಲಿಂಗದೊಳಗೇಕಾರ್ಥವಮಾಡುವಭೇದವೆಂತೆಂದಡೆ ।ಪಂಚಭೂತಂಗಳಪೂರ್ವಾಶಯವನಳಿದು । ಪಂಚಕರಣಂಗಳಹಂಚುಹರಿಯಮಾಡಿ । ಕರ್ಮಬುದ್ಧೀಂದ್ರಿಯಂಗಳ ಮರ್ದಿಸಿ। ದಶವಾಯುಗಳಕೆಡಿಸಿ । ಕರಣಚತುಷ್ಟಯಗಳಕಾಲಮುರಿದು । ಪಂಚವಿಷಯತತ್ವಂಗಳವಂಚನೆಯನಳಿದು । ಹಸ್ತನಾಡಿಗಳವ್ಯತಿಕರಿಸಿ। ಅಷ್ಟತನುಅಷ್ಟಾತ್ಮಗಳನಷ್ಟಮಾಡಿ। ಅಂತರಂಗದಅಷ್ಟಮದಂಗಳನ್ನುತರಿದು।ಬಹಿರಂಗದಮದಂಗಳಬಾಯಟೊಳದು । ಅಷ್ಟಮೂರ್ತಿಮದಂಗಳ ಹೊಟ್ಟುಗುಟ್ಟಿ । ಸಪ್ತವ್ಯಸನಂಗಳಬಾಸಣಿಸಿ ॥ ಷಡೂರ್ಮಿಷಡ್ವರ್ಗಂಗಳಕೆಡೆಮೆಟ್ಟಿ । ಷಡ್ಭ್ರಮೆಷಡ್ಭಾವದವಿಕಾರಂಗಳಗಂಟುಸಡಲಿಸಿ। ಪಂಚಕ್ಲೇಶಂಗಗಪರಿಹರಿಸಿ । ಅಂಗಚತುಷ್ಟಯಂಗಳಶೃಂಗಾರವನಳಿದು । ಗುಣತ್ರಯಂಗೊಡಮುಚ್ಚಿ । ಅಹಂಕಾರತ್ರಯಗಳಶಂಕೆಗೊಳಗುಮಾಡಿ।ತಾಪತ್ರಯಂಗಳಭಿನ್ನಮಾಡಿತಲ್ಲಣಗೊಳಿಸಿ ತನತ್ರಯಂಗಳ ತರಹರಮಾಡಿ । ಜೀವತ್ರಯಂಗಳಆತ್ಮತ್ರಯಂಗಳಘಾತುಗೆಡಿಸಿ ।ಅವಸ್ಥಾತ್ರಯಂಗಳಅವಗುಣವಳಿದು । ತ್ರಿದೋಷಂಗಳುಪಲ್ಲಟವಾಗಿ ॥ ಭಾವತ್ರಯಂಗಳಬಂಣಗೆಡಿಸಿ।ದುರ್ಭಾವತ್ರಯಂಗಳದೂರಮಾಡಿ ।ಮಲತ್ರಯಂಗಳಮರ್ದನಮಾಡಿ। ಕರಣಂಗಳಛಿದ್ರಗೊಳಿಸಿ ಪಂಚಾಗ್ನಿಗಳಸಂಚಲವನತಿಲ್ಲಳೆದು । ಇಂತೀಅಂಗನಪ್ರಲ್ಲಾಕೃತಿಗುಣಗಳೆಷ್ಟವಾಗಿ ಸರ್ವಾಂಗದಲ್ಲಸರ್ವಾಚಾರನಲೆಗೊಂಡು

ಬಹಿರಂಗದಮೇಲಿರ್ಪ ಇಷ್ಟಲಿಂಗದಲ್ಲಿನೈಷ್ಟಿಕಾಭಾವದಿಂದ ಯಿಂಬುಗೊಂ ಡುಅನಿಮಿಷದೃಷ್ಟಿಅಚಲಿತವಾಗಿಬಲಿದಿರಲು। ಆಲಿಂಗವು ಅಂತರಂಗಕ್ಕೆ ವೇದಿಸಿ ಪ್ರಾಣಲಿಂಗವೆನಿಸಿಕೊಂಡು ಷಡಾಚಾರಚಕ್ರಂಗಳಲ್ಲಿ ಷಡ್ವಿಧಲಿಂ ಗವಾಗಿನೆಲೆಗೊಂಬುದು। ಆ ಷಡ್ವಿಧಲಿಂಗಕ್ಕೆಷಡೇಂದ್ರಿಯಗಳನೆ ಷದ್ವಿಧ ಮುಖಂಗಳೆಂದೆಣಿಸಿ। ಆ ಷಡ್ವಿಧಮುಖಂಗಳಿಗೆಷಡ್ವಿಧವಿಷಯಂಗಳನೆ।ಷ ಡ್ವಿಧದ್ರವ್ಯಪದಾರ್ಥಂಗಳೆಂದೆನಿಸಿ। ಷಡ್ವಿಧದ್ರವ್ಯಪದಾರ್ಥಂಗಳನ್ನು ಷ ಡ್ವಿಧಲಿಂಗಕ್ಕೆಷಡ್ವಿಧಭಕ್ತಿಯಿಂದನೆಸಮರ್ಪಿತವಾಗಲು।ಅಂಗವೆಂಬಕುರು ಹಡಗಿ। ವಳಹೊರಗೆಲ್ಲಾಮಹಾಲಿಂಗದ ದಿವ್ಯಪ್ರಕಾಶವೇತುಂಬಿ ತೊಳಗಿ ಬೆಳಗುತಿರ್ಪದು। ಇಂತಪ್ಪಘನಲಿಂಗದಬೆಳಗನೊಳಕೊಂಡಿರ್ಪಭೇದಾಂಗ ವೇ ಚಿತ್ಪಿಂಡವೆನಿಸುವದು। ಇಂತಪ್ಪಅತಿಸೂಕ್ಷ್ಮವಾದಚಿತ್ಪಿಂಡದವಿಸ್ತಾ ರವನುಚಿದ್ಬ್ರಹ್ಮಾಂಡದಲ್ಲವೇದಿಸುವದು।ಆಚಿದ್ಬ್ರಹ್ಮಾಂಡದಅತಿಬಾಹು ಳ್ಯವನ್ನು ಆ ಚಿತ್ಪಿಂಡದಲ್ಲಿವೇದಿಸಿಕೊಂಡು।ಪಿಂಡಬ್ರಹ್ಮಾಂಡಯೋರೈಕ್ಯ ವೆಂಬ ಶೃತಿಪ್ರಮಾಣದಿಂದೆ ಆಪಿಂಡಬ್ರಹ್ಮಾಂಡಗಳು ವಂದೇಯೆಂದುಕಂಡು। ಆಪಿಂಡಬ್ರಹ್ಮಾಂಡಗಳಿಗೆತಾನೇಆಧಾರವೆಂದುತಿಳಿದುಆಪಿಂಡಬ್ರಹ್ಮಾಂಡದ ಮರದಕೊನೆಯಲ್ಲಿಅಡಗಿಸಿ। ಜ್ಞಾನವಮಹಾಜ್ಞಾನದಲ್ಯಡಗಿಸಿಮಹಾಜ್ಞಾನವ ನ್ನುಪರಾತ್ಪರವಾದಪರಿಪೂರ್ಣಪರಬ್ರಹ್ಮದಲ್ಲಿಅಡಿಗಿಸಿ ॥ ಆಪರಬ್ರಹ್ಮವೇ ತಾನಾದಶರಣಂಗೆ ದೇಹಭಾವವಿಲ್ಲದೆಹೋಗಿ ಭಾವವಿಲ್ಲವಾಗಿಜೀವಭಾವವಿ ಲ್ಲವಾಗಿ। ಫಲಪಥದಹಂಗಿಲ್ಲವಾಗಿಭವಬಂಧನಗಳುಮುನ್ನವೇಯಿಲ್ಲವಾಗಿಆಶ ರಣತಾನುಮುಂತಿರ್ದಂತೆಪರಬಹ್ಮವೆಯಾಗಿ। ಆತನಹೃದಯಾಕಾಶವು ಬ ಚ್ಚಬಯಲಬರಿಯುಚ್ಚಬಯಲನ್ನೈದಿರ್ಪುದು। ಇದುಕಾರಣಆಶರಣನುದೇಹ ವಿರ್ದುಸುಟ್ಟರುಮಿಯಂತೆನಿರ್ದೇಹಿಯಾದಕಾರಣಉಪಮಾತೀತ। ವಾಙ್ಮ ನಕಗೋಚರವಾಗಿರ್ಪರಯ್ಯಾ ॥ ಪರಾತ್ಪರವಸ್ತುವಿನಪೊಡಗೂಡಿದಪ್ರಾಣ ಲಿಂಗಿಯುವಡಲಬೆಳಗಿನಗಗಡಣವೆಂತಿರ್ಪುದೆಂದಡೆ। ಸ್ಪಟಿಕದಘಟದೊಳಗೆ ಜ್ಯೋತಿಯನಿರಿಸಿದಂತೆ। ಕತ್ತಲೆಯಮನೆಯಲ್ಲಿರತ್ನವಹರಹಿದಂತೆರನ್ನದ ಪಿರಿಗೆರವಿಕೋಟಿಕಿರಣಗಳುಮುಸುಕಿದಂತೆ। ಬೆಳಬೆಳಗುಹಳಚಿಮಹಾಬೆಳ ಗಿ ನೊಬ್ಬುಳಿಯನೊಳಕೊಂಗ ಜನಗಂಭೀರವಾದ ಪ್ರಾಣಲಿಂಗಿಗಳಪಾದ ಕಮಲದಲ್ಲಿಸಮತೆತುಂಬಿರಿಸಯ್ಯಾಎನ್ನಅಖಂಡೇಶ್ವರಾ ॥ ೧೫ ॥ ಚಿತ್ತನಿ ರ್ಮಲವಾದಾತನು ಭಕ್ತಿಯಿಂದೆಸತ್ಯಶರಣರಲ್ಲಿ। ತತ್ವಾನುಭಾವವನೊಳ ಕೊಂಡನಿತ್ಯಶಿವನಪದವ ಪುಟ್ಟಸುವದಕ್ಕೆ ತಡವಿಲ್ಲವಯ್ಯಾ ॥ ೧೬ ॥ ಸರ್ವ ಜ್ಞನುನೀನಯ್ಯಾ ಸರ್ವೇಶ್ವರನುನೀನಯ್ಯಾ। ಸರ್ವಾಂತರ್ಯಾಮಿ ನೀನ

ರಿಸದಡು| ಅವನಕ್ರಿಯವುನಿಷ್ಫಲವುನೋಡಾ ಅಖಂಡೇಶ್ವರಾ ||೯|| ಗುರ್ರು ಶಿಷ್ಯಸಂಮುಂಧವೆಂದಡೆಹೇಳುವೆಕೇಳಿರೋ | ಸದ್ಭಕ್ತಶರಣಜನಂಗಳೆಲ್ಲರು ಶ್ರೀಗುರುಶಿಷ್ಯಗೆಉಪದೇಶವಮಾಡುವಕಾದಲ್ಲಿ | ಶಿಷ್ಯನಸ್ಥೂಲತನುಸೂಕ್ಷ್ಮತನುಕಾರಣತನುವೆಂಬ ತನುತ್ರಯಗಳಲ್ಲಿ ಮುಸುಕಿದ ಆಣವಮಲ ಮಾಯಾಮಲ | ಕಾರ್ಮಿಕಮಲವೆಂಬಮಲತ್ರಯಗಳಕಳೆದು | ಮಾಯಾ ಪ್ರಕೃತಿಕಾಯದ | ಪೂರ್ವಾಶ್ರಯವನ್ನು ಚಿದಾಗ್ನಿಯಿಂದಸುಟ್ಟು | ಚಿತ್ಕಾಯವೆಂದೆನಿಸಿ| ಆಚಿತ್ಕಾಯಸ್ವರೂಪವಾದ | ಶಿಷ್ಯನಮಸ್ತಕದಲ್ಲಿಹಸ್ತವನಿರಿಸಿ ||ಶ್ಲೋ|| ಯಥಾಕಾಲತಥಾಭಾವೋ | ಯಥಾಭಾವಸ್ತಥಾಮನಃ || ಯಥಾಮನಸ್ತಥಾದೃಷ್ಟಿಯಥಾದೃಷ್ಟಿಸ್ತಥಾಸ್ಥಲಂ ! ಯಂಬಆಗಮೋಕ್ತವಾಗಿ ಆಶಿಷ್ಯನಪಶ್ಚಿಮದೇಶದಲ್ಲಿಬೆಳಗುತಿರ್ದ ನಿತ್ಯನಿರಂಜನಪರಮಕಳೆಯನ್ನು ಧ್ಯಾನಿಸಿಭಾವಸ್ಥಲಕ್ಕೆತಂದು | ಆಭಾವಸ್ಥಲದಿಂದ ಮನಸ್ಥಲಕ್ಕೆತಂದು | ಆಮನಸ್ಥಲದಿಂದದೃಷ್ಟಿಸ್ಥಲಕ್ಕೆತಂದು ಆದೃಷ್ಟಿಸ್ಥಲದಿಂದಕರಸ್ಥಲಕ್ಕೆತಂದು|ಆಕರಸ್ಥಲದಿಂದಸಾಕಾರಮೂರ್ತಿಯಲ್ಲಿತುಂಬಿಸಿ ಇಷ್ಟಲಿಂಗವೆನಿಸಿ ಕರಸ್ಥಲಧಲ್ಲಿಮೂರ್ತಿಗೊಳಿಸಿ| ಆಲಿಂಗಕ್ಕೆಜಂಗಮಪಾದತೀರ್ಥಪ್ರಸಾದವನೆ | ಪ್ರಾಣಕಳೆಯಂದರ್ಪಿಸಿ | ಮತ್ತು ಇಷ್ಟಲಿಂಗವೇ ಅನಿಷ್ಟಪಂಚಕಂಗಳೆಂಬ ಕತ್ತಲೆಯನೋಡಿಸುವದಕ್ಕೆ ಚಾತೂರ್ಯನೆಂದು ನಂಬುಗೆಯಗೊಳಿಸಿ ಮತ್ತಮಾವಿಷ್ಟಲಿಂಗದಲ್ಲಿವೃತಕಟ್ಟಿ| ವರ್ತುಲಗೋಮುಖ ನಾಳ ಗೋಳಕವೆಂಬ ಆರುಸ್ಥಲಂಗಳತೋರೆ || ಆ ಆರುಸ್ಥಲಂಗಳ್ಲಿ||ನಕಾರ ಮಕಾರ ಶಿಕಾರ ವಕಾರ ಯಕಾರ ಓಂಕಾರವೆಂಬ ಆರುಪ್ರಣಮಗಳನ್ನು ಭೋಧಿಸಿ | ಆ ಆರುಪ್ರಣಮಂಗಳನ್ನು ಆಚಾರಲಿಂಗಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗಮಹಾಲಿಂಗಗಳೆಂಬಆರುಲಿಂಗಂಗಳೆಂದುರುಪಿ || ಆ ಆರುಲಿಂಗಂಗಳಿಗೆ: ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು ಶ್ರೋತ್ರ, ಹೃದವೆಂಬ ಆರುಇಂದ್ರಿಯಂಗಳನ್ನು || ಆರುಮುಖಂಗಳೆಂದುತಿಳುಪಿ| ಆಮುಖಂಗಳಿಗೆ ಗಂಧ, ರುಚಿ, ರೂಪು, ಸ್ಪರ್ಶನ, ತೃಪ್ತಿ,ಎಂಬಾರು ಪದಾರ್ಥಗಳನ್ನು || ಶ್ರದ್ಧಾ, ನೈಷ್ಟಿಕಾ, ಸಾವಧಾನ, ಅನುಭಾವ ಆನಂದ, ಸಮರಸವೆಂಬಾರು ಭಕ್ತಿಗಳಿಂದರ್ಪಿಸಿ | ಸಕೀಲವತೋರಿಸಬಲ್ಲಾತನೇ ಗುರುವು | ಆಗುರುವಿನಕಾರುಣ್ಯದಿಂದ ಪಡದಂಥಾ ಇಷ್ಟಲಿಂಗವನ್ನು ಕರಮನಭಾವಮಂಟಪದಲ್ಲಿ ಮೂರ್ತಿಗೊಳಿಸಿ | ಸಗುಣಪೂಜೆ ನಿರ್ಗುಣಪೂಜೆ ಕೇವಲನಿರ್ಗುಣಪೂಜೆಯನ್ನು ಮಾಡಿ | ಆಲಿಂಗದ ಮಹಾಬೆಳಗಿನೊಳಗೆ | ತನ್ನಂಗದಕಳೆಯ ನಡಗಿಸಿ | ಉರಿಕರ್ಪೂರಸಂಯೋಗದಂತೆ

ಅವಿರಳಸಮರಸವಾಗಿರ್ಪಾತನೇಶಿಷ್ಯನುಇಂತೀಅರುಹು ಆಚಾರಸನ್ನಹಿತ
ಗುರುಶಿಷ್ಯರಿಬ್ಬರುಬಯಲುಬಯಲು ಬೆರದಂತೆನಿರವಯುವಬ್ರಹ್ಮದಲ್ಲಿ । ನಿ
ಷ್ಪತ್ತಿಯನೈದಿಪ್ಪರುನೋಡಾ । ಇಂತೀ ಅರುಹಿನವಿಚಾರವನರಿಯದೆ ಮಾ
ಡುವಮಾಟವೆಲ್ಲಾ ಅಜ್ಞಾನಗಡಣದೊಳಗು । ಈಅಜ್ಞಾನನಗುರುಶಿಷ್ಯರವಿಧಿ
ಯಂತಾಯಿತೆಂದಡೆ । ಹುಟ್ಟುಕುರುಡನಕಯ್ಯಕೆಟ್ಟಗಂಣವಹಿಡಿದು । ಬ
ಟ್ಟೆಯಕಾಣದೆಕವುರಿಯಬಿದ್ದು ಸತ್ತಂತಾಯಿತುಕಾಣಯ್ಯಾ ॥ಅ॥ ೧೦॥
ನೋಡಿದರೊನೋಡಿದರೊವಂದುವಿಚಿತ್ರವ । ಶಿಷ್ಯನೆಂಬಹೆಂಡತಿಯು।ಶ್ರೀ
ಗುರುವೆಂಬಗಂಡನು।ಅಸ್ತಮಸ್ತಕಸಂಯೋಗವೆಂಬಕೂಟವ ಪೊಡಲು ।
ಷಡಕ್ಷರವೆಂಬ ಮಂತ್ರವೀರ್ಯವುಚಲನೆಯಾಗಿ । ಶಿಷ್ಯನೆಂಬಹೆಂಡತಿಯು ।
ಕರ್ನವೆಂಬಗರ್ಭಪ್ರವೇಶವಾಗಲು।ಮನಬಸುರಾಗಿಕಂಗಳೆಂಬಯೋನಿಯು
ಲ್ಲಿ। ಲಿಂಗವೆಂಬಮಗುವಂಹಡದು । ಅಂಗಯ್ಯೆಂಬತೊಟ್ಟಲಲ್ಲಿಕ್ಕಿ।ಮಂಗಳ
ಸ್ತೋತ್ರವೆಂಬ ಜೋಗುಳವಹಾಡಿ । ಅಖಂಡೇಶ್ವರನೆಂದು ಹೆಸರಿಟ್ಟರು
ನೋಡಾ । ಇದುಕಾರಣ ನೀವೆಮಗೆಮಗನಾದಿರಿ। ನಾನಿಮಗೆ ತಾಯಾದೆನ
ಯ್ಯಾ॥ಅ॥೧೧॥ಶ್ರೀಇಷ್ಟಗುರುಸ್ವಾಮಿಯಿಷ್ಟಲಿಂಗವೇನಿನ್ನ ಪ್ರಾಣವೆಂದುನಿ
ರೂಪಿಸಿದನು । ಆನಿರೂಪವನು ಮಹಾಪ್ರಸಾದವೆಂದು ಕೈಕೊಂಡುಇಷ್ಟ
ಲಿಂಗದಲ್ಲಿನೈಷ್ಟಿಬೆರಗಾಗಿಆಚರಿಸುವಲ್ಲಿ ।ಆಇಷ್ಟಲಿಂಗದಗೋಳಕವುತನ್ನ
ಹಸ್ತದಿಂದ ಪರಹಸ್ತದಿಂದಾದರೂಕಿತ್ತುಬಂದರೆಸಂದೇಹಗೊಳಲಾಗದು ।
ಮರಳಿಮುನ್ನಿನಂತೆ ಅದುಧರಿಸಿಕೊಂಬುವದು । ಇದುನಿರಾಳದಚ್ಚು ವೀರ
ಶೈವದನಚ್ಚು । ಪುರಾತನರಮಚ್ಚು । ಸರ್ವಗಣಂಗಳಿಗೆಸನ್ಮತವುಆದೆಂತೆಂ
ದಡೆ॥ಬೀಮಾಗಮದಲ್ಲಿಮಹೇಶ್ವರನವಾಕ್ಯ ॥ಶ್ಲೋ॥ ಏಯೋಗಿಶಿವಭಕ್ತ
ಶ್ಚನಸಂಖ್ಯಾವೀರಶೈವನಾಂ । ಪುನರ್ಬಂಧತದಾಕೃತ್ವಾತಲ್ಲಿಂಗಂಧಾರಯೆ
ತ್ಸದಾ ॥೧॥ ಹಸ್ತೇನಲಿಂಗಹೃಚ್ಛಾತು ಪುನರ್ಬಂದೇನಧಾರಯೇತ್ ।ಸಂ
ದೇಹಂನಾಸ್ತಿವೀರಾಣಾಂ ಇತ್ಯಾಹಂಪರಮೇಶ್ವರೀ ॥೨॥ ಎಂದುದಾಗಿ ಇಂ
ತಪ್ಪಶಿವನ ವಾಕ್ಯವನ್ನುಮೀರಿ।ಸಂದೇಹಗೊಂಡು ಸಾಯಬೇಕೆಂಬ ಸೂ
ತಕಮನದಪಾತಕಹೊಲೆಯರ ಮುಖವನೋಡಲಾಗದಯ್ಯಾ ಅಖಂಡೇಶ್ವ
ರಾ ॥೧೨॥ ಶ್ರೀಗುರುಕರುಣಿಸಿಕರಸ್ಥಲಕ್ಕೆ ಕೊಟ್ಟಇಷ್ಟಲಿಂಗವನ್ನುಶುದ್ಧ
ಸಾವಧಾನದಿಂದಧರಿಸಿಕೊಂಡು।ಲಿಂಗವೇಪತಿ ತಾನೇ ಸತಿಯೆಂಬಭಾವದಿಂ
ದ ಆಚರಿಸುವಕಾಲದಲ್ಲಿ । ಆಲಿಂಗವು ಮೋಸದಿಂದಪಹರಿಸಿಹೋದರೆ ಅರ
ಸಿನೋಡಿ। ಸಿಕ್ಕಿದಲ್ಲಿಸೂಕ್ಷ್ಮವಿಚಾರತಿಳಿದು ಧರಿಸಿಕೊಂಬುವದು ಮತ್ತಂ
ಲಿಂಗವು, ವೃತ್ತ, ಕಟ, ವರ್ತುಳ, ಗೋಮುಖ, ನಾಳ, ಗೋಳಕವೆಂಬಷ

ಡುಸ್ಥಲಂಗಳಲ್ಲಿ ಭಿನ್ನವಾದಡೆಯು। ಕಂಡಿಗೆಕಾಣಿಸಿಕೊಳ್ಳದೆ ಹೋದಡೆಯು। ಆಲಿಂಗಕ್ಕೆಪ್ರಾಣತ್ಯಾಗವಮಾಡಬೇಕಲ್ಲದೆ। ಅಲ್ಲಿ ಹಿಂದುಮುಂದು ನೋಡಲಾಗದು। ಇದಕ್ಕೆಶಿವನವಾಕ್ಯವೇದಸಾಕ್ಷಿ॥ಶ್ಲೋ॥ ಗುರೂಣಾದತ್ತಲಿಂಗನ್ತುಸಾವಧಾನೇನಧಾರಯೇತ್। ಪ್ರಮಾದಾತ್ಪತಿತೆಲಿಂಗಂ ಪ್ರಾಣಾನಪಿಪರಿತ್ಯಜೇತ್ ॥೧॥ ವೃತ್ತಿನಾಳಸಮಂಪೀಠಂ ಗೋಳಕಂಮಥ್ಯಗೋಮುಖಂ॥ ಭಿನ್ನಷಟ್ವಿಧಸ್ಥಾನೇನತಥಾಪ್ರಾಣಂಶರಣಂತ್ಯಜೇತ್॥೨॥ ಎಂದುದಾಗಿ ಇಂತಪ್ಪಲಿಂಗಕ್ಕೆಐಕ್ಯವಾದಶರಣನನೀವೆಂದುಕಾಂಬೆನಯ್ಯಾಅಖಂಡೇಶ್ವರಾ॥೧೩॥ಸದ್ಗುರುಕಾರುಣ್ಯವಪಡದು ಲಿಂಗಾಂಗಸಮರಸವುಳ್ಳಂಥಾ। ವೀರಶೈವಭಕ್ತಮಾಹೇಶ್ವರರೆನಿಸಿಕೊಂಡಬಳಿ ಕತಮ್ಮಂಗದಮ್ಯಾಲಣಲಿಂಗವು। ಷಡುಸ್ಥಾನಂಗಳಲ್ಲಿಭಿನ್ನವಾದಡೆಆಲಿಂಗದಲ್ಲಿತನ್ನಪ್ರಾಣವಬಿಡಬೇಕಲ್ಲದೆ। ಮರಳಿಭಿನ್ನವಾದಲಿಂಗವಂಧರಿಸಲಾಗದು। ಅದೇನುಕಾರಣವೆಂದರೆ। ತಾನುಸಾಯಲಾರದೆಜೀವದಾಶೆಯಿಂದ ಆಭಿನ್ನವಾದಲಿಂಗವಧರಿಸಿದರೆ। ಮುಂದೆ ಚಂದ್ರಸೂರ್ಯರುಳ್ಳನಕಾ। ನರಕಸಮುದ್ರದಲ್ಲಿಬಿದ್ದು ಮುಳಿಗ್ಯಾಡುವ ಪ್ರಾಪ್ತಿಯುಂಟಾದಕಾರಣ ಇದಕ್ಕೆಸಾಕ್ಷಿ॥ಸೂಕ್ಷ್ಮಾಗಮೆ॥ ಶ್ಲೋ॥ ಶಿರೋಯೋನಿರ್ಗೋಮುಖಂಚ ಮಧ್ಯವೃತ್ತಂಚಪೀಠಕಂ॥ ಷಟ್ಸ್ಥಾನೋಚಿದ್ರಯೋಗೇಚ ತಲ್ಲಿಂಗಂನೈವಧಾರಯೇತ್॥೧॥ ತಥಾಪಿಧಾರಣಾಧ್ಯಾನಿ ರೌರವಂನರಕಂವ್ರಜೇತ್॥೨॥ ಇಂತಪ್ಪನರಕಜೀವಿಗಳಯನಗೊಮ್ಮೆತೋರದಿರಯ್ಯಾ ಅಖಂಡೇಶ್ವರಾ॥೧೪॥ ಸಕಲಗಣಂಗಳಸಾಕ್ಷಿಯೊಗಿ। ಶ್ರೀಗುರುದೇವನು ಕರಸ್ಥಲಕ್ಕೆಕರುಣಿಸಿಕೊಟ್ಟ ಇಷ್ಟಲಂಗದಲಿನಿಷ್ಟೆನಿಬ್ಬರಗಾಗಿ ಶರಣಸತಿ। ಲಿಂಗಪತಿಯೆಂಬ ಭಾವವಬಿಡಧೆ ಆಚರಿಸುವಲ್ಲಿ। ವಾಸರಸಿಹೋದಡೆ। ತನ್ನಪ್ರಾಣತ್ಯಾಗವಮಾಡಬೇಕಲ್ಲದೇ। ಜೀವದಕಕ್ಕುಲಾಗತಿಗೆಯಿಂದೆಉಳಿಯಲಾಗದು। ಮರಳಿಮತ್ತೊಂದುಲಿಂಗವಧರಿಸಲಾಗದು। ಅದೇನುಕಾರಣವೆಂದರೆ। ಕಾಷ್ಟದಲ್ಲಿಅಗ್ನಿಯಿರ್ಪುದಲ್ಲದೆ। ಕರಿಗೊಂಡಇದ್ದಲಲ್ಲಿಯಲ್ಲಿರ್ಪುದೆ। ಮುನ್ನಗುರುವುಪದೇಶವಿಲ್ಲದ ದೇಹದಲ್ಲಿ ಶಿವಕಳೆಯಿರ್ಪುದೇ ಗುರುವುಪದೇಶವಾಗಿ। ಲಿಂಗವ್ರತವನಾಚರಿಸಿ ಮರಳಿಲಿಂಗಬಾಹ್ಯವ್ರತಗೇಡಿಯಾದ ದೇಹದಲ್ಲಿ ಶಿವಕಳೆಯಿನ್ನೆಲ್ಲಿಹುದು।ಆಶಿವಕಳೆಯಿಲ್ಲವದೇಹಕ್ಕೆಮರಳಿ ಲಿಂಗಧಾರಣವಾದಡೇನು। ಆ ಲಿಂಗಸ್ಪ್ರೇತಲಿಂಗ। ಆತಭೂತಪ್ರಾಣಿ। ಆಲಿಂಗಪೂಜೆಯುಷ್ಟುದಿನಮಾಡಿದಡೇನು। ಮುಂದೆಮುಕ್ತಿಯಿಲ್ಲಿ ಅವನಿಗೆರಾಜನರಕವೇಪ್ರಾಪ್ತಿಯಾಗಿರ್ಪುದುನೋಡಾ। ಇದಕ್ಕೆಸಾಕ್ಷಿ॥ಶ್ಲೋ॥ ಲಿಂಗಬಾಹ್ಯವ್ರತವಂಭ್ರಷ್ಟಂ। ಪುನರ್ಲಿಂಗಂತುಧಾರಯೇತ್॥

ತತ್ಪೂಜಾನಿಷ್ಫಲಂಚೈವ । ರೌರವಂನರಕಂವ್ರಜೇತ್ ॥೧॥ ಪ್ರೇತಲಿಂಗೇನಸಂಸ್ಕಾರಿ । ಭೂತಪ್ರಾಣೇಶಜಾಯತೆ॥ ಪ್ರಭಾತೆತನ್ಮುಖಂದೃಷ್ಟ್ವಾ ಕೋಟಿಜನ್ಮೇನಸೂರಕಃ॥೨॥ ಎಂದುದಾಗಿಇಂತಪ್ಪಲಿಂಗಬಾಹ್ಯವ್ರತಭ್ರಷ್ಟನಮುಖವಪ್ರಾತಃಕಾಲದಲ್ಲಿನೋಡಿದವಗೆ। ಕೋಟಿವ್ಯಳ್ಯೆ ಶುನಿಸೂಕರದಬಸುರಲ್ಲಿಬರ್ಪುದುತಪ್ಪದುನೋಡಾ ॥ಅ॥೧೫॥ ಲಿಂಗಭಿನ್ನಭಿನ್ನವಾದರೆಸ್ಥೂಲಸೂಕ್ಷ್ಮವನರಿಯಬೇಕು । ಸ್ಥೂಲವಾವುದುಸೂಕ್ಷ್ಮವಾವುದೆಂದಡೆ । ಈ ಲಿಂಗಶಕ್ತಿಪೀಠದಲ್ಲಿಅಕ್ಕಿಯತೂಕಮೇಣವನೊತ್ತಿನೋಡಲುವಳಗಾದಡೆಸ್ಥೂಲ ಆ ಮೇಣಹೆಚ್ಚಾದಡೆಸೂಕ್ಷ್ಮ । ಮತ್ತಾಲಿಂಗದವರ್ತುಲಗೋಮುಖದಲ್ಲಿಅರ್ಧಅಕ್ಕಿ ಸರಿಭಾಗವಮಾಡಿದಲ್ಲಿಗಿರ್ಧಯನಿಸಿತ್ತು॥ಆಗಿರ್ಧಅಕ್ಕಿಯತೂಕ ಮೇಣವನೊತ್ತಿನೋಡಲು ವಳಗಾದಡೆಸ್ಥೂಲ। ಹೆಚ್ಚಾದಡೆಸೂಕ್ಷ್ಮ । ಮತ್ತಾಲಿಂಗದಗೋಳಕದಲ್ಲಿ । ಯೆಳ್ಳುತೂಕಮೇಣವನೊತ್ತಿನೋಡಲು । ವೊಳಗಾದಡೆಸ್ಥೂಲ। ಹೆಚ್ಚಾದಡೆಸೂಕ್ಷ್ಮ । ಮತ್ತಾಲಿಂಗದಮಸ್ತಕದಿಂದ ಕೆಳಗಣಪೀಠದವರಿಯುಂತ್ರವಾಗಿ ಕೂದಲು ಮುಳುಗುವಷ್ಟುಸೀಳಿದಡೆಸ್ಥೂಲ । ಆ ಕೂದಲುಹೆಚ್ಚಾದಡೆಸೂಕ್ಷ್ಮ । ಇಂತೀಉಭಯಾರ್ಥವಳಿದುಸೂಕ್ಷ್ಮವಾದರೆ । ಆಲಿಂಗದಲ್ಲಿಐಕ್ಯವಾಗಬೇಕು। ಅದೆಂತೆಡೆ ॥ ಶ್ಲೋ ॥ ವ್ರೀಹೀಯರ್ಧಾರ್ಧಂಪ್ರಚನ್ನಂ ಕೇಶಾಗ್ರ ಗೃಹ್ಯಪ್ರಮಾಣತಃ ॥ ಪೀಠಾದಿಲಿಂಗಶಿರಿಯಂತಂ ತ್ಯಜೇತ್ಪ್ರಾಣಂನಗಾತ್ಮಜೇ । ತುಂಡುಲಾರ್ಧೆಪೀಠಮಧ್ಯೇ ತದರ್ಧಂವೃತ್ತಗೋಮುಖೆ ॥ ತಿಲಮಾತ್ರೇಯೇಲಿಂಗೆ ತದಾದಿತ್ಯತ್ಯಜೆದಸು ॥೨॥ ಎಂದುದಾಗಿಇಂತಪ್ಪಲಿಂಗೈಕ್ಯವಾದಮಹಾಶರಣರು ಮೂರುಲೋಕಕ್ಕೆ ನಿರುಕರುನೋಡಾ ಅಖಂಡೇಶ್ವರಾ ॥೧೬॥

ಎಂಬತ್ತುನಾಲ್ಕು ಲಕ್ಷಜೀವರಾಶಿಮಂಡಲದೊಳಗೆ ಒಂದೊಂದುಜನ್ಮದೊಳಗೆ ಸತ್ತುಹುಟ್ಟಿ ಸುತ್ತಿಸುಳಿದುಸುಖದುಃಖಂಗಳಿಂದನೊಂದು ತೊಳಲಿಬಳಲುವಜೀವನಿಗೆಬಡವಂಗೆಕೊಡಹೊನ್ನ ದೊರಕೊಂಡಂತೆ । ಮನುಷ್ಯದೇಹವು ದೊರಕೊಂಡಲ್ಲಿಶಿವನಕೃಪೆಯಿಂದಗುರುಕಾರುಣ್ಯವಾಗಿ । ಅಂಗದಮೇಲೆಲಿಂಗಧಾರಣವಾದಬಳಿಕಆಲಿಂಗದಮೇಲೆ ಪ್ರಾಣಪ್ರತಿಷ್ಠೆಯಮಾಡಿನಿಮಿಷನಿಮಿಷಾರ್ಧವಗಲದಿರಬೇಕು। ಇಷ್ಟುಳ್ಳಾತಂಗೆಶಿವನಲ್ಲಿಸಮರಸವಲ್ಲದೆಅಂತರಂಗದಲ್ಲಿಪ್ರಾಣಲಿಂಗದಪರಿಪೂರ್ಣಬೆಳಗುಕಂಡೆವುಇಷ್ಟಲಿಂಗದಹಂಗ್ಯಾತಕ್ಕೆಂದುಆ ಇಷ್ಟಲಿಂಗವಕಡಿಗೆತೆಗದುಹಾಕಿ। ಲಿಂಗಬಾಹ್ಯನಾಗಿವ್ರತಗೇಡಿಯಾದಾತಗೆಬಂದುಕೋಟಿಕಲ್ಪಾಂತರವು ನರಕದೊಳಗಿರ್ದುಅಲ್ಲಿಂದತ್ತ । ಚೌರ್ಯಾಂಶಿಲಕ್ಷಜನ್ಮದಲ್ಲಿಬಂಧನಂಬಡುತಿರ್ಪನಲ್ಲದೆ । ಶಿವನಲ್ಲಿ

ಅವಿರಳಸಮರಸವಿಲ್ಲನೋಡಾ ಅದೆಂತೆಂದಡೆ ||ಶ್ಲೋ|| ಅಂಗೇಚಲಿಂಗಸಂಬಂಧಲಿಂಗೇಚಪ್ರಾಣಸಂಯುತಂ|| ನಿಮಿಷಾರ್ಧವಿಯೋಗೇನ ನರಕೇಕಾಲಮಕ್ಷಯಂ ||೧|| ಎಂದುದಾಗಿ ಇಂತಪ್ಪ ಅದ್ವೈತಹೀನಮಾನವರಯನಗೊಮ್ಮೆತೋರದಿರೈಯ್ಯಾ ||ಅ ೧೭|| ಶ್ರೀಗುರುವಿನಕರಗರ್ಭದಲ್ಲಿಉದಯವಾದಶರಣಸತಿ | ನಾನುಶ್ರೀಗುರುವಿನಹೃದಯಗರ್ಭದಲ್ಲಿಉದಯವಾದಲಿಂಗಪತಿಗೆ | ಎನ್ನಮದುವೆಯಮಾಡುವಕಾಲದಲ್ಲಿ | ಸಹಸ್ರದಳಕಮಲವೆಂಬ ಸಾವಿರಕಂಬಗಳ ಮಂಟಪವರಚಿಸಿ| ಆ ಮಂಟಪದಮಧ್ಯದಲ್ಲಿಪಂಚಪತ್ರವೆಂಬಪಂಚಮುದ್ರೆಯರಂಗವಾಲೆಯನಿಕ್ಕಿ | ಪಂಚಮುದ್ರೆಯೆಂಬಾಪಂಚಪ್ರಮಣವೆಂಬ ಪಂಚಪಲಶವಹೂಡಿ| ಆ ಪಂಚಕಲಶಂಗಳಿಗೆ ಸ್ವಾನುಭಾವಜ್ಞಾನವೆಂಬಸುರಿಗಿಯಸುತ್ತಿ | ಆಮಧ್ಯದಲ್ಲಿಯೆನಗೆಶೃಂಗಾರದಮಾಡಿದರೆತೆನಲು | ಸರ್ವಾಚಾರಸಂಪತ್ತೆಂಬಶೀರೆಯನುಡಿಸಿ | ಸಮ್ಯಜ್ಞಾನವೆಂಬಕುಪ್ಪಸವತೊಡಿಸಿ ! ಸದ್ಭಕ್ತಿಯೆಂಬಬಳೆಯಧರಿಸಿ | ಏಕೋಭಾವನೈಷ್ಠ್ಯಯಂಬತಾಳಿಯಕಟ್ಟಿ| ನಿಜಮುಕ್ತಿಯೆಂಬಮೂಗುತಿಯನಿಟ್ಟು| ಶಿವಮಂತ್ರವೆಂಬಕರ್ಣದೋಲೆಯನಿಟ್ಟು | ಸತ್ಕ್ರಿಯವೆಂಬ ಆಭರಣವನಿಡಿಸಿ|ಪರಮೇಶ್ವರನೆಂಬಪ್ರಕಾಶದಚಿದ್ವಿಭೂತಿಯನೆಂತಂದು|ಎನ್ನಲಲಾಟದಲ್ಲಿಪಟ್ಟವಗಟ್ಟಿ| ಸತಿಸಂಗವಗಲದಿರೆಂದುಎನ್ನಪತಿಯಶರಗತಂದುಎನ್ನಶರಗಿಗೆಕೂಡಿಸಿ | ಷಡುಸ್ಥಲಬಾಹ್ಯದಗಂಟಿಕ್ಕಿ| ಪತಿಭಕ್ತಿಅಗಲದಿರೆಂದು ಎನ್ನಮುಂಗೈಯಲ್ಲಿಸಕಲಗಣಂಗಳಸಾಕ್ಷಿಯಾಗಿ| ಬೇರದಿಲ್ಲಿವೀರಕಂಕಣವಕಟ್ಟಿ|ಜಂಗಮದಪಾದತೀರ್ಥಪ್ರಸಾಧವೆಂಬ ಭೂಮವನುಣಿಸಿ | ಮದುವೆಯಮಾಡಿದರೆಂದು ಇಂದುಯನಗೆಯವ್ವನವಾಯಿತು | ಏಳುನೆಲೆಯ ಮೇಲುಪರ್ಶ್ವಗೆಯಮೇಲೆ | ಲೀಲೆಯಿಂದಕೂಡಿಸುಖಿಸಿರೆಂದು ಯನ್ನಅಖಂಡೇಶ್ವರಾ||೧೮|| ಎಲೆಶಿವನೆನೀನುಯೆನ್ನಮೆಚ್ಚಿ ಕೈಪಿಡಿದಕಾರಣಎಮ್ಮವರು ಸಕಲಗಣಂಗಳಸಾಕ್ಷಿಯಮಾಡಿ| ನಿನಗೆ ಯನ್ನ ಮದುವೆಯಮಾಡಿಕೊಟ್ಟರು|ನೀನುಯನ್ನಗಲಿದರೆಗುರುದ್ರೋಹಿ | ನಾನುನಿನ್ನಗಲಿದರೆಸಮಯಕ್ಕೆಹೊರಗು| ಅದೆಂತೆಂದಡೆ, —ಮುನ್ನಶ್ರೀಗುರುಸ್ವಾಮಿಯನ್ನಪ್ರಾಣದೊಳಗೆನಿನ್ನಪ್ರಾಣವಹೊದಗಿಸಿ | ಎಂದೆಂದುಅಗಲಬ್ಯಾಡಿರೆಂದುನಿರೂಪಿಸಿದನು | ಆ ನಿರೂಪವನ್ನು ಮಹಾಪ್ರಸಾದವೆಂದುಕೈಕೊಂಡಬಳಿಕ | ನಾವಿಬ್ಬರೂಯೆಂದೆಂದಿಗೂ ಅಗಲದಿರಬೇಕಯ್ಯಾ ಅಖಂಡೇಶ್ವರಾ ||೧೯|| ಪುರುಷನೆಂದುಕರವೃತ್ತಿರ್ಪರಾಜಗವೆಲ್ಲಾ | ನಾನುಪುರುಷನಲ್ಲವಯ್ಯಾ | ಅದೆಂತೆಂದಡೆ,— ಹೊರಗಣಸಾಕಾರವೇನೀನು| ಒಳಗಣನಿರಾಕಾರವೇನಾನು | ಮತ್ತುಹೊರಗ

ಣಸಾಕಾರಪುರುಷರೂಪಾಗಿ। ನೀವುವೊಳಗಣನಿರಾಕಾರವೇಸ್ತ್ರೀರೂಪುನಾ
ನಾಗಿನಿಮಗೆರಾಣಿವಾಸವಾದೆನಯ್ಯಾ ॥೨೦॥ ಗಂಡನುಳ್ಳಗರ್ತಿಯರೆಲ್ಲ
ರುನಿಮ್ಮಗಂಡರಕುರುಹುಹೇಳಿರೆ । ನೀವರಿಯದಿದ್ದರೆ ನಾನುನನ್ನಗಂಡನ
ಕುರುಹುಹೇಳೆನುಕೇಳಿರೆ ।ಹೊಳೆವಕೆಂಜೆಡೆಗಳಬೆಳಗುವಭಾಳಲೋಚನದ
ಥಳಥಳಿಸುವಸುಳಿಪಲ್ಲಿನಕಬೆದುಂಬಿನೋಡುವಕಂಗಳನೋಟದ । ಸೊಗ
ಸಿಂದನಗುವಮುಗುಳ್ನಗೆಯುರತ್ನದಂತೆಬೆಳಗುವರಂಗುದುಟಿಯ । ಚಂಪಕ
ದನೆನೆಯಂತೆ। ಯಿಂಪಾದನಾಸಿಕದಶಶಿಯಂತೆ। ಬೆಳಗೆಸೆವಕದಪಿನಮಿಸುಪ
ಯಡೆಭುದ । ಕಂಠದಶ್ಶೃಂಗಾರಕುಕ್ಷಿಯ । ಸುಳಿದೆಗೆದನಾಭಿಯ । ತೊ
ಳಪತೊಡೆಯ । ಮಣಿವಾದಹರಡಿನ ನಕ್ಷತ್ರದಂತೆಹೊಳೆವಪಚ್ಚೆಯುಚರಣ
ಕಮಲದಲ್ಲಿ । ಹರಿಯುನಯನದಕುರುಹಿನ । ಸಕಲಸೌಂದರ್ಯವನೊಳ
ಕೊಂಡು ರವಿಕೋಟಿ ಪ್ರಭೆಯಂತೆ ರಾಜಿಸುವರಾಜಾಧಿರಾ ನಮ್ಮಅಖಂ
ಡೇಶ್ವರನೆಂಬನಲ್ಲನಕುರುಹುಯಿಂತುಂಟುಕೇಳಿರವ್ವಾ ॥೨೧॥ ನಲ್ಲನಕಾಣ
ದೆತಲ್ಲಣಗೊಳ್ಳುತಿರ್ದುದುನೋಡಾಯನ್ನಮನವು। ಜಾಗ್ರಾವಸ್ಥೆಯಲ್ಲಿನಲ್ಲ
ನಚಿಂತೆಯಿಂದೆಸುಳಿವುತಿರ್ದೆನವ್ವಾ। ಸ್ವಪ್ನಾವಸ್ಥೆಯಲ್ಲಿನಲ್ಲನಚಿಂತೆಯಿಂದೆ
ಮೈಮರೆದಿದ್ದೆನವ್ವಾ । ಸರ್ವಾವಸ್ಥೆಯಲ್ಲಿ ಅಖಂಡೇಶ್ವರನೆಂಬನಲ್ಲನಕೂಡ
ಬೇಕೆಂಬಭ್ರಾಂತಿಯಲ್ಲಿಬಡವಾಗುತಿರ್ದೆನವ್ವಾ ॥೨೨॥ ಆತನಾಳಾಪದಿಂದೆ
ಹಗಲಾಗದುನರಿಯೆನವ್ವಾ । ಆತನಾಳಾಪದಿಂದೆ ಯಿರುಳಾದುದನರಿಯೆನ
ವ್ವಾ । ಅಖಂಡೇಶ್ವರನೆಂಬಪ್ರಾಣದೊಲ್ಲಭನಕೂಡಬೇಕೆಂಬಭ್ರಾಂತಿಯಿಂ
ದೆಹೋದುದಬಂದುದನಾನರಿಯದಿರ್ದೆನವ್ವಾ ॥೨೩॥ ತನ್ನನಲ್ಲದೆ ಅನ್ಯರ
ನೋಡೆನವ್ವಾ । ತನ್ನನಲ್ಲದೆಅನ್ಯರಮುಟ್ಟೆನವ್ವಾ । ತನ್ನನಲ್ಲದೆಅನ್ಯರನೆನೆ
ಯೆನವ್ವಾ । ತನ್ನನಲ್ಲದೆಅನ್ಯರಬಯಸೆನವ್ವಾ । ತನ್ನನಗಲಿಯಿನೆಂತುಬ
ದುಕುವೆನವ್ವಾ । ಅಖಂಡೇಶ್ವರನೆಂಬನಲ್ಲನಮುಳಿಸುತಿಳುಹಿರವ್ವಾ ॥೨೪॥
ಜೀವದಡೆಯನಗಲಿಜೀವಿಸಲಾರೆನವ್ವಾ। ನಿಮಿಷನಿಮಿಷಾರ್ಧವಾದರೂಬಾ
ಳಲಾರೆನವ್ವಾ । ಹೇಳಲಿನ್ನೇನುನೋವುಬಂದಿತವ್ವಾ । ಕಂಡರೆಹೇಳಿರವ್ವಾ
ನನ್ನತಂಗಿಯಭಾವನಕರದುತೋರವ್ವಾ । ನಮ್ಮಅಖಂಡೇಶ್ವರನೆಂಬನಲ್ಲನ
೨೫॥ ಬಾರನೇತಕವ್ವಾನಮ್ಮಮನೆಯಾತಾ । ತೋರನೇತಕವ್ವಾತನ್ನದಿವ್ಯ
ರೂಪವ । ಬೀರನೇತಕವ್ವಾತನ್ನಆತಿಸ್ನೇಹವಇನ್ನೇನುಸೈರಿಸುವೆನವ್ವಾ
ಇನ್ನುಹ್ಯಾಗೆತಾಳುನೆನವ್ವಾ । ತನುತಾಪಗೊಳುತ್ತದೆ । ಮನತಲ್ಲಣಗೊ
ಳುತ್ತದೆ। ಅಖಂಡೇಶ್ವರನೆಂಭನಲ್ಲನತೋರಿಸಿಯನ್ನಪ್ರಾಣವನುಳುಹಿಕೊ
ಳಸವ್ವಾ ॥ ೨೬ ॥ ಝಲ್ಲುರಝಲ್ಲಿಂದಡೆನಲ್ಲಬರುತ್ತಾನೆಂದುಯಲ್ಲಾಹಾದಿ

ಯುಮೆಚ್ಚಿನೋಡುತಿದ್ದೆನವ್ವಾ । ನಲ್ಲನಸೊಲ್ಲುಲಾಲಿಸಿಕೇಳುತಿದ್ದೆನವ್ವಾ । ಅಖಂಡೇಶ್ವರನೆಂಬನಲ್ಲನಕಂಡರೆಮಹಾಸಂತೋಷವವ್ವಾ । ಕಾಣದಿರ್ದಡೆ ಕಡುದುಃಖಕೇಳಿರವ್ವಾ ॥೧೭॥ ಹಗಲೆಹನ್ನೆರಡುತಾಸುತನ್ನ ಹಂಬಲದಲ್ಲಿವ್ಯಾಕ್ಯವಕಳವುತಿರ್ದೆನವ್ವಾ । ಇರುಳೆಹನ್ನೆರಡುತಾಸುತನ್ನಯದೆದ್ದುನೋಡುತಿದ್ದೆನವ್ವಾ । ಅಖಂಡೇಶ್ವರನೆಂಬನಲ್ಲನಹಂಬಲದಿಂದೆ ಸರ್ವಸಂಗವತೊರದೆನವ್ವಾ ನೋಡಿರವ್ವಾ ॥೧೮॥ ಬಾರಬಾರಯ್ಯಾಗಂಡನೆಇನ್ನ್ಯಾತಕ್ಕೆನಾಚುವೆ । ನಾನುಸರಿಮಿಂಡಿಯಾದಬಳಿಕ ಇನ್ನ್ಯಾತಕ್ಕೆ ದಿನಕಾಲಹೋಗಲಾಡುವೆ ತುಂಬಿದಜವ್ವನಸಡಲಿಹೋಗುತ್ತದೆ।ಸುರತಸಂಗದಚುಂಬನಂಗಳಿಂದೆಕೂಡಿ ಪರಿಣಾಮಗೊಳ್ಳಯ್ಯಾಯನ್ನ ಅಖಂಡೇಶ್ವರಾ ॥ ೧೯ ॥ ನೋಡುನೋಡಯ್ಯಾ ಗಂಡನೆಯೆನ್ನಕಂಗಳುಪ್ಪರಿಗೆಯಮೇಲೆಕುಳ್ಳಿರ್ದುಸಕಲವಿಚಿತ್ರವಆಡುಲಾಡಯ್ಯಾಗಂಡನ । ಎನ್ನಮನದಕೊನೆಯಲ್ಲಿಮಹಾಜ್ಞಾನವುಯ್ಯಾಲಿಯುಕಟ್ಟಿ । ನಿಮ್ಮಮನಬಂದಪರಿಯಲ್ಲಿ ಕೂಡುಕೂಡಯ್ಯಾ ಗಂಡನೆ । ಯನ್ನಸತ್ಕಲೆಗಳಿಂದಸವಿದೋರಿ ಅಖಂಡೇಶ್ವರಾ ॥೨೦॥ ಸೊಕ್ಕಿದಜವ್ವನದಕಕ್ಕಸಕುಚದ.। ಸಡಲಿದಸೋಲುಮುಡಿಯು । ಬಡನಡುವಿನಬಳಿಕುವಪೆಂಣಿನಕೂಡಸ್ನೇಹವನಗಲಿಹೋಗುವದುಎಂಥಾವಿಗಡಚಾರಿತ್ರನೇಅವ್ವಾ! ಅಖಂಡೇಶ್ವರವಿಲ್ಲವೆಂಬಚಿಂತೆಯಿಂದಮನವುಸಂದಣಿಸಿ।ತನುವುಕರಗಿಯೋಯಿತುನೋಡಿರವ್ವಾ ॥ ೨೧ ॥ ಇಂದಿನಮಿರುಳಿನಲ್ಲಿ ನಲ್ಲನು ಛಲವಾಡುತ್ತಬಂದುಮೆಲ್ಲನೆಯನ್ನ ಕೈವಿಡಿದನವ್ವಾ ।ಅಲ್ಲಿವುಟ್ಟಸೀರೆಯನಿರಿಗಳು ಸಡಲಿಬಿದ್ದವವ್ವಾ । ತೊಟ್ಟರವಿಕೆಯಗಂಟುಬಿಚ್ಚಿ ಕಡೆಗಾದನವ್ವಾ । ಅಖಂಡೇಶ್ವರನೆಂಬನಲ್ಲನುಯನ್ನಬಿಗಿಯಪ್ಪಿತಕ್ಕೈಸಿಕೊಂಡು। ಕೂಡಿದ ಸುಖವ ಯಿದಿರಿಟ್ಟುಹೇಳಲಾರೆನುಕೇಳಿರವ್ವಾ ॥ ಚಂದ್ರಶಾಲೆಯಲ್ಲಿಬಂದು ನಿಂತವನಾರ್ಸ್ಯಂದುಕೇಳಹೋದರೆ ಅಲ್ಲಿಹೊಂದಿ ಯನ್ನನೆರದವವ್ವಾ । ಅತನಸೌಂದರ್ಯಕೋಟಿಕಂದರ್ಪರಂತಿರ್ದದವ್ವಾ ! ಆತನಅಂಗದಬೆಳಕುಅನಂತಕೋಟಿಸೂರ್ಯಪ್ರಭೆಯಂತೆ ಇರ್ದುದವ್ವಾ । ಅಖಂಡೇಶ್ವರನೆಂಬನಲ್ಲನ ಅಂಗಶೃಂಗಾರದ ಬೆಳಗನೋಡಲಮ್ಮದೆ। ಕಂಗಳಮುಚ್ಚಿ ನೆರದೆನುಕೇಳವ್ವಾ ॥ ನಲ್ಲನಕೂಡಿದಸುಖವ ಮೆಲ್ಲನುಸುರುವೆ ಕೇಳಿರವ್ವಾ । ಏಳುನೆಲೆಯಮಂಟಪದಮಾಣಿಕ್ಯದುಪ್ಪರಿಗೆಯಮೇಲೆ ।ಚಪ್ಪರಮಂಚವಹಾಸಿ । ತ್ರೊಪ್ಪಟವನೀಡಿ ಕರ್ಪೂರವೀಳ್ಯವಕೊಟ್ಟು । ಲಜ್ಜೆಗೆಟ್ಟು ನಾಚಿಕೆತೊರದು । ತನುರೋಮಾಂಚಿತವಾಗಿ ತಕ್ಕೈಸಿಚುಂಬನಾದಿಗಳಿಂದೆ ಅಮರ್ದಪ್ಪಿ ಅಸ್ತಿಗಳುಸುಗ್ಗುನುರಿದವಾಗಿ । ಮನನವಪರಿಣಾಮದಸುಗ್ಗಿ ಯೊಳಗೆ ಸರವಶಗೊಂಡು

ರ್ಗನು ಅಖಂಡೇಶ್ವರನೆಂಬನಲ್ಲನಕಟಾ ||೩೪|| ಕೇಳುಕೇಳಿರೆಕೇಳಿರಿಯಲ್ಲರು! ಮನಕ್ಕೆಮನೋಹರವಾದ ಕಂಗಳಿಗೆಮಂಗಳವಾದ ಶೃಂಗಾರದನಲ್ಲಬಂದುಯೆನ್ನತನ್ನೊಳಗೆಮಾಡಿಕೊಂಡ | ಬಂಧುವಿಪರೀತವಹೇಳುವೆಮನಪ್ರೊಲಿದುಆಲಿಸಿರವ್ವಾ | ಯನ್ನತನುವಿನೊಳಗೆತನ್ನ ತನುವನಿಟ್ಟುಮಹಾತನುವಮಾಡಿದ | ಯೆನ್ನಮನದೊಳಗೆತನ್ನಮನವನಿಟ್ಟುಘನಾಘನವಮಾಡಿದ ಯನ್ನಪ್ರಾಣದೊಳಗೆತನ್ನಪ್ರಾಣವನಿಟ್ಟುಚಿತ್ಪ್ರಾಣವಮಾಡಿದ ||ಯನ್ನಜೀವದೊಳಗೆತನ್ನಜೀವನವನಿಟ್ಟುಸದ್ಭಾವಮಾಡಿದ| ಯನ್ನ ಕರಣಂಗಳೊಳಗೆ ತನ್ನ ಕರಣಂಗಳನಿಟ್ಟು ಚಿತ್ಕರಣಂಗಳವಮಾಡಿದ| ಯನ್ನಿಂದ್ರಿಯಂಗಳೊಳಗೆ ತಂನಿಂದ್ರಿಯಂಗಳನಿಟ್ಟು | ತಂನಿಂದ್ರಿಯಂಗಳವಮಾಡಿದ | ಯನ್ನ ವಿಷಯಂಗಳೊಳಗೆತಂನವಿಷಯಂಗಳನಿಟ್ಟುನಿರ್ವಿಷಯಂಗಳಮಾಡಿದನಾ ಅಖಂಡೇಶ್ವರನೆಂಬನಲ್ಲನೊಳಗೆ | ಕರ್ಪೂರವೆಣ್ಣುವುರಿಯುಪುರುಷನಪ್ಪಿ || ತಾವಳಿದಂತಾದೆನುಕೇಳಿತವ್ವಾ ||೩೫|| ನಿಚ್ಚ ನಿಚ್ಚ ಶರಣಂಗೆಪರಮಾನಂದಪ್ರೇಂಕುಳಿಯುತಾನೆಕೇಳಿರೋ | ನಿಚ್ಚ ನಿಚ್ಚ ನಂಮಅಖಂಡೇಶ್ವರಂಗೆವಸಗೆವೈಭವಂಗಳುತಾನೆಕಾಣಿರೊ ||೩೬|| ಯಲೆಶಿವನೆನಿಂಮಲ್ಲಿನಾನೊಂದುಬೇಡುತ್ತಿಹೆನು! ನಿನೊಲಿದುಕರುಣಿಸಯ್ಯಾಯನಗೆನಿಂಮಶರಣರಸಂಚರಿತದಮಹಾಘನಮಹಿಮೆಯಕೇಳುವಲ್ಲಿ |ಆಹೃದಯಕಮಲವರಳುವಂತೆಮಾಡಯ್ಯಾ ನಿಂಮಶರಣನಿಜಮೂರ್ತಿಗಳಕಂಡಲ್ಲಿಯಂನಸರ್ವಾಂಗವುಗುಡಿಗಟ್ಟಿ | ಕಂಗಳಲ್ಲಿಪರಿಣಾಮಜಲವುಕ್ಕಿ | ಅವರಚರಣಕಮಲದಮೇಲೆಸುರಿವಂತೆಮಾಡಯ್ಯಾ|ನಿಂಮಶರಣರಸ್ವಾನುಭಾವವಸಂಪಾದನೆಯಮಾಡುವಲ್ಲಿಯಂನಕರ್ನಕರ್ನದ್ವಾರದಲ್ಲಿಸಕಲಕರಣಂಗಳಂನುನಾಮುಂಚಿತಾಮುಂಚೆಯಂದುಗ್ರಹಿಸುವಂತೆಮಾಡಯ್ಯಾ | ನಿಂಮಶರಣರನಿಜವನಿಂಬುಗೊಂಡಶರಣರಲ್ಲಿಅವರಸಂಗವನ್ನು ಹೆರೆಹಿಂಗದಿರುವಂತೆಮಾಡಯ್ಯಾಯಂನ ಅಖಂಡೇಶ್ವರಾ ||೩೭|| ಅಂಗಕ್ಕೆಆಚಾರವೇಚಲುವು| ಮನಕ್ಕೆಮಹಾನುಭಾವವೇಚಲುವು|ಆತ್ಮಂಗೆ ಅರುಹೇಚಲುವು |ಅಖಂಡೇಶ್ವರನೆಂಬನಿಜವನಿಂಬುಗೊಂಡಶರಣರಸಂಗವೇಚಲುವು ||೩೮|| ಶರಣರಸಂಗದಿಂದತನುವುಶುದ್ಧವಪ್ಪುದುನೋಡಿರೋ|ಶರಣಸಂಗದಿಂದ ಮನನಿರ್ಮಲವಪ್ಪುದು ನೋಡಿರೋ | ಶರಣರಸಂಗದಿಂದ ಸಕಲಕರಣೇಂದ್ರಿಯಂಗಳು ಲಿಂಗಮುಖವಪ್ಪುವುದುನೋಡಿರೊ | ನಮ್ಮಅಖಂಡೇಶ್ವರನಶರಣರಸಂಗದಿಂದ ಮುಂದೆಸತ್ಪಥವುದೊರಕೊಂಬುವದು ತಪ್ಪದುನೋಡಿರೊ || ೩೯ || ಸಕಲಗಣಂಗಳು ತಮ್ಮವಚನಾನುಭವವೆಂಬ ಪರಮಾಮೃತವನ್ನು | ಯಂನಕರವೆಂಬ ಕುಡುಹುಕಟ್ಟಿ ಯಂಕರರಿಸು

ಲು ಅದು ಮನದಲ್ಲಿ ಮೂರ್ತಿಯಾಗಿ ವಳಗೆ ಪ್ರಾಣಲಿಂಗವಾಯಿತು| ಹೊರಗೆಯಿಷ್ಟಲಿಂಗವಾಯಿತು । ಯಿಂನಹೊರಹೊಳಗೆ ಭರಿತವಾದಅಖಂಡೇಶ್ವರನೆಂಬ ಪರಶಿವನುಡಿಸಿದಂತೆ ವಚನರಚನೆಯನುಡಿದನಲ್ಲದೆ । ಯನ್ನ ಮನಕ್ಕೆಬಂದುತೆನುಡಿಯಲಿಲ್ಲಕೇಳಿರಣ್ಣಾ || ೪೦ || ಅನುಭಾವಿಗಳಸಂಗಕೀಟಕಭ್ರಮರವಾದಂತೆಕೇಳಿರೊ । ಅನುಭಾವಿಗಳಸಂಗಪುರುಷಲೋಹದಂತೆಕೇಳಿರೊ ।ನಮ್ಮ ಅಖಂಡೇಶ್ವರಲಿಂಗದೊಡನೆಬೆರದಶಿವಾನುಭಾವಿಗಳಸಂಕ ಕರ್ಪೂರಜ್ಯೋತಿಯಂತೆಕಾಣಿರೊ ||೪೧|| ಅಗ್ನಿಯಸಂಗದಿಂದಕಾವನಸುಟ್ಟಂತೆ।ಜ್ಯೋತಿಯಸಂಗದಿಂದಎನ್ನ ಹುಟ್ಟುಹೊಂದುಗಳುನಷ್ಟವಾಗಿಕೆಟ್ಟುಹೋದವುನೋಡಾ ಅ ||೪೨|| ಕಾಯವೇಕೈಲಾಸವಾಗಿ ಮನವೇ ಮಹಾಜ್ಞಾನವಾಗಿ।ಭಾವವೇಪುಷ್ಪದಪೂಜೆಯಾಗಿ। ಅಖಂಡಪರಿಪೂರ್ಣಜ್ಞಾನದಬೆಳಗಿನೊಳಗೆಸುಳಿವ। ಮಹಾಶರಣರತೋರಿಸಿ ಬದುಕಿಸಯ್ಯಾಯನ್ನ ಅಖಂಡೇಶ್ವರಾ ||೪೩|| ಒಬ್ಬರುನಡದಾಚರಣೆಯಲ್ಲಿನುಡಿಯ। ಒಬ್ಬರುಹಿಡಿದಶೀಲವಹಿಡಿಯರು । ಒಬ್ಬರುನುಡಿದಭಾಷೆಯನುಡಿಯರು । ಅದೇನುಕಾರಣವೆಂದಡೆ—ತಮ್ಮಲಿಂಗಮುಚ್ಚನಡಿವರು ।ತಮ್ಮಲಿಂಗಮುಚ್ಚನುಡಿವರುಇದುಕಾರಣ ಅಖಂಡೇಶ್ವರನಿಮ್ಮಶರಣರುಪರಮಸ್ವತಂತ್ರಶೀಲರು || ೪೪ || ಶೀಲವಂತರೆಂದುಶೀಲಸಂಪಾದನೆಯಮಾಡುವಕರ್ಮಿಗಳನೇನೆಂಬೆನಯ್ಯಾಗುರುಭಕ್ತಿಯಿಂದೆತನುಶುದ್ಧವಾಗಲಿಲ್ಲ । ಲಿಂಗಪೂಜೆಯಿಂದತನುಪ್ರಶುದ್ಧವಾಗಲಿಲ್ಲ । ಜಂಗಮದಾಸೋಹದಿಂದ ಧನಪ್ರಶುದ್ಧವಾಗಲಿಲ್ಲ । ಸಟೆಯಸಂಸಾರಶರಧಿಯೊಳಗೆ । ಮುಳುಗಿಕುಟಿಲವ್ಯಾಪಾರವನಂಗೀಕರಿಸಿ । ನಾವ್ರುಧಿಟಶೀಲವಂತರೆಂದು ನುಡಿದುಕೊಂಬುವ ಘಣಿಂಗಭಂಡರವಿಧಿ ಯಂತಾಇತೆಂದಡೆ । ಹೆಂಡದಗಡಿಗಿಗೆವಿಭೂತಿಮಂಡಲವಬರದಂತಾಯಿತುಕಣಾ ||ಅ||೪೫|| ಶಿವನೇಗುರುವೆಂದು।ಗುರುವಿಂಗೆತನುವಂನರ್ಪಿಸಿಶಿವನೆಲಿಂಗವೆಂದುಲಿಂಗಕ್ಕೆಮನವನರ್ಪಿಸಿ। ಶಿವನೆಜಂಗಮವೆಂದುಜಂಗಮಕ್ಕೆಧನವನರ್ಪಿಸಿಆಗುರುಲಿಂಗಜಂಗಮದಘನಪ್ರಸಾದವಪಡೆದು ನಿಜಮುಕ್ತಿಯನೈದಲರಿಯದೆನನ್ನಶೀಲಹೆಚ್ಚುತನ್ನಶೀಲಹೆಚ್ಚೆಂದು ಕಲಸೂತಕಛಲಗ್ರಹಕರಿಂದಒಬ್ಬರೊಬ್ಬರಹಳಿದಾಡುವ ಶೀಲವಂತರಮೆಚ್ಚುವನೇನಮ್ಮ ||ಅ||೪೬|| ಶೀಲಶೀಲವೆಂದುನುಡಿವುತಿರ್ಪರೆಲ್ಲರು । ಶೀಲದಹೊಲಬನ್ಯಾರುಅರಿಯರಲ್ಲಾ । ಕೆರೆಭಾವಿಹಳ್ಳಕೊಳ್ಳ । ಹೊಳೆಗಳಸೀರಬಳಸದಿರ್ದಡೇಶೀಲವೇ ।ಕೊಡಕ್ಕೆಪಾವಡಹಾಕಿ ಚಿಲುಮೆಶೀತಾಳತಂದರೆ ಇದುಶೀಲವೇ।ಒಳ್ಳೆಭಂಗಿವುಳ್ಳಗುಸ್ಸಿಯಬಿಟ್ಟರೆಶೀಲವೇ । ಬೆಳದಬೆಳಸುಕಾಯಿಹಂಣುಗಳಬಿಟ್ಟರೆ ಶೀಲವೇ ಪುಷ್ಪಯಂ

ಣಿಹಾಲುತುಪ್ಪವ ಯಿಂಗುಮೆಣಸು ಅಡಿಕೆ ಬೆಲ್ಲಗಳಬಿಟ್ಟರೆಶೀಲವೇ। ಪರ ಪಾಕವಬಿಟ್ಟುಸ್ವಯಂಪಾದದಲ್ಲಿದ್ದರೆ ಶೀಲವೇ। ಭವಿಯಕಾಣಬಾರದಂತಿರ್ದಡೆಶೀಲವೇ ಅಲ್ಲಲ್ಲಾ ಅದೇನುಕಾರಣವೆಂದರೆ,--ಇಂತಿವೆಲ್ಲವು ಹೊರಗಣ ವ್ಯವಹಾರವು। ಇನ್ನು ಅಂತರಂಗದಅರಿಷಡ್ವರ್ಗಂಗಳೆಂಬಭವಿಗಳ ಕಳೆಯಲಿಲ್ಲ। ಮಾಯಾಮೋಹಬೆಳೆವುಳಗುನ್ನಿಯಬಿಡಲಿಲ್ಲ॥ ಸಂಸಾರವಿಷಯರಸವೆಂಬಹಳ್ಳಕೊಳ್ಳಕೆರೆಭಾವಿಗಳಗಲಲಿಲ್ಲ। ಅಷ್ಟಮದಗಳೆಂಬ ಪುಷ್ಪಯಣ್ಣೆ ತುಪ್ಪಹಾಲು ಇಂಗು ಮೆಣಸು ಅಡಿಕೆಬೆಲ್ಲಗಳಬಿಡಲಿಲ್ಲ. ಸಕಲಕರಣಂಗಳೆಂಬೆಳೆಸುಫಲಂಗಳಬಿಡಲಿಲ್ಲ॥ ಮನವೆಂಬ ಕೊಡಕ್ಕೆ ಮಂತ್ರವೆಂಬ ಪಾವಡವ ಮುಚ್ಚಲಿಲ್ಲ। ಚಿತ್ಕ್ರಡನೆಂಬಬಲುಮೆಯಲ್ಲಿ ಚಿದಾಮೃತವೆಂಬ ಶೀತಾಳವ ತಂದು।ಚಿನ್ಮಯಲಿಂಗಕ್ಕೆಅಭಿಷೇಕವಮಾಡಲಿಲ್ಲ।ಇಂತೀಅಂತರಂಗದವಿಚಾರವನರಿಯದೆ। ಹಾಳಸಂಕಲ್ಪದಿಂದೆ ಬಹಿರಂಗದಪದಾರ್ಥಂಗಳಬಿಟ್ಟು॥ ಮುಕ್ತಿಯಪಡೆವೆನೆಂಬಯುಕ್ತಿಗೇಡಿಗಳಿಗೆ ಬವಘಂಡನಂಗಳುಹಿಂಗಲಿಲ್ಲ।ಜನನಮರಣಂಗಳುಜಾರಲಿಲ್ಲ। ಸಂಸಾರ ಮಾಯಾಮೋಹಘಸೀಗಲಿಲ್ಲ। ಇಂತಪ್ಪಅಜ್ಞಾನಿಗಳವಿಧಿಯಂತಾಯಿತೆಂಡಡೆ,- ಹುತ್ತದೊಳಗಣಹಾವುಕೊಲ್ಲುವೆನೆಂದು ಮೇಲೆಹುತ್ತವಬಡಿಯುವ ಮರುಳನಂತಾಯಿತುನೋಡಾ ಅಖಂಡೇಶ್ವರಾ ॥೪೭॥ ಇಷ್ಟಲಿಂಗದಲ್ಲಿತನುವಡಗಿ। ಪ್ರಾಣಲಿಂಗದಲ್ಲಿಮನವಡಗಿಸಿ। ಭಾವಲಿಂಗದಲ್ಲಿಜೀವನವನಿಕ್ಷೇಪಿಸಿ। ಆಇಷ್ಟಪ್ರಾಣಭಾವಲಿಂಗವಂದಾದಮಹಾಘನಪರಬ್ರಹ್ಮದಲ್ಲಿ।ತಾನಡಗಿತಾನೆಂಬನೆನಹಡಗಿ।ದ್ವಂದ್ವಕರ್ಮಂಗಳನೀಗಿ। ಆ ಪರಿಪೂರ್ಣಪರಬ್ರಹ್ಮವೇತಾನಾದುದೇಮಹಾಶೀಲವಯ್ಯಾ॥ ॥ಅ॥೪೮॥ ಶರಣನಾದಡೆದುರಿದಬಂಗಾರಬಳೆಗಾರದಲ್ಲ ಚಿಚ್ಚಡಂತಿರಬೇಕು। ಲಿಂಗದಶರಣವಾದಡೆಶುಭ್ರವಸ್ತ್ರಕ್ಕೆ ಅಚ್ಚೊತ್ತಿದಂತಿರಬೇಕು। ಲಿಂಗದಲ್ಲಿಶರಣನಾದಡೆ। ಕರಗುಕಟ್ಟರದಲೋಹಪುತ್ಥಳಿಯಂತಿರಬೇಕು। ಲಿಂಗದಲ್ಲಿ ಇಂತೀಸಮರಸಭಾವವನರಿಯದೆಹುಸಿಗುಂಡಿನಂತೆವೇಷವಧರಿಸಿಗ್ರಾಸಕ್ಕೆ ತಿರುಗುವವೇಷಗಳ್ಳರಯನಗೊಮ್ಮೆ ತೋರದಿರಯ್ಯಾ ॥ಅ॥೪೯॥ ತಾಮಸಗುಣಂಗಳಲ್ಲಿಬಿದ್ದು ತ್ವರಿತವಿಷಯಂಗಳಲ್ಲಿಹರಿದಾಡಿ। ಭವಗಳಲ್ಲಿಬಿದ್ದುತ್ವರಿತವಿಷಯಂಗಳಲ್ಲಿಹರಿದಾಡಿಸತ್ತುಹುಟ್ಟುವಾತ। ಗುರುಸ್ಥಳಕ್ಕೆಸಲ್ಲ ಚರಸ್ಥಳಕ್ಕೆಸಲ್ಲ ಪರಸ್ಥಳಕ್ಕೆಸಲ್ಲ । ಗುರುಸ್ಥಲವೆಂದಡೆ ಘನಲಿಂಗಸ್ಥಲವು। ಚರಸ್ಥಲವೆಂದಡೆ ಅತೀತಸ್ಥಲವು। ಪರಸ್ಥಲವೆಂದಡೆ ವಿರಕ್ತಿಸ್ಥಳವು ।ಇಂತೀತ್ರಿವಿಧಸ್ಥಲವನರಿಯಬಲ್ಲಾತನೇ ಈಸ್ಥಲಗಳಿಗೆಯೋಗ್ಯನೆಂಬೆನು ಈತ್ರಿವಿಧಸ್ಥಲವನರಿಯದವನರಿಯನೆತ್ರಿವಿಧಮಲದಲ್ಲಿಮುಳುಗಿತಾಪವಡೆಯು

ನಗೊಮ್ಮೆ ತೋರದಿರಯ್ಯಾ ||ಅ|| ||೫೦|| ಘನಲಿಂಗದೇವರು ಘನಲಿಂಗ ದೇವರೆಂದುನುಡಿದುಕೊಂಬ | ಬಿನುಗುವಲೆಯರನೇನೆಂಬನಯ್ಯಾ |ಹೊಟ್ಟೆಯಕಿಚ್ಚಿಗೆ ಒಟ್ಟೆದಬಣವೇಸುಟ್ಟಾತ | ಘನಲಿಂಗದೇವರೆಕೊಟ್ಟಾತವಳಗೆ ಕೊಪದಾತಹೊರಗೆ | ಎಂದುಲಿಂಗವಮೆಟ್ಟಿಮೆಟ್ಟಿಹರಿವಾತಘನಲಿಂಗದೇವರೆ | ವಡೆಯನವೇಷವಧರಿಸಿ|ವಡಲಕಿಚ್ಚಿಗೆತುಡುಗನಾಯಂತೆಕಡಿದುವನ್ನವನಿಕ್ಕುವಾತಘನಲಿಂಗದೇವರೆ | ಹವುದಾದುದುಅಲ್ಲವಮಾಡಿ| ಅಲ್ಲವಾದುದು ಅವುದುಮಾಡಿ| ಅಧರ್ಮಅನ್ಯಾಯದಲ್ಲಿಹೊಡದಾಡಿ | ಹೋಲುಬುದಪ್ಪಿ ಮುಡಿದುಹೋಗುವ | ಬಾಯಬಡಿಕಭ್ರಷ್ಟಮಾದಿಗರ ಘನಲಿಂಗದೇವರೆಂದರೆ| ಅಘೋರನರಕತಪ್ಪದಯ್ಯಾ ||ಅ|| ||೫೧|| ಸತ್ಯಾಸತ್ಯವೆಂದು ವಿವರಿಸಿತಿಳಿದು ಅಸತ್ಯವಕಳೆದು | ನಿತ್ಯವಸಾಧಿಸಬಲ್ಲಾತನೇಘನಲಿಂಗದೇವರೆಂಬೆನು ನಿತ್ಯಾನಿತ್ಯವವಿವರಿಸಿತಿಳಿದು ಅನಿತ್ಯವಕಳೆದುನಿತ್ಯವಹಿಡಿಯಬಲ್ಲರೆ ಘನಲಿಂಗದೇವರೆಂಬೆನು | ಪುಣ್ಯಪಾಪವೆಂದುವಿವರಿಸಿತಿಳಿದುಪಾಪವಕಳೆದುಪುಣ್ಯವ ಗ್ರಹಿಸಬಲ್ಲಡೆ ಘನಲಿಂಗದೇವರೆಂಬೆನು | ಧರ್ಮಕರ್ಮಂಗಳ ವಿವರಿಸಿತಿಳಿದು| ಕರ್ಮವಕಳೆದು ಧರ್ಮವಬಿಡದಿರಬಲ್ಲರೆ | ಘನಲಿಂಗದೇವರೆಂಬೆನುಆಚಾರಅನಾಚಾರವೆಂದುವಿವರಿಸಿತಿಳಿದು | ಅನಾಚಾರವಕಳೆದುಆಚಾರಸಂಪನ್ನನಾಗಬಲ್ಲರೆ ಘನಲಿಂಗದೇವರೆಂಬೆನು| ಇಂತೀವುಭಯನ್ಯಾಯವನರಿಯದಸಟಿಯನೆಧಿಟವಮಾಡಿ | ಧಿಟವನೆಸಟೆಯಮಾಡಿ ಘಟವಹೊರೆವಕುಟಿಲ ಕುಹಕರ | ತುಟಿಯತನಕಾಮೂಗಕೊಯ್ದು | ಕಟವಾಯ ಸೀಳಿಕನ್ನಡಿಯತೋರಿಕಷ್ಟಜನ್ಮದಲ್ಲಿಹುಟ್ಟಿಸದೆಬಿಡುವನೇನಮ್ಮಅಖಂಡೇಶ್ವರಾ||೫೨|| ಪರಧನವಹಿಡಿಯದೆ | ಪರಸ್ತ್ರೀಯರಮುಟ್ಟದೆ | ಪರದೈವವಪೂಜಿಸದೆ | ಪರಹಿಂಸೆಯಮಾಡದೆ | ಪರಲೋಕದಫಲವಬಯಸದೆ | ಪರನಿಂದ್ಯವಕೇಳದೆ | ಗರ್ವಾಹಂಕಾರದಲ್ಲಿಚರಿಯದೆ |ಕಾರಣಾದಿಗುಣಂಗಳಲ್ಲಿಹರಿಯದೆ|ಗುರುಭಕ್ತಿಲಿಂಗಪೂಜೆ ಜಂಗಮದಾಸೋಹವಮರಿಯದೆ | ನಿತ್ಯಾದಾಚಾರವತೊರೆಯದೆ | ಸರ್ವಾಚಾರಸಂಪನ್ನನಾದಮಹಾತ್ಮನು | ಅನಾದಿ ಗುರುಪಟ್ಟಕ್ಕೆಘನವಾದ | ಮಹಾಘನಪರಶಿವಮೂರ್ತಿಯೆಂಬೆನಯ್ಯಾ ಅಖಂಡೇಶ್ವರಾ ||೫೩|| ಮಹಾಂತಿನಕೂಡಿದದೇವರುಗಳೆಂಬೆ|ಭ್ರಾಂತಿಗುಣದಭ್ರಷ್ಟರನೇನಂಬೆನಯ್ಯಾ|ಮಹಾಂತೆಂದಡೆ || ಗುರುಮಹಾತ್ಮೆ ಲಿಂಗಮಹಾತ್ಮೆ ಜಂಗಮಮಹಾತ್ಮೆ ಪಾದೋದಕಮಹಾತ್ಮೆ ಪ್ರಸಾದಮಹಾತ್ಮೆ ವಿಭೂತಿಯಮಹಾತ್ಮೆರುದ್ರಾಕ್ಷಿಯಮಹಾತ್ಮೆ ಮಂತ್ರಮಹಾತ್ಮೆ ಯೆಂಬ ಅಷ್ಟಾವರ್ಣಘನಮಹಾತ್ಮೆಯನರಿದು | ಆ ಅಷ್ಟಾವರ್ಣವೇಅಂಗವಾಗಿ | ಪಂಚಾ

ಚಾರವೇಪ್ರಾಣವಾಗಿ । ಅನಂತಸ್ಥಲಕುಲಂಗಳನೊಳಕೊಂಡು । ಪರಬ್ರ
ಹ್ಮವಕೂಡುವಸಮರಸಭಾವಸಶೀಲಭೇದವನರಿಯದೆ । ಆಶಾಕ್ಲೇಶದಲ್ಲಿಕ
ಟ್ಟುವಡೆದು । ಕಾಸುವೀಸುಮಠಮನೆಗಬಡಿದಾಡುವಭಾಷೆಭ್ರಷ್ಟರಲ್ಲಿ। ಮ
ಹಾಂತಿನಘನಮಿನ್ನೆಲ್ಲಿಹುದೋ । ಇಂತಪ್ಪಮಹಾಂತಿನಅರುಹುಕುರುಹಿ
ನಘನವನರಿಯದೆ । ನಾನುಮಹಾಂತಿಕನಕೂಡಿದದೇವರೆಂದು । ಹೊರಗೆ
ಆಡಂಬರವೇಷವತಾಳಿ ಜಡೆಯಬಿಟ್ಟರೇನು । ಆಲದಮರಕ್ಕೆಬೇರಿಳಿದಂತೆಸ
ರ್ವಾಂಗಕ್ಕೆಭಸ್ಮವಪೂಸಿದರೇನು । ಚಪ್ಪರದ ಕಗ್ಗುಂಬಳಿಕಾಯಿಬಿದ್ದಂತೆ
ಸ್ಥಾನಸ್ಥಾನಕ್ಕೆರುದ್ರಾಕ್ಷಿಯಧರಿಸಿದರೇನು । ಏರಂಡಗಿಡದಗೊನೆಯಬಿ
ಟ್ಟಂತೆಕಾಣಾ ಅಖಂಡೇಶ್ವರಾ ॥ ೫೪ ॥ ಅಂತರಂಗದಲ್ಲಿ ಅರುಹಿನ ಸುದ್ಧಿ
ಯನರಿಯದೆ । ಬಹಿರಂಗದಲ್ಲಿ ಕಂಥೆ ಕರ್ಪರ ದಂಡ ಕಮಂಡಲಭಸ್ಮಗುಂ
ಡಿಗೆಯೆಂಬ ಪಂಚಮುದ್ರೆಗಳ ಧರಿಸಿ । ಧರೆಯಮಂಡಲದೊಳಗೆ ಚರಿಸು
ವ ಅಣ್ಣಗಳಕಂಡು ಬೆರಗಾದನಯ್ಯಾ । ಅದೇನುಕಾರಣವೆಂದಡೆಪರಜನರ
ಮೆಚ್ಚಿಸುವೆನೆಂದು ಜಾತಿಕಾರನವೋಲು ವೇಷವ ಧರಿಸಿವಡಲಹೊರವಂತೆ
ಕೊಡಕೊಂಬುವ ಭಕ್ತನಮೆಚ್ಚಿಸುವೆನೆಂದು ವ್ಯಾಧನವೇಷಪಧರಿಸಿವಡಲ
ಕಾಕ್ಕುಲಾದಿಯಿಂತಿರುಗುವ ಕಡುಪಾತಕಜಡಜೀವಿಗಳ ಮುಖವನೋಡಲಾ
ಗದಯ್ಯಾ ಅಖಂಡೇಶ್ವರಾ ॥ ೫೫ ॥ ಅನುಪಮಲಿಂಗದಲ್ಲಿ ಅಂಗಮನಪ್ರಾ
ಣಂಗಳಡಗಿಸಿ । ಅವಿರಳಸಮರಸದಿಂದರ್ಪಿಸಿ । ಮಹಾಶರಣನಅರುಹಿನಪಂ
ಚಮುದ್ರೆಗಳಾವಾವೆಂದಡೆ ಸರ್ವಾಚಾರಸಂಪತ್ತೆಂಬಕಂಥ । ಅಜಂಡವೆಂ
ಬ ಕಮಂಡಲ । ಅಖಂಡವೆಂಬದಂಡ , ಪರಿಪೂರ್ಣಮಹಾಘನವೆಂಬ ಭಸ್ಮ
ಗುಂಡಿಗೆ । ಅನಾದಿಯೆಂಬ ಕರ್ಪರ । ಇಂತೀಅರುಹಿನ ಪಂಚಮುದ್ರೆಗಳ
ಅಂತರಂಗದಲ್ಲಿ ಧರಿಸಿ ಹೊರಗೆ ಬಹಿರಂಗದಮೇಲೆ ಮುನ್ನಿಕ್ರಿಯ್ಯದಂತೆ।
ಪಂಚಮುದ್ರೆಗಳ ಧರಿಸಿಕೊಂಡು । ಮಾಯಾವಿರಹಿತವೆಂಬ ಹಾವುಗೆಯ
ಮೆಟ್ಟಿಕೊಂಡು । ಲೋಕಪಾವನವಮಾಡುತ್ತ ಭಕ್ತಿಭಿಕ್ಷಾಂದೇಹಿಯಾಗಿ
ಸುಳಿವ ಮಹಾಘನಪರಮ ಮಹಾಂತಿನಜಂಗಮದ ಶ್ರೀಪಾದಕ್ಕೆ ನಮೋ
ನಮೋಯೆಂಬೆನಯ್ಯಾ ಅಖಂಡೇಶ್ವರಾ ॥ ೫೬ ॥ ನಾದಬಿಂದುಕಳಾತೀತ
ವಾದ ಪರವಸ್ತುವೇ ಮಹಾಂತುನೋಡಾ । ಆದಿಮಧ್ಯಾಂತವಿಲ್ಲದಪರವಸ್ತು
ರವವಸ್ತುವೇ ಮಹಾಂತುನೋಡಾ । ಇಂತಪ್ಪಮಹಾಂತಿನಮಹಾಜಂಗಮ
ದರವಸ್ತುವೇ ಮಹಾಂತುನೋಡಾ । ಇಂತಪ್ಪಮಹಾಂತಿನಮಹಾಜಂಗಮ
ದ ಶ್ರೀಪಾದವತೋರಿಸಿ ಬದುಕಿಸಯ್ಯಾಯನ್ನ ಅಖಂಡೇಶ್ವರಾ ॥ ೫೭ ॥ ವಿ
ರಕ್ತನೆನಿಸುವಾತಗೆಆವಚಿನ್ಹವೆಂದಡೆ । ಧಿಷಯವಿಕಾರವ ಸುಟ್ಟಿರಬೇಕು

ಭಯಕ್ಕೆ ನಿರ್ಭಯನಾಗಿರಬೇಕು । ಸತ್ವರಜತಮೋಗುಣಂಗಳ ನಿಟ್ಟೊರಸಬೇಕು ಅದೆಂತೆಂದೊಡೆ,—॥ಶ್ಲೋ॥ ವಿಕಾರಂವಿಷಯಂದೂರಂ । ರಕಾರಂರಾಗವರ್ಜಿತಂ ॥ ಕಕಾರಂತ್ರಿ ಗುಣಂನಾಸ್ತಿ। ವಿರಕ್ತಸ್ಯಸುಲಕ್ಷಣಂ ॥ ೧ ॥ ಎಂದುದಾಗಿ ಇಂತಪ್ಪ ವಿರಕ್ತನ ಶ್ರೀಪಾದಕ್ಕೆ ನಮೋನಮೋಯೆಂಬೆನಯ ಅಖಂಡೇಶ್ವರಾ ॥ ೫೮ ॥ ಆಲವುವೇಷವಧರಿಸಿ ಹಲವುಭಾಷೆಯಕಲಿತು । ಹಲವುವಿಷಯಕ್ಕೆಹರಿದಾಡಿದರೇನು । ಕಾಲಾರಿಯಂತಲ್ಲದೆ ನಿಜವಿರಕ್ತನಲ್ಲನೋಡಾ । ಅದೇನುಕಾರಣವೆಂದಡೆ,—ತನುವಿನ ಆಶೆಯು ಮೀಸಲುಹಿಂಗದಾಗಿ । ಊರಾಶ್ರಯಬಿಟ್ಟು ಕಾಡಾಶ್ರಮಗಿರಿಕಂದರದಲ್ಲಿರ್ದರೇನು । ಹಗಲುಕಂಣುಕಾಣದಗೂಗೆಯಂತಲ್ಲದೆನಿಜವಿರಕ್ತಿಯಲ್ಲನೋಡಾ ।ಅದೇನುಕಾರಣವೆಂದಡೆ,—ಮನದಪರಿಯಡಗಿದ್ದಾಗಿಹಸಿವುತೃಷೆಯ ಬಿಟ್ಟು ಮಾತನಾಡನೆಮೌನಗೊಂಡಿರ್ದಡೇನು ಕಲ್ಲು, ಮರ, ಮೋಟ ಗುಲ್ಮಂಗಳಂತಲ್ಲ ನಿಜವಿರಕ್ತಿಯಲ್ಲಿನೋಡಾ । ಅದೇನುಕಾರಣವೆಂದಡೆ,—ವಿಷಯವ್ಯವಹಾರಹಿಂಗದಾಗಿ ನಿದ್ರೆಯತೊರೆದು ಯೆದ್ದು ಕುಳ್ಳಿರ್ದಡೇನು। ಕಳ್ಳಪೂರಹೊಕ್ಕುವುಲಾವಡಗುವನ ಕಾಮರೆಯಲ್ಲಿಕುಳಿತಂತಲ್ಲದೆ ನಿಜವಿರಕ್ತಿಯಲ್ಲನೋಡಾ । ಅದೇನುಕಾರಣವೆಂದಡೆ,—ಅಂತರಂಗದಘನಗಂಭೀರ ಮಹಾಬೆಳಗಿನ ಶಿವಸಮಾಧಿಯನರಿಯದಕಾರಣ । ಇಂತಪ್ಪಹೊರವೇಷದ ಡಂಬಕಜೊಳ್ಳಮನದವರಿಗೆವಿರಕ್ತರೆಂದರೆಮೆಚ್ಚುದಿರಯ್ಯಾನಿಮ್ಮಶರಣರುಅಖಂಡೇಶ್ವರಾ ॥ ೫೯ ॥ ಬಹುಕ್ರಿಯವನಟಿಸದೆ । ಬಹುಶಾಸ್ತ್ರಕ್ಕೆಮುಖವಾಗದೆ ಬಹುವ್ಯಾಪಾರದಲ್ಲಿತೊಳಲದೆ । ಬಹುಬಾಷೆವಂತನಾಗದೆ । ಹುಸಿಕಳವುಪರದಾರಾಹಿಂಸಕ್ಕೆ ಚಿತ್ತವೆಳಸದೆ ಸುಖದುಃಖಕ್ಕೆ ಚಿಂತಿಸದೆ ನಿಂದಾಸ್ತುತಿಗೆಹಿಗ್ಗಿ ಕುಗ್ಗದೆ ಹಿಂದುಮುಂದುನೆಣಿಸದೆ ॥ ಹಿರಿಯತನಕ್ಕೆಹೋಗದೆ । ಶಿವಜ್ಞಾನಸಂಪನ್ನನಾಗಿ ಶಿವಮಂತ್ರದಲ್ಲಿ ಸುಮಿಧಾನಿಯಾಗಿ।ಶಿವಜ್ಞಾನದಲ್ಲಿಪರಾಯಣನಾಗಿ । ಏಕಾಂತವಾಸಿಯಾಗಿ ॥ ಭಿಕ್ಷಾಹಾರಿಯಾಗಿ ಜಂಗಮನದಾಸೆಹಿಂದುಳಿದು ಲಿಂಗನೆನಹುಮುಂದುಗೊಂಡು । ಶಿವಾಣತಿಯಿಂದಬಂದಬಂದಪದಾರ್ಥವ ಲಿಂಗಾರ್ಪಿತವಮಾಡಿ । ಲಿಂಗದನಡೆ ಲಿಂಗದನುಡಿ ಲಿಂಗದನೋಟ ಸರ್ವಾಂಗಲಿಂಗಭರಿತನಾಗಿ ಕರ್ಪೂರವು ವುರಿಯುಪ್ಪಿನಿರ್ವಯಲಾದಂತೆ । ತನುವು ಇಷ್ಟಲಿಂಗವನಪ್ಪಿಮನವುಪ್ರಾಣಲಿಂಗವನಪ್ಪಿ ಭಾವವು ಅಖಂಡಬಯಲಬ್ರಹ್ಮವನಪ್ಪಿ। ತಾನುತಾನಾದ ಮಹಾಜ್ಞಾನಪರಮವಿರಕ್ತನಶ್ರೀಪಾದಕ್ಕೆನಮೋನಮೋಯೆಂಬೆನಯ್ಯಾ ಅಖಂಡೇಶ್ವರಾ ॥೬೦॥ ಚರಣದೊಳಗೆಚರಣವಿಟ್ಟುನಡೆವಭೇದವನು ನಿಮ್ಮಶರಣರಿಗಲ್ಲದೆವುಳಿದವರಿಗ

ಳವಡದುನೋಡಾ | ಕರದೊಳಗೆಕರವನಿಟ್ಟುಮುಟ್ಟುವಭೇದವು ನಿಮ್ಮಶರಣರಿಗಲ್ಲದೆ ವುಳಿದವರಿಗಳವಡದುನೋಡಾ | ಘ್ರಾಣವನಿಟ್ಟುವಾಸಿಸುವಭೇದವು | ನಿಮ್ಮಶರಣರಿಗಲ್ಲದೆ ವುಳಿದವರಿಗಳವಡದುನೋಡಾ | ಘ್ರಾಣದೊಳಗೆಘ್ರಾಣವನಿಟ್ಟುವಾಸಿಸುವಭೇದವು ನಿಮ್ಮಶರಣರಿಗಲ್ಲದೆ ವುಳಿದವರಿಗಳವಡದುನೋಡಾ | ಕಿವಿಯೊಳಗೆಕಿವಿಯನಿಟ್ಟು ಕೇಳುವಭೇದವುನಿಮ್ಮಶರಣರಿಗಲ್ಲದೆ ವುಳಿದವರಿಗಳವಡದುನೋಡಾ | ಮನದೊಳಗೆಮನವನಿಟ್ಟುನೆನೆವಭೇದವು ನಿಮ್ಮಶರಣರಿಗಲ್ಲದೆ ವುಳಿದವರಿಗಳವಡದುನೋಡಾ ಭಾವದೊಳಗೆ ಭಾವನಿಟ್ಟುಸುಳಿವಭೇದವುನಿಮ್ಮಶರಣರಿಗಲ್ಲ ದೆವುಳಿದವರಿಗಳವಡದುನೋಡಾ ಅಖಂಡೇಶ್ವರಾ|| ||೬೧||

ಯೆನ್ನತನುವೇಬಸವಣ್ಣನು | ಯೆನ್ನ ಮನವೇ ಚನ್ನಬಸವಣ್ಣನು| ಯೆನ್ನ ಪ್ರಾಣವೇಪ್ರಭುದೇವರು | ಯೆನ್ನ ಸರ್ವಕರಣಂಗಳೆಲ್ಲಾ ಅಸಂಖ್ಯಾತಮಹಾಗಣಂಗಳಾಗಿರ್ಪರಾಗಿ | ಅಖಂಡೇಶ್ವರಾನಿಮ್ಮೊಳಗೆನಿಜವುಸಾಧ್ಯವಾಯಿತಯ್ಯಾಯನಗೆ ||೬೨|| ಬಸವಣ್ಣನೇಗುರುವೆನಗೆ | ಬಸವಣ್ಣನೆಲಿಂಗವೆನಗೆ | ಬಸವಣ್ಣನೆಜಂಗಮವೆನಗೆ | ಬಸವಣ್ಣನೆಪಾದೋದಕವೆನಗೆ|ಬಸವಣ್ಣನೆಪ್ರಸಾದವೆನಗೆ | ಬಸವಣ್ಣನೆವಿಭೂತಿಯನಗೆ | ಬಸವಣ್ಣನೆರುದ್ರಾಕ್ಷಿಯನಗೆ | ಬಸವಣ್ಣನೆಮಂತ್ರವೆನಗೆ | ಬಸವಣ್ಣನೆಅಷ್ಟಾವರಣವೆನಗೆ | ಬಸವಣ್ಣನೆಪಂಚಾಕ್ಷರಾವೆನಗೆ| ಬಸವಣ್ಣನಷಡುಸ್ಥಲಬ್ರಹ್ಮವೆನಗೆ| ಬಸವಣ್ಣನೆಸರ್ವಾಚಾರಸಂಪತ್ತಾಗಿ | ಬಸವಣ್ಣನಹಾಸಿಕೊಂಡು |ಬಸವಣ್ಣನಹೊದ್ದುಕೊಂಡು | ಬಸವಣ್ಣನತೋರಿಕೊಂಡು| ಬಸವಣ್ಣನಧರಿಸಿಕೊಂಡು | ಬಸವಣ್ಣನಚಿದ್ಗರ್ಭದೊಳಗೆಕುಳ್ಳಿರ್ದು| ನಾನುಬಸವಣ್ಣಬಸವಾಬಸವಾ ಯನುತಿರ್ದೆನಯ್ಯಾ ಅಖಂಡೇಶ್ವರಾ|| ೬೩||

ಬಸವನನಾಮವುಕಾಮಧೇನುಕಾಣಿರೊ |ಬಸವನನಾಮವುಕಲ್ಪವೃಕ್ಷವುಕಾಣಿರೊ | ಬಸವನನಾಮವುಚಿಂತಾಮಣಿಯುಕಾಣಿರೊ | ಬಸವನನಾಮವುಪುರುಷದಣಿಯುಕಾಣಿರೊ|ಬಸವನನಾಮವುಸಂಜೀವನದಮೂಲಿಕೆಯುಕಾಣಿರೊ | ಇಂತಪ್ಪಬಸವನಾಮಾಮೃತವುಯನ್ನ ಜಿಹ್ವೆಯುತುಂಬಿಸಕಲಕರಣೇಂದ್ರಿಯಂಗಳುತುಂಬಿ | ಹೊರಸೂಸುವಸರ್ವಾಂಗರೋಮಕುಳಿಗಳೆಲ್ಲಾ ವೇದಿಸಿತ್ತಾಗಿ | ನಾನುಬಸವಕ್ಷರನೆಂಬಹಡಗವನೇರಿಬಸವಾ ಬಸವಾಯೆಂದು ಭವಸಾಗರವದಾಟಿದೆನಯ್ಯಾ ಅಖಂಡೇಶ್ವರಾ ||೬೪||

ಜಗದಮಧ್ಯದಲ್ಲಿಶರಣಜನಿಸಿದಡೇನು | ಆಜಗದಸ್ವರೂಪನೇಅಲ್ಲಲ್ಲಾ ಅದೇನುಕಾರಣವೆಂದಡೆ,—ಕೋಗಿಲೆಯತತ್ತಿಯನೊಡೆದು |ಕಾಗಿಯುಮ

ರಿಯುವಮಾತಿನಸಲಹಿದಡೇನು । ಅದುತನ್ನ ಕೋಗಿಲೆಯುಹಿಂದು ಕೂಡುವದಲ್ಲದೆ । ಮರಳಿಕಾಗೆಯಹಿಂದಬೆರವುದೆಹೇಳಾ । ಲೋಕದಮಧ್ಯದಲ್ಲಿಅನಾದಿಪರಶಿವನಶರಣನು ಲೋಕೋಪಚಾರವಾಗಿಜನಿಸಿದಡೇನು । ತನ್ನ ಮುನ್ನಿನಶಿವತತ್ವವನೆಬೆರವನಲ್ಲದೆಮರಳಿಲೋಕದಿಬೆರೆಯನೋಡಾ ಅಖಂಡೇಶ್ವರಾ ॥

ಶರಣನುಗಮನಿಯಾದಡೆಹಿರಿದೆಂಬರು। ನಿರ್ಗಮನಿಯಾದಡೆಕಿರಿದೆಂಬರು । ನಾವಿದನ್ನರಿಯೆವಯ್ಯಾ । ಶರಣನುಆಶ್ರಮವಂತನಾದಡೆಕಿರಿದೆಂಬರು ನಿರಾಶ್ರಮವಂತನಾದಡೆಹಿರಿದೆಂಬರು ನಾವಿದನರಿಯೆವಯ್ಯಾ । ಶರಣನುಸರ್ವವ್ಯಾಪಾರಿಯಾದಡೆಕಿರಿದೆಂಬರು । ನಾವಿದನರಿಯೆವಯ್ಯಾ । ಶರಣನುಭೋಗೋಪಿಯಾದಡೆಕಿರಿದೆಂಬರು । ನಿರ್ಭೋಗಿಯಾದರೆಹಿರಿದೆಂಬರು। ನಾವಿದನರಿಯೆವಯ್ಯಾ। ಹುರಿದಬೀಜಮರಳಿಹುಟ್ಟಬಲ್ಲದೆ। ಬೆಂದನುಲಿಕಟ್ಟುವೆಡವುದೆ । ಹುಟ್ಟಗೆಟ್ಟಶರಣನಪಟಿಯದೇಹವಧರಿಸಿ ಸಾಕಾರವೆನಿಸಿಲೋಕದೊಳಗಿರ್ದಡೇನು ಲೋಕದಂತಾತನೇ ಅಲ್ಲಲ್ಲಾ । ಆತನಪರಿಪ್ರಕಾರನೀರೆಕಾಣಿರೋ ಅದೆಂತೆಂದಡೆ ।ಬಿರಿಸಿನೊಳಗಣಮದ್ದುಅಗ್ನಿಯಸೋಂಕಿಲಗ್ನಿಸ್ವರೂಪವಾಗಿತೋರುವಂತೆ । ಆಶರಣನತನುಮನಭಾವ ಸರ್ವಕರಣೇಂದ್ರಿಯಂಗಳೆಲ್ಲಾಲಿಂಗವನಪ್ಪಿ । ಲಿಂಗಮಯವಾಗಿತೋರುತಿರ್ದನಾಗಿ ।ಆತಆವಾವಕ್ರಿಯೆಯಲ್ಲಿರ್ದಡೇನು । ಆವಾವಭೋಗದಲ್ಲಿರ್ದಡೇನುಕುಂದುಕೊರತೆಯಿಲ್ಲ । ಹಿಂದೆಶಂಕೆಯಿಲ್ಲ ಮುಂದೆಜನ್ಮವಿಲ್ಲ ।ಆಶರಣನುಯೆಂತಿರ್ದಂದಡೆ। ಸಹಜಬ್ರಹ್ಮವಾಗಿರ್ದನು ನೋಡಿರೋನಮ್ಮ ಅಖಂಡೇಶ್ವರಾ ॥ ಸಂದೇಹಸೂತಕಿಯಲ್ಲಾಶರಣ । ಬಂದಿತೋಬಾರದೋಯೆಂಬ ತಥ್ಯಮಿಥ್ಯಾರಾಗದ್ವೇಷಯಲ್ಲಾಶರಣ । ನಿಂದಾಸ್ತುತಿಗೆಹಿಗ್ಗಿ ಕಗ್ಗುವನಲ್ಲಾಶರಣ । ಇದುಕಾರಣಅಖಂಡೇಶ್ವರ ನಿಮ್ಮಶರಣನ ಪರಿಯಾವಲೋಕಗುಯಿಲ್ಲ ।ಕಾಷ್ಠದಲ್ಲಿಬೊಂಬೆಯುಮಾಡಿ । ಪಟ್ಟೀನೂಲಸೂತ್ರವಮಾಡಿ । ತೆರೆಯಮರೆಯಲ್ಲಿನಿಂದು । ಸೂತ್ರಿಕಕುಣಿಸಿದಡೆಕುಣಿವುರಿರ್ಪುದಲ್ಲದೆ। ಆಕಾಷ್ಠದಬೊಂಬೆತನ್ನತಾನೆಕುಣಿವುದೇಅಯ್ಯಾ । ಯೆನ್ನ ತನುವೆಂಬ ಅಚೇತನಬೊಂಬೆಗೆಪ್ರಾಣವಾಯುವೆಂಬಜೀವನಸೂತ್ರಹೂಡಿ । ಮನವೆಂಬತೆರೆಯಮರೆಯಲ್ಲಿನಿಂದುನೀನಾಡಿಸಿದಡೆ । ನಾನಾಡುತಿರ್ಪೆನಲ್ಲದೆ । ಯೆನಗೇನೀರೆಸ್ವತಂತ್ರವೇಹೇಳಾ ಅಖಂಡೇಶ್ವರಾ॥

ಯೆನ್ನ ತನುವೆಂಬನಡೆಗಳೆಲ್ಲಾನಿಮ್ಮನಡೆಗಳಯ್ಯಾ।ಎನ್ನನುಡಿಗಳೆಲ್ಲಾನಿಮ್ಮನುಡಿಗಳಯ್ಯಾ। ಎನ್ನನೋಡುವನೋಟವೆಲ್ಲಾನಿಮ್ಮನೋಟವಯ್ಯಾ ಎಂನಕೇಳುವಕೇಳ್ವಿಯಲ್ಲಾ ನಿಮ್ಮ ಕೇಳ್ವಿಯಯ್ಯಾ । ನಾನುಆವಾವ ಪ

ರಿಯಲ್ಲಿಆಡುವಆಡಿಕೆಗಳೆಲ್ಲಾನಿಂಮಬೆಡಗಿನಲೀಲೆಯಯ್ಯಾ॥ಅ ॥೬೯॥

ಲಿಂಗಾಂಗಸಮರಸವನರಿಯದೆಖಂಡಿತಬುದ್ಧಿಯಿಂದಲಿಂಗವಬೇರಿಟ್ಟುಕೊಂಡುಸಕಲಭೋಗೋಪಭೋಗವನರ್ಪಿಸಿದೆವೆಂಬ ಭಂಗಗೇಡಿಗಳಮಾತುಕೇಳಲಾಗದು ಅದೆಂತೆಂದಡೆ। ಆಲಿಂಗಕ್ಕೆಶರಣನಲಲಾಟದಲ್ಲಿ। ಗಂಧಾಕ್ಷತೆಶೃಂಗಾರವಲ್ಲದೆ ॥ಬೇರೆಮತ್ತೆಗಂಧಾಕ್ಷತೆಯಶೃಂಗಾರವುಂಟೆ।ಆಲಿಂಗಕ್ಕೆರಣನಕರ್ಣದಲ್ಲಿಪಂಚಮಹಾವಾದ್ಯದಕೇಳಿಕೆಯಲ್ಲದೆ। ಬೇರೆಮತ್ತೆಕೇಳಿಕೆಯುಂಟೆ। ಆಲಿಂಗಕ್ಕೆಶರಣನಕಂಗಳಲ್ಲಿನಾನಾವಿಚಿತ್ರದರೂಪಿನವಿನೋದವಲ್ಲದೆಮತ್ತೆವಿನೋದವುಂಟೆ। ಆಲಿಂಗಕ್ಕೆಶರಣನಜಿಹ್ವೆಯಲ್ಲಿಷಡುರುಸಾನ್ನನೈ । ವೇದ್ಯವುಂಟೆ । ಆಲಿಂಗಕ್ಕೆಶರಣನತ್ವಕ್ಕಿನಲ್ಲಿ ವಸ್ತ್ರಾಭರಣಅಲಂಕಾರವಲ್ಲದೆ। ಬೇರೆಮತ್ತೆಅಲಂಕಾರವುಂಟೆ। ಆಲಿಂಗಕ್ಕೆಶರಣನಪರಮಹೃದಯಕೆಮಕಮಲವೇನಿಜಾನಂದವಾಸವದೇಬೆರೆಮತ್ತುನಿಜಾವಾಸವುಂಟೆ।ಇಂತಾಶರಣನಸಂನಹಿತಲಿಂಗ।ಲಿಂಗಸಂನಿಹಿತಶರಣನೆನಬುದನರಿಯದಬಳಿಕಅನಂತಕಾಲಲಿಂಗವಧರಿಸಿಕೊಂಡುಲಿಂಗಾಂಗಿಯನಿಸಿದಡೇನು । ಅದುಪಶುವಿನತೊಡೆಯಲ್ಲಿಬರದವಮುದ್ರೆಯಂತೆಕಂಡ್ಯಾಅಯ್ಯಾ॥ಅ॥ ॥೭೦

ತನುವಿನಕಯ್ಯಲಿರ್ದ್ದಘನಲಿಂಗವನ್ನು । ಮನೋಮಂಟಪದಲ್ಲಿಕುಳ್ಳಿರಿಸಿ । ನೆನಹಿನ ಪರಿಣಾಮವ ಕೊಡಬಲ್ಲಾತನೇಶರಣನು । ಮತ್ತಾಲಿಂಗವನ್ನು ಕರ್ನಮಂಟಪದಲ್ಲಿಕುಳ್ಳಿರಿಸಿ ಶಬ್ದದಪರಿಣಾಮವ ಕೊಡಲ್ಲಾತನೇಶರಣನು । ಮತ್ತಾಲಿಂಗವನ್ನ । ಘ್ರಾಣಮಂಟಪದಲ್ಲಿಕುಳ್ಳಿರಿಸಿ । ಗಂಧಪರಿಣಾಮವಕೊಡಬಲಾತನೇ ಶರಣನು । ಮತ್ತಾಲಿಂಗವಂನಜಿಹ್ವೆಮಂಟಪವೆಲ್ಲಿ ಕುಳ್ಳಿರಿಸಿ। ರುಚಿಯ ಪರಿಣಾಮವಕೊಡಬಲ್ಲಾತನೇಶರಣನು ! ಮತ್ತಾಲಿಂಗವ । ಸರ್ವಾಂಗಮಂಟಪದಲ್ಲಿ । ಕುಳ್ಳಿರಿಸಿ । ಸರ್ವಪರಿಣಾಮವ ಕೊಡಬಲ್ಲಾತನೇ ಶರಣನು । ಇದಲ್ಲದೆ ಅಂಗವಿಕಾರಆತ್ಮಸುಖಿಗಳೆಲ್ಲರು ಭವದಕುರಿಗಳಯ್ಯಾ ॥ ಅ ॥ ೭೦ ॥ ಅನಾದಿಪರವಸ್ತುವು । ತನ್ನಸ್ವಲೀಲಭಾವದಿಂದತಾನೇಅಂಗವಾದುದು । ತಾನೇಲಿಂಗವಾದುದು ।ತಾನೇಸಂಮವಾದುದು । ನಾನೇಸಮರಸವಾದುದೆಂಬಭೇದವನಿಮ್ಮ ಶರಣಬಲ್ಲನಲ್ಲದೆ। ಪುಳಿದಕಂಣು ಗೆಟ್ಟಂಣಗದತ್ತಬಲ್ಲರಯ್ಯಾ ಅಖಂಡೇಶ್ವರಾ ॥೭೦॥

ಅನಾದಿಶಿವಾಂಶಿಕರಾದ ಶರಣರಿಗಲ್ಲದೆವೇದ್ಯವಾಗದುನೊಡಾಅಖಂಡೇಶ್ವರಾ । ನಿಮ್ಮಲ್ಲಿನಿಜಐಕ್ಯದಪದವು॥ ॥ ೭೨ ॥

ಶರಣಲಿಂಗಕ್ಕೆನೋಡುವಕಂಗಳುವಂದಲ್ಲದೆ ಯರಡಿಲ್ಲಕಾಣಿರೊ । ಶರಣಲಿಂಗಕ್ಕೆ,ಕೇಳುವಶ್ರೋತ್ರವು ವಂದಲ್ಲದೆ ಯರಡಿಲ್ಲ ಕಾಣಿರೊ । ಶರಣಲಿಂಗ

ಕ್ಕೆ ವಾಸಿಸುವನಾಸಿಕವುವಂದಲ್ಲದೆ ಯುರಡಿಲ್ಲ ಕಾಣಿರೊ । ಶರಣಲಿಂಗಕ್ಕೆ ರುಚಿಸುವಜಿಹ್ವೆವಂದಲ್ಲದೆ ಯುರಡಿಲ್ಲ ಕಾಣಿರೊಶರಣಲಿಂಗಕ್ಕೆ ಸೋಂಕುವತ್ವಕ್ಕುವಂದಲ್ಲದೇಯುರಡಿಲ್ಲಕಾಣಿರೊ । ಶರಣಲಿಂಗಕ್ಕೆ ನೆನವವುನವು ವಂದಲ್ಲದೆ ಯುರಡಿಲ್ಲಕಾಣಿರೊ । ನಮ್ಮ ಅಖಂಡೇಶ್ವರನೋಡಿಬೆರದಶರಣ ।ಲಿಂಗಕ್ಕೆ ಅಂಗಮನಪ್ರಾಣಗಳೊಂದಲ್ಲದೆ । ಯುರಡಿಲ್ಲಕಾಣಿರೋ॥ ॥೨೪॥

ಅರಿದಲ್ಲಿಶರಣ । ಮರೆದಲ್ಲಿಶರಣ । ಮಾನವನೆಂದುನುಡಿವಅಜ್ಞಾನಿಗಳಮಾತುಕೇಳಲಾಗದು । ಅದೇನುಕಾರಣವೆಂದರೆ । ಜಗದಗಲಗುರಿಯುಹೂಡಿ । ಮುಗಿಲಗಲಬಾಣವನೆಸದರೆ ತಪ್ಪಿ ಕಡಿಗಿಬೀಳುವಸ್ಥಾನವುಂಟೇ ಇದುಕಾರಣ ಅಖಂಡೇಶ್ವರ ಶರಣನಲ್ಲಿ ತೊರುವಕೋರಿಕೆಯುಲ್ಲವು ಲಿಂಗತಾನೇಅಖಂಡೇಶ್ವರಾ ॥ ॥ ೨೬ ॥

ಅನಂತಕೋಟಿ ಬ್ರಹ್ಮಾಂಡಂಗಳನೊಳಕೊಂಡುಮಹಾಘನಲಿಂಗದಲ್ಲಿ । ತಂನಂಗಮನ ಪ್ರಾಣೇಂದ್ರಿಯುವಿಷಯ ಕರಣಂಗಳಹೂಳಿ । ತಾನಿಲ್ಲದೆನಡೆವುತ್ತಾ ನಾನಿಲ್ಲದೆನುಡಿವುತ್ತಾ । ತಾನಿಲ್ಲದೆಹಿದಿವುತ್ತಾ । ತಾನಿಲ್ಲದೆಬಿಡುವುತ್ತಾ । ತಾನಿಲ್ಲದನೋಡುತ್ತಾ । ತಾನಿಲ್ಲದೆಆಡುತ್ತಾಬಯಲ ಭೊಂಬೆಯುಂತೆ ಸುಳಿವಮಹಾಶರಣರತೋರಿ ಬದುಕಿಸಯ್ಯಾ ಯುನ್ನ ಅ॥ ॥೨೬॥

ಯುಂನತನುವಿನೊಳಗೆ ತನುವಾಗಿರ್ದಿರಯ್ಯಾನೀವು । ಯುಂನಮನದೊಳಗೆ ಮನರೂಪಾಗಿರ್ದಿರಯ್ಯಾನಿವು । ಯುಂನ ಪ್ರಾಣದೊಳೂ ಪ್ರಾಣರೂಪಾಗಿರ್ದಿರಯ್ಯಾನೀವು । ಯುಂನಭಾವದೊಳಗೆ ಭಾವರೂಪಾಗಿರ್ದಿರಯ್ಯಾನೀವು । ಇಂತುಯುನ್ನೊಳಗೆನೀವು ಈಪರಿಯುಲಿರ್ದಿರಾಗಿ ನಾನಿಂಮೊಳಗೆ ಚಿನ್ನಭಿನ್ನ ಣದಂತೆ । ರತ್ನದೀಪ್ತಿಯುಂತೆ । ಜ್ಯೋತಿಯುಪ್ರಭೆಯುಂತಿರ್ಪೆನಯ್ಯಾ ಅಖಂಡೇಶ್ವರಾ ॥ ॥ ೨೭ ॥

ಅಂಗಕ್ಕೆ ಇಷ್ಟಲಿಂಗದ ಸತ್ಕ್ರಿಯ್ಯವನಳವಡಿಸಿಕೊಂಡು । ಪ್ರಾಣಕ್ಕೆ ಪ್ರಾಣಲಿಂಗವಸಮ್ಯಜ್ಞಾವಸದಾಚಾರವಸಂವಂಧಿಸಿಕೊಂಡು । ಅಂಗಲಿಂಗ। ಭಿನ್ನಭಾವವಳಿದು । ವಳಹೊರಗೆಲ್ಲಾ ಅಖಂಡಜ್ಞಾನಮಯುವಾ ಶರಣಂಗೆ । ವಾರ । ತಿಥಿ । ಲಗ್ನಂಗಳಿಲ್ಲಾ । ಶುಭಾಶುಭಂಗಳಿಲ್ಲಾ । ಸ್ತುತಿನಿಂದಾಪೂಜ್ಯಾಪೂಜ್ಯಗಳಿಲ್ಲ । ಅಖಂಡೇಶ್ವರನಿಮ್ಮ ಶರಣಯುಂತಿರ್ದಂತೆ ಸಹಜಬ್ರಹ್ಮವಾಗಿರ್ಪನು ॥ ॥ ೨೮ ॥

ಘನಮಹಾಲಿಂಗಕ್ಕೆ ಮನವೇಪಿಠವಾಗಿ । ತನುವೇಶಿವಾಲಯುವಾಗಿ । ನೆನಹೇಪೂಜೆಯಾಗಿ । ಧ್ಯಾನವೇತೃಪ್ತಿಯಾಗಿ । ಅಂಬುಧಿಯೊಳು ಮುಳುಗಿದ ಪೂರ್ಣಕುಂಭದಂತೆ । ನಿಮ್ಮ ಅವಿರಳವಿದ್ಯಾ ಮಹಾಬೆಳಗಿನೊಳಗೆ ಮು

ಳುಗಿ । ನಾನುನೀನೆ ಭವಭಯದಕುರುಹುಮರದು ॥ ಯೇನೇನುಅರಿಯದಿರ್ದೆನಯ್ಯಾ ಅಖಂಡೇಶ್ವರಾ ॥ ॥ ೭೯ ॥

ಶಿವಶಿವಾಯೇನೆಂಬೆಯೇನೆಂಬೆನಯ್ಯಾ।ಶರಣರಘನವನು । ಶರಣರಮಹಿಮೆಯನು । ಶರಣರಚರಿತ್ರೆಯನು । ಶಿವನೇಬಲ್ಲನಲ್ಲದೆ ಮಳದಮನುಷ್ಯರು ಅದೆಂತಿಳಿವರಯ್ಯಾ । ಹೊರಗಿನಕ್ರಿಯ್ಯೆವು। ಅನಂತಪ್ರಕಾರವಾದರೂ ಒಳಗೆರಕಕೂರದಂತೆ । ಕ್ಷೀರಕ್ಷೀರಬೆರದಂತೆ । ಮಾರುತಾಂಬರಸಂಯೋಗದಂತೆ। ಶಿಖಿಕರ್ಪೂರದನಿಷ್ಪತ್ತಿಯಾದಂತೆ। ಸಚ್ಚಿದಾನಂದಪರಬ್ರಹ್ಮಕೂಡಿ।ಬೆಚ್ಚಬೆಂಗಾಂತಿರ್ಪಭವರಹಿತಶರಣರು।ಅಮಲಜ್ಞಾನಸ್ವರೂಪರುಅವರೇಜೀವನ್ಮುಕ್ತರು । ಅವರೇಮಹಾಂತವನುಂಗಿದ ಮಹಾಂತರುನೋಡಾ ಅಖಂಡೇಶ್ವರಾ ॥ ॥ ೮೦ ॥

—*( ಐಕ್ಯಸ್ಥಲವು. )*—

ಕ್ಷುತ್‌ಪಿಪಾಸ । ಶೋಕ, ಮೋಹ, ಜನನ, ಮರಣಗಳೆಂಬಷಡೂರ್ಮಿಗಳಹುಡಿಮಾಡಿಸುಟ್ಟುರುಹಿ । ಕಾಮ, ಕ್ರೋಧ, ಲೋಭ, ಮೋಹ ಮದ, ಮತ್ಸರ, ವೆಂಬಅರಿಷಡ್ವರ್ಗಂಗಳಬೇರುಕಿತ್ತಿಬಿಸಾಟಿ।ಇಷ್ಟಲಿಂಗಕ್ಕೆ ನಿಷ್ಟೆಯಿಂದೆ ಜಲಗಂಧಾಕ್ಷತೆ । ಪುಷ್ಪಧೂಪದೀಪನೈವೇದ್ಯತಾಂಬೂಲವೆಂಬ ಅಷ್ಟವಿಧಾರ್ಚನೆಯಂಮಾಡಿ । ಅಲ್ಲವೆ ಮತ್ತಾಲಿಂಗವನ್ನು ಧ್ಯಾನಮುಖದಿಂದ ಅಂತರಂಗಕ್ಕೆ ವಿಜಯಂಗೈದು । ಹೃದಯ ಕಮಲ ಕರ್ಣಿಕಾಸ್ಥಾನದಲ್ಲಿ ಕುಳ್ಳಿರಿಸಿ । ಪ್ರಾಣಾಯಾಮಾ ನಿರ್ಗುಣದಷ್ಟವಿಧಾರ್ಚನೆಯಂಮಾಡಿ । ಚಿತ್ತಸ್ವಸ್ಥನಾಗಿ ಭಾವವುಬಯಲಬ್ರಹ್ಮದಲ್ಲಿಹೂಳಿ ಹೋಗಿತಾನಿದಿರೆಂಬುದನಳಿದು । ಉರಿಗೊಂಡುಕರ್ಪೂರದಂತೆ ಅವಿರಳ ಸಮರಸವಾಗಿಪಾರ್ತನೇ ನಿಜಲಿಂಗೈಕ್ಯನುನೋಡಾ । ಅದೆಂತೆಂದಡೆ ॥ ಶ್ಲೋ ॥ ಷಡೂರ್ಮಿಚತುಷ್ಷಡ್ವರ್ಗಂ । ನಾಸ್ತಿಚಾಷ್ಟವಿಧಾರ್ಚನಂ ॥ ನಿರ್ಭಾವೋನಿಜಲಿಂಗೈಕ್ಯ । ಶಿಖಿಕರ್ಪೂರಯೋಗವತ್ ॥೧॥ ಎಂದುದಾಗಿ ಇಂತಪ್ಪಲಿಂಗೈಕ್ಯರಮಹಾಘನನಿಜದನಿಲುವಿಂಗೆನಮೋನಮೋಯೆಂಬೆನಯ್ಯಾ ಅಖಂಡೇಶ್ವರ

ವೇದಶಾಸ್ತ್ರಗಳ ಆಗಮಪುರಾಣಗಳ ನಾದಿಆದಿಯ ಪಥವಸಾಧಿಸಬೇಕೆಂಬಭೇದ। ಶುದ್ಧಭ್ರಾಂತಿಜ್ಞಾನಯಿಲ್ಲನೋಡಾಲಿಂಗೈಕ್ಯನು । ಷಡುರಸ್ಥಾನಗಳ ಸಾಧಿಸಿಘಟವಹೊರವಲ್ಲನೋಡಾ ಲಿಂಗೈಕ್ಯನು । ಕಾರುಮನದ ಕಳವಳವನಡಿಸಿ ಲೋಕದರಂಜನೆಯ ನುಡಿಸಾಧಿಸಿ । ಕುರುಹಿಲ್ಲದಬ್ರಹ್ಮದಲ್ಲಿ ತೆರೆಹಿಲ್ಲದಿರ್ಪನೋಡಾ । ಅಖಂಡೇಶ್ವರಾನಿಮ್ಮನಿಜಲಿಂಗೈಕ್ಯನೂ ಸುಗುಣನಿರ್ಗುಣನಲ್ಲನೋಡಾಲಿಂಗೈಕ್ಯನು । ಸಾಕಾರನಲ್ಲನಿರಾಕಾರನಲ್ಲ

ನೋಡಾಲಿಂಗೈಕ್ಯನು । ಶೂನ್ಯನಲ್ಲನಿಶ್ಶೂನ್ಯನಲ್ಲ ಲಿಂಗೈಕ್ಯನುನೋಡಾ
ಜ್ಞಾನಿಯಲ್ಲಅಜ್ಞಾನಿಯಲ್ಲನೋಡಾಲಿಂಗೈಕ್ಯನು । ಕಾಮಿಯಲ್ಲನಿಷ್ಕಾಮಿಯ
ಲ್ಲನೋಡಾಲಿಂಗೈಕ್ಯನು । ದ್ವೈತನಲ್ಲಅದ್ವೈತನಲ್ಲನೋಡಾಲಿಂಗೈಕ್ಯನು ।
ಇಂತೀತೆರೆದಲ್ಲಿತೋರುವತೋರಿಕೆಯಲ್ಲವು ತಾನೇಯಾಗಿ ಇಹಪರದಗತಿಗೆ।
ಡಿಸಿ ಪರಿಪೂರ್ಣಬ್ರಹ್ಮವಾಗಿ ತನ್ನ ಕುರುಹಡಗಿಸಿ ।ನಿರ್ವಯಲಾಗಿರ್ಪನಿ
ಜಲಿಂಗೈಕ್ಯನ ಏನೆಂದುಪಸಮಿಸಬಹುದಯ್ಯಾ ಅಖಂಡೇಶ್ವರಾ ||೩||

ಸಾವಯನಿರವಯನಲ್ಲನೋಡಾ ಲಿಂಗೈಕ್ಯನು । ಗಮನಿಯಲ್ಲ ನಿರ್ಗ
ಮನಿಯಲ್ಲನೋಡಾ ಲಿಂಗೈಕ್ಯನು । ಸುಮನಸಾರಾಯ ಸುಜ್ಞಾನಭರಿತನು
ನೋಡಾ ಲಿಂಗೈಕ್ಯನು। ಅಮಲಬ್ರಹ್ಮದಕೂಟಾಚಲಿತಭೇದ್ಯನುನೋಡಾ
ಲಿಂಗೈಕ್ಯನು ಅಖಂಡೇಶ್ವರಾ || ||೪||

ಸರ್ವಾಚಾರಸಂಪತ್ತನಲ್ಲದೆ। ನಿಜಬಯಲಪದವುಕಾಣಬಾರದುನೋ
ಡಾ ಆ ಶಿರಿಯು ಸರ್ವಾಚಾರಸಂಪತ್ತುಕಾಣಬಾರದುನೋಡಾ । ಆಶಿರಿಯು
ಸರ್ವಾಚಾರಸಂಪತ್ತುಯಂತೆನಲು । ಷಡ್ಭೂತಂಗಳಲ್ಲಿ ಷಡ್ವಿಧಮಂತ್ರಂ
ಗಳನೆಲೆಗೊಳಿಸಿ। ಆ ಷಡ್ವಿಧಮಂತ್ರಂಗಳನ ಷಡ್ವಿಧಚಕ್ರಂಗಳೆಂದು ತಿಳಿ
ದು । ಆಷಡ್ವಿಧಚಕ್ರಂಗಳಿಗೆಷಡ್ವಿದದೇವತೆಗಳನ್ನು।ಷಡ್ವಿದಅಂಗವೆಂದಾ
ರಗೊಳಿಸಿ ।ಆ ಷಡ್ವಿಧಅಂಗಕ್ಕೆ ಷಡ್ವಿಧಕರಣಂಗಳನೆ ಷಡ್ವಿಧಹಸ್ತಂಗಳೆಂ
ದು ಪರಿದಳವಡಿಸಿಕೊಂಡು ।ಆಷಡ್ವಿಧಹಸ್ತಂಗಳಿಗೆ ಷಡ್ವಿಧಲಿಂಗಗಳಳವ
ಡಿಸಿಕೊಂಡು । ಆ ಷಡ್ವಿದಲಿಂಗಕ್ಕೆ ಷಡ್ವಿಧಇಂದ್ರಿಯಗಳನೆಷಡ್ವಿಧಮು
ಖಂಗಳೆಂದು ಸಮ್ಮಂಧಿಸಿ । ಷಡ್ವಿಧಮುಖಂಗಳಿಗೆ ವಳಹೊರಗೆಲ್ಲಾ ಷಡ್ವಿ
ಧಲಿಂಗಬೆಳಗು ತುಂಬಿತೊಳಗಿಬೆಳಗುವ ಷಡ್ವಿಧವಿಷಯಂಗಳನೆ ಷಡ್ವಿಧಪ
ದಾರ್ಥಂಗಳೆಂದರಿದು ಷಡ್ವಿದಪದಾರ್ಥಂಗಳನ್ನು ಷಡ್ವಿಧಭಕ್ತಿಯಿಂದ ಷ
ಡ್ವಿಧಮುಖಂಗಳಿಗೆ ಸಮರ್ಪಿಸಿ । ವಳಹೊರಗೆಲ್ಲಾ ಷಡ್ವಿಧಲಿಂಗದಬೆಳಗು
ತುಂಬಿತೊಳಗಿಬೆಳಗುತಿರ್ಪ್ಪದುನೋಡಾ । ಯಡೆದೆರಹಿಲ್ಲದೆ ಷಡ್ವಿಧಲಿಂಗದ
ಬೆಳಗಿನೊಳಗೆ ತನ್ನ ಷಡ್ವಿಧಲಿಂಗದಕಳೆಗಲ್ಲವನಡಗಿಸಿ । ತಾನೆಂಬಕುರು
ಹುತೋರದಿರ್ಪುದೇ ಸರ್ವಾಚಾರಸಂಪತ್ತುನೋಡಾ । ಇಂತಪ್ಪಸರ್ವಾ
ಚಾರಸಂಪತ್ತು ನಿಮ್ಮಪೂರ್ಣವಲುಮೆಯ ಶರಣರಿಗಲ್ಲದೆ ಉಳಿದವರಿಗಳವ
ಡದಯ್ಯಾ ಅಖಂಡೇಶ್ವರಾ|| || ೫ ||

ಸರ್ವಾಹಂಕಾರವಳಿದು । ಸರ್ವಕರಣಂಗಳುತರಹರವಾಗಿಸರ್ವಾಂ
ಗದಲ್ಲಿ ಸರ್ವಾಚಾರನೆಲೆಗೊಂಡ ಲಿಂಗೈಕ್ಯಂಗೆ ಅಖಂಡಪರಿಪೂರ್ಣ ಮಹಾ
ಘನಲಿಂಗವೇ ಭಾಜನವಾಗಿ ಮಹಾಘನಲಿಂಗಕ್ಕೆ ನಿಜಲಿಂಗೈಕ್ಯನೇ ಅಭಾ

ಜನವಾಗಿ । ಅಂಗಲಿಂಗವೆಂಬ ಉಭಯಭಾವವಳಿದು॥ಕ್ಷೀರಕ್ಷೀರಬೆರದಂತೆ ಅವಿರಳಸಮರಸವಾಗಿರ್ಪಲಿಂಗಕ್ಕೆ ಏಕಭಾಜನವಲ್ಲದೆ ಉಳಿದವರಿಗೆಲ್ಲಿಯು ದಯ್ಯಾ || ೮ || || ೬ ||

ಅಂಗದಅವಗುಣಾವಳಿಯಡದೆ। ಪ್ರಾಣದಪ್ರಪಂಚುಹಿಂಗದೆ।ಭಾವಭ್ರಮೆಯುಹಿಂಗದೆ । ಮನದಮಾಯಾವಡಗದೆ । ಆತ್ಮನಅಹಂ ಮಮನೆಕೆಡದೆ ಲಿಂಗಕ್ಕೆ ತಮಗೆ ಏಕಭಾಜನವೆಂದು ನುಡಿವ ಕಾಕುಮಾನವರನೇನೆಂಬೆನಯ್ಯಾ ಅಖಂಡೇಶ್ವರಾ || ||೭||

ಮನವೆಂಬವರಳಿಗೆ । ಸಕಲಕರಣಂಗಳೆಂ ಬತುಂಡುಂಲವಹಾಕಿ । ಜ್ಞಾನವೆಂಬವನಿಕೆಯುಪಿಡಿದು । ಪರಮಪರಿಣಾಮದೊಳ ಗೋಲ್ಯಾಡುತ್ತಾ ಕುಟ್ಟಿ । ಅಜ್ಞಾನವೆಂಬತವುಡಕೇರಿ । ಚಿತ್ತರಣಂಗಳೆಂಬಅಕ್ಕಿಯತೆಗದುಕೊಂಡು। ಸದ್ಭಾವವೆಂಬ ಭಾಂಡದಲ್ಲಿತುಂಬಿ । ಪರಮಾನಂದಬಲವೆಂಬ ಯುಸರನಿಟ್ಟು । ತ್ರಿಪುಟಿಯೆಂಬ ವಲೆಯುಹೂಡಿ । ಭೇದಾಗ್ನಿಯಿಂಬಬೆಂಕಿಯುಪುಟವನಿಕ್ಕಿ । ಅರಿಷಡ್ವರ್ಗಂಗಳೆಂಬ ಸೌದೆಯುಹಚ್ಚಿ ।ಮಹಾಜ್ಞಾನವೇಂಬಪಾಕವಮಾಡಿ । ಪರಿಪೂರ್ಣವೆಂಬ ಪರಿವಾಣದಲ್ಲಿ ಘಡಣಿಕೊಂಡು । ಅಖಂಡ ಪರಿಪೂರ್ಣಮಹಾಘನಲಿಂಗಕ್ಕೆ ಸಲಿಸಬಲ್ಲಾತನೇಶರಣನು? ।ಆತನುನಿಜಾನುಭಾವಿ ॥ ಆತನುನಿಜಲಿಂಗೈಕ್ಯನು ॥ ಇಂತೀ ಭೇದವನರಿಯದೆ ಮಣ್ಣಿನ ಪರಿಯಾಣದಲ್ಲಿ ॥ ಲೋಹಪಾತ್ರೆಯಲ್ಲಿ ॥ ಮನಬಂದಪರಿಯಲ್ಲಿ ಹೊಯಿಹೊಯಿದುವಟ್ಟಿಸಿಕೊಂಡು । ಬಾಯಿಗೆಬಂದಂತೆತಿಂಬಭವಭಾರೀಕರಿಗೆ ಏಕಭಾಜನದಲ್ಲಿಹದಯ್ಯಾ ||೮||

ಬಾರಯ್ಯ ಬಾರಯ್ಯಗಂಡನೇ । ಯನ್ನಘ್ರಾಣವೆಂಬ ಭಾಜನದಲ್ಲಿ ಸುಗಂಧಪದಾರ್ಥವೆಂಬ ಸುಯಿಧಾನವಗಢಣಿಸಿವುಣಲಿಕ್ಕುವೆ । ಬಾರಯ್ಯ ಬಾರಯ್ಯಗಂಡನೇ । ಯನ್ನ ಜಿಹ್ವೆಯೆಂಬಭಾಜನದಲ್ಲಿ । ನಿಮಗೆಸುರುಚಿಪದಾರ್ಥವೆಂಬ ಸುಯಿಧಾನವಗಢಣಿಸಿ ಉಣಲಿಕ್ಕುವೆ । ಬಾರಯ್ಯಬಾರಯ್ಯಗಂಡನೇಯನ್ನ ನೇತ್ರವೆಂಬ ಭಾಜನದಲ್ಲಿ ಸುರೂಪುಪದಾರ್ಥವೆಂಬಸುಯಿದಾನವಗಡಣಿಸಿಉಣಲಿಕ್ಕುವೆ । ಬಾರಯ್ಯಬಾರಯ್ಯಗಂಡನೇ || ಯನ್ನ ತ್ವಕ್ಕುಯೆಂಬ ಭಾಜನದಲ್ಲಿ ಸುಸ್ಪರ್ಶನವೆಂಬ ಪದಾರ್ಥ ಸುಯಿಧಾನವಗಡಣಿಸಿ ಉಣಲಿಕ್ಕುವೆ || ಬಾರಯ್ಯ ಬಾರಯ್ಯ ಗಂಡನೇ ಯನ್ನ ಶ್ರೋತ್ರವೆಂಬ ಭಾಜನದಲ್ಲಿ ಸುಶಬ್ದವೆಂಬಪದಾರ್ಥವ ಸುಯಿಧಾನವಗಡಣಿಸಿನಿಮಗೆ ಉಣಲಿಕ್ಕುವೆನಯ್ಯಾ । ಬಾರಯ್ಯಬಾರಯ್ಯಗಂಡನೇ ಯನ್ನ ಮನವೆಂಬಭಾಜನದಲ್ಲಿ ನೆನಹೆಂಬ ಸುಯಿಧಾನವಗಡಣಿ ಉಣಲಿಕ್ಕುವೆನಯ್ಯ ನಿ

ಮಗೆ ಅಖಂಡೇಶ್ವರಾ ||

ಕೇಳಿಕೇಳಿರವ್ವಾ ನಮ್ಮ ಮನೆತನದವ್ರೊಂದು ಬೆಡಗು ಬಿನ್ನಾಣವ | ಯಂನಕಟ್ಟಿದ ಮುತ್ತಿಯ ಸಡಲಿಸಿದ | ಯನ್ನ ವ್ರುಟ್ಟುದು ಕಳೆದುಕೊಂಡ | ಯನ್ನ ತೊಟ್ಟದು ಬಿಡಿಸಿದ | ಯನ್ನ ಲಜ್ಜೆ ನಾಚಿಕೆಯ ತೊರಿಸಿದಾ | ಯನ್ನ ಮೌನದಲ್ಲಿರಿಸಿದಾ | ಯನ್ನ ಕರವಿಡಿದುಕೊಂಡು ತಾನುಂಬ ಪರಿಯಾಣದಲ್ಲಿ ಯನ್ನ ಕೂಡಿಕೊಂಡುವುಂಡನು ಕೇಳಿರವ್ವಾ ನಮ್ಮ || ಅ || ||೧೦||

ಲಿಂಗದೊಡನೆ ಸಹಭೋಜನವ ಮಾಡುವ | ಲಿಂಗವಂತರೆಲ್ಲಾ ಕೇಳಿರೋ | ನಿಮ್ಮ ತನುವು ಸಂಸಾರವಿಷಯ ಪ್ರಪಂಚದಲ್ಲಿ ಮುಳಗಿರುವದು | ನಿಮ್ಮ ಮನವು ಮಲತ್ರಯಗಳಲ್ಲಿ ಸತ್ತುತಿರ್ಪುದು | ನಿಮ್ಮ ಮನವು ಭವಭವದಲ್ಲಿ ತೊಳಲುತಿರ್ಪದು | ನೀವಿಂತು ಮಲಮಯಸ್ವರೂಪವಾಗಿರ್ದು ಭಯವಿಲ್ಲದೆ ಅಮಲಲಿಂಗದೊಡನೆ ಸಹಭೋಜನವ ಮಾಡಿದರೆ | ಅಘೋರನರಕದಲ್ಲಿಕ್ಕದೆ ಮಾಣ್ಬನೇ ನಮ್ಮ || ಅ || ||೧೧||

ಪ್ರಾಣವೇ ಹಸಿವೆಂದು ದೆಹವ ನಂಡಲಿವಾಗ | ಬಾಯ ಸವಿಯ ನುಂಬುವರಲ್ಲದೇ, ಲಿಂಗದೇವನನೆನಹು ಯಲ್ಲಿಹುದೋ | ಲಿಂಗದೇವನ ಮರದು ಅಂಗಕ್ಕೆ ಕೊಟ್ಟರೆ ಅದೇ ಯೆಂಜಲವು ನೋಡಾ | ಅಂತಹ ಯೆಂಜಲ ಲೋಗರವ ಮರಳಿ ಲಿಂಗಕ್ಕೆ ನೋಡಲಾಗದು ನೋಡಾ | ಅದೇನು ಕಾರಣವೆಂದಡೆ,— ಕಂಡವರ ಕಂಡು ತಾನುಂಡ ಯೆಂಜಲವ ಮರಳಿ ಮರಳಿ ಭೋಜಿಯ ಕಟ್ಟಿ ಲಿಂಗಕ್ಕೆ ತೋರಿದರೆ | ಹುಳುಗೊಂಡದಲ್ಲಿಕ್ಕುವನು ನೋಡಾ ನಂಮ ಅಖಂಡೇಶ್ವರಾ || ||೧೨||

ಕಾಯದಳಕಳವಳದಲ್ಲಿ ಕಂಗೆಟ್ಟು | ಜೀವನ ಹಾದಿಯಲ್ಲಿ ಸುಳಿದು | ಪಂಚೇಂದ್ರಿಯಗಳಿಂ ಸಲಿಸಿ | ಅರಿಷಡ್ವರ್ಗಂಗಳಿಂದ ಹರಿದಾಡುವ ಅಷ್ಟಮದಂಗಲ್ಲಿ ಕಟ್ಟುವಡೆದು | ಇಂತೀ ಅಂಗ ಪ್ರಕೃತೀ ಅಜ್ಞಾನದಲ್ಲಿ ಮುಗ್ಧವಾಗಿರ್ದು ಮಹಾಘನಲಿಂಗದೊಡನೆ ಸಹಭೋಜನ ಮಾಡುವ ಮರಹಿನ ಮಾನವರೆಲ್ಲರು ಕಲ್ಪಕಲ್ಪಾಂತರ ನರಕಸಮುದ್ರದಲ್ಲಿ ಮುಳಿಗಾಡುತಿರ್ಪರಯ್ಯಾ ಅಖಂಡೇಶ್ವರಾ || ||೧೩||

ಕಾಯದ ಕಳವಳದಲ್ಲಿ ಕಂಗೆಟ್ಟು ಸಂಸಾರದೊಳಗಿರ್ದು | ಸದ್ಭಕ್ತನು ಲಿಂಗದೊಡನೆ ಸಹಭೋಜನವ ಮಾಡಬೇಕಾದರೆ | ಜಂಗಮದ ಪ್ರಸಾದವ ಕೈಕೊಂಡು ತನ್ನ ಲಿಂಗಕ್ಕೆ ಅರ್ಪಿಸಿ | ಲಿಂಗದೊಡನೆ ಸಹಭೋಜನವ ಮಾಡಬೇಕಲ್ಲದೆ | ಜಂಗಮದ ಪ್ರಸಾದವಿಲ್ಲದೆ ಲಿಂಗದೊಡನೆ ಸಹಭೋಜನವ ಮಾಡಲಾಗದು ಅದೇನು ಕಾರಣವೆಂದಡೆ || ಅಜಂಗಮದ ಪ್ರಸಾದ ಲಿಂಗಕ್ಕೆ ಸ

ರಮುಪೇಕಜೀವಾಳವಾದಕಾರಣ । ಅಂತಪ್ಪಜಂಗಮದಲ್ಲಿರೂಪುಕುರೂಪು ಕುಲಛಲವನೋಡಲಾಗದಯ್ಯಾ । ಆಜಂಗಮದಲ್ಲಿಹಾವಿದ್ಯಾಶಾಸ್ತ್ರಬುದ್ಧಿವರ್ಧನೆ । ಜ್ಞಾನಾಚಾರಮೂತಿನಜಾಣ್ಮೆಯಹುಡುಕಲಾಗದು । ಆಜಂಗಮದ ವೃಚುನೀಚವನರಸಲಾಗದು । ಆಜಂಗಮದಲ್ಲಿ ಹಾಸ್ಯರಹಸ್ಯವುದ್ವೇಷವು ದಾಸೀನಂಗಳಮಾಡಲಾಗದು । ಆಜಂಗಮದಲ್ಲಿಪಜ್ತಿಭೇದವಾಕಭೇದವಮಾಡಲಾಗದು । ಆಜಂಗಮದಲ್ಲಿ ಮದಮತ್ಸರಂಗಳಿಂದ ಹಗೆತನವಸಾಧಿಸಲಾಗದು। ಆಜಂಗಮದಮೇ ಮಿಥ್ಯಕಲಾಪದಿಂದೆ ಇಲ್ಲದಅಪರಾಧವಕಲ್ಪಿಸಲಾಗದು । ಆಜಂಗಮಕ್ಕೆ ಕೋಪಾಹೋಪವುದ್ರೇಕದಿಂದನಿಷ್ಠ್ಯಾರವಾಕ್ಯವ ನುಡಿಯಲಾಗದು ।ಆ ಜಂಗಮವು ಹಾದಿಬೀದಿಬಾಜಾರಂಗವಳಲ್ಲಿ ತಮ್ಮಗರ್ವದಿಂದೆ ಬೀಗಿಬೆರದುಕೊಂಡು ಹೋಗಲಾಗದು । ಆ ಜಂಗಮದಸನ್ನಿದಿಯಲ್ಲಿ ಆನೆ ಕುದರೆ ಅಂದಳಪಲ್ಲಕ್ಕಿಯನೇರಲಾಗದು । ಅ ಜಂಗಮವುಬರುವಾಗ ಇದಿರಲ್ಲಿ ತೂಗುದೊಟ್ಟಿಲದಲ್ಲಿ ಚಪ್ಪರಮಂಚದಲ್ಲಿ ಗಗನುಪ್ಪರಿಗೆ ವುನ್ನತಚೌಕಿಯುಲ್ಲಿಕುಳ್ಳಿರಲಾಗದು। ಆ ಜಂಗಮವು ತನ್ನ ಕರುಣದಿಂದೆ ಲಿಂಗಾರ್ಪಿತಕ್ಕೆ ಜಯುನಿಟ್ಟು ಮನಿಗೆಬಂದಲ್ಲಿಕಂಡು ಅಡ್ಡವೋರೆಯನಿಕ್ಕಲಾಗದು । ಇಂತೀಭೇದಗುಣಂಗಳ ಜಂಗಮದಲ್ಲಿ ಮಾಡುವ ತಾಮಸಭಕ್ತಂಗೆ ಗುರುವಿಲ್ಲಯೆಂದಿಗೂಯಿಲ್ಲ । ಇಂತಪ್ಪ ಅಜ್ಞಾನಿತಾಮಸಭಕ್ತನು ಲಿಂಗದೊಡನೆ ಸಹಭೋಜನವಮಾಡಿದರೆ ಶುನಿಸೂಕರ ಕುಕ್ಕುಟಗಳ ಬಸುರಲ್ಲಿಬಂದು ಚಂದ್ರಸೂರ್ಯರುಳ್ಳನಕಾ ಹೊಲೆಯರಬಾಗಿಲಲ್ಲ ಕಾಯಿದುಕೊಂತಿರ್ಪನುನೋಡಾ ಅಖಂಡೇಶ್ವರಾ॥ ॥ ೧೪ ॥

ನಡವಕಾಲದಲ್ಲಿ ನಿಮ್ಮಕೂಡೆನಡವೆನಯ್ಯಾ । ನುಡಿವಕಾಲದಲ್ಲಿನಿಮ್ಮ ಕೂಡ ನುಡಿವೆನಯ್ಯಾ । ಹಿಡಿವಕಾಲದಲ್ಲಿ ನಿಮ್ಮಕೂಡ ಹಿಡಿವೆನಯ್ಯಾ । ಬಿಡುವಕಾಲದಲ್ಲಿ ನಿಮ್ಮಕೂಡ ಬಿಡುವೆನಯ್ಯಾ । ನೋಡುವಕಾಲದಲ್ಲಿನಿಮ್ಮ ಕೂಡೆನೋಡುವೆನಯ್ಯಾ । ಕೇಳುವಕಾಲದಲ್ಲಿ ನಿಮ್ಮಕೂಡೆ ಕೇಳುವೆಕೇಳಯ್ಯಾ । ಸೋಂಕುವಕಾಲದಲ್ಲಿ ನಿಮ್ಮಕೂಡೆ ಸೋಂಕುವೆನಯ್ಯಾ । ವಾಸಿಸುವಕಾಲದಲ್ಲಿ ನಿಮ್ಮಕೂಡೆ ವಾಸಿಸುವೆನಯ್ಯಾ । ರುಚಿಸುವಕಾಲದಲ್ಲಿ ನಿಮ್ಮಕೂಡೆ ರುಚಿಸುವೆನಯ್ಯಾ । ನೆನವಕಾಲದಲ್ಲಿ ನಿಮ್ಮಕೂಡೆ ನೆನೆವೆನಯ್ಯಾ ಮರವಕಾಲದಲ್ಲಿ ನಿಮ್ಮಕೂಡೆ ಮರವೆನಯ್ಯಾ । ಅರಿವಕಾಲದಲ್ಲಿ ನಿಮ್ಮಕೂಡೆ ಅರಿವೆನಯ್ಯಾ । ಇನಮಂಡಲದಕಿರಣದಂತೆ ಸಕಲತೋರಿಕೆಯು ತೋರುವಕಾಲದಲ್ಲಿ ನಿಮ್ಮಕೂಡತೋರುವೆನಾಗಿ ಅಖಂಡೇಶ್ವರಾ ನಿಮ್ಮಲ್ಲಿ ಎನಗೆ ಸಹಭೋಜನವು ಸಮನಿಸಿತ್ತುನೋಡಾ॥ ॥೧೫॥

ಎನಗೆನೀವೇ ಚಿದಾನಂದವಯ್ಯಾ। ನಿಮಗೆನಾನೇ ಚಿದ್ಭಾಂಡವಯ್ಯಾ। ಎನಗೆನೀವೇ ಚಿದ್ಭಾಜನವಯ್ಯಾ। ನಿಮಗೆನಾನೇ ಚಿದ್ಭಾಜನವಯ್ಯಾ। ಎನಗೆನೀವೇ ಸಕಲದ್ರವ್ಯಪದಾರ್ಥದ್ರವ್ಯವಯ್ಯಾ। ನಿಮಗೆನಾನೇ ಸಕಲಪದಾರ್ಥದ್ರವ್ಯವಯ್ಯಾ। ನಾನುನೀವುಪ್ಪೊಂದೆಹರಿವಾಣದಲ್ಲಿ ಸಹಭೋಜನವ ಮಾಡುತಿರ್ಪವಾಗಿ ಅಖಂಡೇಶ್ವರಾ ನಾನುನೀನೆಂಬುವ ಉಭಯದಶೀಲುಕಳಚಿತ್ತನೋಡಾ ॥ ॥ ೧೬ ॥

ಪರಮನಸ್ವಣೆಯಿಂದಧರಣಿಗೆಬಂದುಗುರುಲಿಂಗಜಂಗಮದಭಕ್ತಿಯನತಳವಡಿಸಿಕೊಂಡು । ಷಡುಸ್ಥಲಬ್ರಹ್ಮದನುವರಿದು ನೂರೊಂದುಸ್ಥಳಕುಲಂಗಳಕರತಳಾಮಲಕವಾಗಿ ತಿಳಿದು ನಿಜೈಕ್ಯಪದದಲ್ಲಿನಿರವಯಲಾದರು। ಬಸವಣ್ಣ ಮೊದಲಾದ ಸಂಖ್ಯಾತಮಹಾಗಣಂಗಳು । ಅದೆಂತೆಂದೊಡೆ,— ಸಂಗನ ಬಸವಣ್ಣನು ಕಪ್ಪಡಿಯಲ್ಲಿ ಸಂಗನೊಳಗೆ ಬಯಲಾದರೂ ಅಕ್ಕಮಹಾದೇವಿ ಅಲ್ಲಮಪ್ರಭುದೇವರು । ಶ್ರೀಶೈಲಕದಳಿಯ ಜ್ಯೋತಿರ್ಮಯಲಿಂಗದೊಳಗೆ ಬಯಲಾದರು । ಹಡಪದಪ್ಪಣ್ಣ ನೀಲಲೋಚನೆಯುಮೊದಲಾದ । ಕೆಲವುಗಣಂಗಳುತಮ್ಮತಮ್ಮಲಿಂಗದಲ್ಲಿ ಬಯಲಾದರು। ಚನ್ನಬಸವಣ್ಣ ಮಡಿವಾಳಮಾಚಿದೇವರು ಕಿನ್ನರಯ್ಯ ಬ್ರಹ್ಮಿತಂದೆಗಳು ಮೊದಲಾದವುಳಿದಗಣಂಗಳೆಲ್ಲರು । ಉಳಿವೆಮಹಾಮನೆಯಲ್ಲಿಹ ಘನಲಿಂಗದೊಳಗೆಬಯಲಾದರು। ಇಂತಪ್ಪ ಸಕಲಗಣಂಗಳಿಗೆ । ಮಮಸ್ವಾನದಲ್ಲಿ ನಿರ್ವಯಲಪದವಕರುಣಿಸಿಕೊಟ್ಟಾತ ನೀನೊಬ್ಬನೇಯಲ್ಲದೆ । ಮತ್ತಾರನು ಕಾಣೆನಯ್ಯಾ। ಇಂತಪ್ಪಸಕಲಗಣಂಗಳ ತೊತ್ತಿನಮಗನೆಂದು ಎನ್ನನು ಕೊಂಡು ಸಲಹಿದಿರಾಗಿ ಎನಗೆ ನಿರೈಕ್ಯನಿಜನಿರ್ವಯಲಪದವಿಯಲಿಯಂತೆ। ಉತ್ಪತ್ತಿಸ್ಥಿತಿಪ್ರಳಯಂಗಳಿಗೆ ಹೊರಗಾದ ನಿಮ್ಮಪರಾತ್ಪರಮಹಾದಯಕಮಲಕರ್ಣಿಕಾವಾಸಮಧ್ಯಸೂಕ್ಷ್ಮ ಬಯಲೊಳಗೆನ್ನ ನಿಸ್ಪಾಯ ಮಾಡಿಕೊಳ್ಳಯ್ಯಾ ಎನ್ನ ಅಖಂಡೇಶ್ವರಾ ॥ ॥೧೭॥

ಸಕಲಮೂರ್ತಿಯಾಗಿ ಇಷ್ಟಲಿಂಗವಾಯಿತು । ನಿಷ್ಕಳಮೂರ್ತಿಯಾಗಿ ಪ್ರಾಣಲಿಂಗವಾಯಿತು । ಕೇವಲನಿರ್ವಯಲಮೂರ್ತಿಯಾಗಿ ಭಾವಲಿಂಗವಾಯಿತು । ಸಕಲಮೂರ್ತಿಗೆ ಕ್ರಿಯಾ । ನಿಷ್ಕಲಮೂರ್ತಿಗೆಜ್ಞಾನ ಕೇವಲನಿರ್ವಯಲಮೂರ್ತಿಗೆ ವೈರಾಗ್ಯ । ಆನಂದಸ್ಥಲವೇ ಕಾಯ । ಸೂಕ್ಷ್ಮವೇ ಪ್ರಾಣ । ಕಾರಣವೇ ವಸ್ತು । ನೇತ್ರ । ಜಿಹ್ವೆ । ಶ್ರೋತ್ರ ತ್ವಕ್ಕು । ಹೃದಯ । ಘ್ರಾಣವೆಂಬ ಇವು ಸೂಕ್ಷ್ಮದ ಷಡ್ವಿಧಲಿಂಗವು। ಇಕ್ಕ ಓಂನಮಶಿವಾಯಎಂಬದೇತೃಪ್ತಿ ॥ ಸಂತೋಷವೇ ಕಾರಣ । ಮಹಾ

ಕಾರಣವೇ ಪರಿಣಾಮ | ತೂರ್ಯಾತೀತವಾಗಿ ಸರ್ವಕೇಳಿಕೆಯುಕೇಳಿನಿಜಾನಂದವಾಗಿಹುದು |ವಿರಾಟನಿಸುವನಾದವಾಗಿ ಹೊರಬಿದ್ದು ನುಡಿದುಭೇರೀನಾದದಂತೆ | ಅಕಾಶಧ್ವನಿಯಂತೆ | ತನಗೆತಾನೇಕೂಗುವದು ಹಿರಣ್ಯಾಗರ್ಭಬಿಂದುವಿನಮನೆಯಲ್ಲಿ ಗಾಳಿಯುಪಟಕ್ಕೆ | ಬೆರಬೆರಕೆಯುಕಟ್ಟಿನುಡಿಸುವಂತೆ| ತೇಜವಾಗಿಶಂಖಧ್ವನಿಯಂತೆ | ತೋರುತ್ತಿಹ ಸುನಾದಕ್ಕೆರಡಂಗುಲದಮೇಲೆತೇಜವಿಹುದು |ಅದುತುಂಬಿದಹುಣ್ಣಿಮೆಯುಬೆಳದಿಂಗಳದಂತೆ ಚಂದ್ರಜ್ಯೋತಿಯ ಬೆಳಕಿನಂತೆ ತೋರ್ಪುದು | ಕಳೆಯಾದಮನೆಯಿಂ ಲ್ಲಿಯೆರಡಂಗುಲಪ್ರಮಾಣ | ಮೂಲಪ್ರಕೃತಿಮೂಗಿನಮೇಲೆ | ಭ್ರೂಮಧ್ಯಪ್ರಮಾಣದಲ್ಲಿಓಂಕಾರವುಗಂಟೆಯುಬಾರಿಸಿದಂದೆ |ತಟತಟನೆಹಾರಿಭ್ರೂಮಧ್ಯಸ್ಥಾನದಲ್ಲಿ | ತೋರುವನಾದವೇಶಬ್ದ ನಿಶ್ಶಬ್ದವೇ ಬಂದುದಯನಾದದೊಳಗಿರ್ಪಸುನಾದವೇ | ಓಂಕಾರಜ್ಯೋತಿಬಿಂದುವಯುಪ್ರಕಾಶಭ್ರೂಮಧ್ಯದ ಪಣಿಯಮೇಲೆಯೆರಡಂಗುಲದಲ್ಲಿ ಕಾಣಿಸುತ್ತಿಹುದು | ಅದುಮನದಿಂದಕಂಡಿತೊ | ಕಂಣಿನಿಂದಕಂಡಿತೊ| ಎಂಪದೆನೆನಹುಅಂತಃಕರಣ |ಓಂನಮಶ್ಶಿವಾಯ) ಎಂಬಪ್ರಣವಜ್ಯೋತಿಯತೋರಿತು | ಚಿತ್ತದತೋರಿಕೆ ಅರವತ್ತಾರುಕೋಟಿಪ್ರಣವಜ್ಯೋತಿಯಕಿರಣದಲ್ಲಿತೋರಿಸಿಬೀಡಿಯುಬೀರಿಸಿ ವುಪಾಧಿಯ ನೆನಹುಮಾತ್ರತೋರುತ್ತಿಹುದೊ | ಹೊರದೃಷ್ಟಿವಳಗಿಟ್ಟುವಳದೃಷ್ಟಿಹೊರಗೆಪರಿಪೂರ್ಣವಾಗಲು | ಒಳಗೆ ಹೊರಗೆನೋಡುವಶಿವೆಶರಣನಮನಭಾವಕ್ಕೆಆನಂದವೇತೋರುತ್ತಿಹುದುದಿನಕರಕಾಂತಿಮಧ್ಯಾಹ್ನದಬಿಸಲು ಅಂಬರಂಗದಛಾಯದಂತೆ | ನಿರ್ಮಲದರ್ಪಣದಪ್ರತಿಬಿಂಬದಂತೆ ತೆಂನರೂಪತಾನೆನೋಡಿದಾತನು | ಜೀವನ್ಮುಕ್ತನಲ್ಲ || ಅಂತಾ ಭವದಬಳ್ಳಿಯುಹರಿದು| ನಿತ್ಯಾನಂದನಿರ್ಮಲನಿರಾವರಣನಿಜಚಿನ್ಮಯನಾಗಿಹನು ಇಂನು (ಓಂನಮಶ್ಶಿವಾಯಎಂಬ) ವೂರ್ಧ್ವಪ್ರಣವುವ ಅಳಿನೆತ್ತಿಯಸ್ಥಾನದಲ್ಲಿ ಅರುಹಿನಮನೆಯುಂಟು ಅದಕ್ಕೆತಟ್ಟಿ || ಅಂತರಂಗದಬಾಯಲ್ಲಿ ಯಡಬಲವು ಯೆರಡುಕರ್ನದ್ವಾರಂಗಳಲ್ಲಿ ನುಡಿಯುಕೇಳಿದರೆಸುನಾದವಾಇತ| ಅದುದಶನಾದಗಳಿಂದ ಶರಧಿ, ನಿಸ್ವರ, ಮೇಘ ಗರ್ಜನೆ, ಬೇರಿ, ಕಹಳೆ,ಗಂಟೆ, ಶಂಖವೇಣಿ, ಭ್ರಮರನಾದಂಗಳೆಂಬ ದಶನಾದಂಗಳಂನುಗುರುಮುಖದಿ ದರಿದ | ಆದಶನಾದಂಗಳೊಳಗಾದಸುನಾದವಂನು | ಇರಳುಹಗಲೆಯಡೆದೆರಹಿಲ್ಲದೆಲಾಲಿಸಿಕೇಳುವದು | ಶಿವಯೋಗಿಶ್ವರನುಅದುಪ್ರಸಾದಿಯಲಿಂಗಸ್ಥಲ ವಿಶುದ್ಧಿಯಮನೆಶರಣಸ್ಥಲ | ಆಸ್ಥಳದಲ್ಲಿನಾದವಕೇಳಿದವರಿಗೆಜಾಗ್ರತ್ಸ್ವಪ್ನಸುಷುಪ್ತಿಗಳೆನಿಪಮೂರುಅವಸ್ಥೆಗಳು | ತನುತ್ರಯಂಗಳು | ತೂರ್ಯ

ದಲ್ಲಿಹರಿದುಹೋಗುವವು ॥ ಸುನಾದದಲ್ಲಿಮನಸಿಟ್ಟು (ಓಂನಮಶ್ಶಿವಾಯ) ಎಂಬ ಮಂತ್ರವಕೇಳ । ಪರಿಣಮಿಸಿದವರಿಗೆಸ್ವಪ್ನವುಯೆಂದೆಂದಿಗೂತೊರದು । ಇರುವೆಸುಳಿದರೆಯಚ್ಚರಿಕೆ । ಧಿಗಿಲುಭಯಭೋಗಿತೆಂದರೆ। ನೀನಾರೆಲಾಯೆಂದುಮಾತನಾಡಿ ಬಿಡಿಸಿಬಿಡುವನು। ಆ ಪ್ರಣವಮದಘೋಷವುಸತ್ಯನೆಂಬೆ । ಇಂತೀದಿವಸಹಂನೆರಡುತಾಸಿನೊಳಗೆತನುವಬಿಡು ಸಮಯದಲ್ಲಿ ಅಘೋಷನಿರ್ಘೋಷವಾಗಿನಾದನುಡಿಯದ ।ಲಕ್ಷ್ಯವಿಟ್ಟುನೋಡಿದರೆತೋರದು। ಅಂಗುಲಪ್ರಮಾಣವಾಗಿವಸ್ತುವು ಪುಂಗುಟಕ್ಕೆಬರುವದು । ವೃಕ್ಷವನೇರಿದಸರ್ಪದಂತ ಬ್ರಹ್ಮರಂಧ್ರ ಕೊನೆಯಲ್ಲಿಯೇರುವದು ।ಹೆದ್ದಂಬೆಯ ಕೊಳವೆಯೋಪಾದಿಯಲ್ಲಿ ವಸ್ತುವ ಅಳಿನೆತ್ತಿಯಸ್ಥಾನದಲ್ಲಿ । ಯೇರಿಹೋಗುವದು । ಈಮನಸಂಬಿವಶರಣಬಲ್ಲ ।ಇದುಹಂನೆರಡುತಾಸುಹೊತ್ತಿನಹೇನಪುರುಸತ್ತಿಗೆಹೇಳಿದಅರಹು । ಇಂತಪ್ಪವಸ್ತುವಿನನಿಲುಕಡೆಯಬಲ್ಲಂತಾ ಶಿವಶರಣನುತನ್ನ ಅವಸಾನದಕಾಲದ ಚ್ಚರಿಕೆಯನರಿದು। ಗೋವುಮಲಗುವಷ್ಟು ಧರಣಿಯ ಸಾರಣೆ ಯಂಮಾಡುವದು । ಗೋಮಯ । ಗೋಮಯತ್ರ । ಗೋಕ್ಷೀರ। ಗೋದಧಿ । ಗೋಘೃತ । ಗೋರೋಜನವೆಂಬ ಷಡು ಸಮ್ಮಾರ್ಜನೆಯಂಮಾಡಿ । ಶಿವಲಿಂಗಜಂಗಮದ ದೂಳಪಾದಾರ್ಚನೆಯವುದಕವುಂ ಮಾಡಿಸಿ ಸಮ್ಮಾರ್ಜನೆಯಮಾಡುವದು । ರಂಗವಾಲೆಯತುಂಬುವದು । ಭಸ್ಮವಂತಳೆವುದು । ಪಾದೋದಕಪ್ರಸಾದವುಂಸಲಿಸಿ । ಶಿವಗಣಂಗಳಿಗೆವಂದನೆಯಮಾಡಿ । ಆಸಮ್ಮಾರ್ಜನೆಯಲ್ಲಿಗದ್ದುಗೆಯಂಮಾಡಿ । ಅದರಮೇಲೆ ಮೂರ್ತಮಾಡಿ ಓನ್ನಮಃಶಿವಾಯಯೆಂಬಮಂತ್ರಸ್ಮರಣೆಮಾಡುವದು । ಹಸ್ತದಲ್ಲಿ ಇಷ್ಟಲಿಂಗವಹಿಡಿದುಕೊಂಡು ! ಇರುವಂತಿಗೆ ಶಾವಂತಿಗೆ ಮೊಲ್ಲೆಮಲ್ಲಿಗೆಜಾಜಿ ಕರವೀರ ಸುರಹೊನ್ನೆ ಸಂಪಿಗೆಯ ಪುಷ್ಪವು। ಮರುಗಪಚ್ಚದವವನ ಬಿಲ್ವಪತ್ರೆ ಮೊದಲಾದ ಸಮಸ್ತಪತ್ರೆಗಳಂ ಧರಿಸಿ।ಶಿವಲಿಂಗವನ್ನು ಮನವಲಿದು ಕಂಗಳ ತುಂಬಿನೋಡುವಂಥಾ ದೇವಭಕ್ತರು ಬಂದರೆ । ಶರಣಾರ್ತಿಮಜ್ಜನವನೀಡಿ । ಶ್ರೀವಿಭೂತಿಯಧರಿಸಿ । ಪುಷ್ಪಪತ್ರಿಗಳಂಧರಿಸಿ।ಯೆಂದುಅವರಹಿಡಿದು ಶರಣಾರ್ತಿಸ್ವಾಮಿಗಳೆಂದ ಹೇಳಿ ಶಿವಾರ್ಪಿತವಂ ಮಾಡಿಯೆಂದುಬಿನ್ನಹವುಂಮಾಡುವದು।ಮದುವೆಯಮಾಂಗಲ್ಯಅರ್ಥವುತ್ಸಹ । ಶಕುನಿನಹೆಸರಿಡುವಹಾಂಗೆ। ಹರುಷಧೈರ್ಯಭೂಷಣವಾಗಿರ॥ದಾನಂಗಳಂಮಾಡಿಓಂನಮಶ್ಶಿವಾಯ ಎಂಬ ಮಂತ್ರಮಂಘೋಗರ್ಜರೆಯೆ ।ನಿರ್ಮಲತ್ಮದಿಂದೆಶಿವಜಂಗಮಪಾದವನ್ನು ಮಸ್ತಕದಮೇಲೆಇಡಿಸುವದು ಹಿತವಂತರಾದವರುಪಿರಶೈವದ ಪರಮವ ಚಂನಗಳಂ ಕೇಳಸುವದು॥

ಎಡಬಲದಲ್ಲಿ ಸಕಲಭಕ್ತಮಾಹೇಶ್ವರರು । ಓಂನಮಶ್ಶಿವಾಯ ಎಂಬವುಂತ್ರವನ್ನು ಆ ಶರಣನಕರ್ಣಗಳಲ್ಲಿ ಉಚ್ಚರಿಸುವದು । ಹಡಗದಹಗ್ಗವಪುತ್ತೊಂದು ಹಡಗಕ್ಕೆ ಹಾಕಿಬಿಗಿದರೆ । ಹಡಗಕ್ಕೆ ಹಡಗಕೂತಿ ಸಮುದ್ರದಲ್ಲಿ ತೆರೆಯೋಪಾದಿಯಲ್ಲಿ ಹಡಗಮಂ । ಪ್ರತಿಹಡಗದೊಳಗೆಮೂರ್ತವಮಾಡದಂತೆಮಂತ್ರಸಮ್ಮಂಧವಾಗಿಉರಿವಕರ್ಪೂರಗೋಪಂತಾಯಿತುನೋಡಾ। ಶರಣದೇಹವು । ಪ್ರಾಣವುಇದು ಗುಹ್ಯಕ್ಕೆ ಗುಹ್ಯ । ಗೋಪ್ಯಕ್ಕೆ ಗೋಪ್ಯ। ರಹಸ್ಯಕ್ಕೆ ರಹಸ್ಯನೋಡಾ ॥ಅ॥ ॥ ೧೮ ॥

ಏನೆಂಬೆನೇನೆಂಬನಯ್ಯಾ ಒಂದು ಎರಡಾದುದ । ಏನೆಂಬೆನೇನೆಂಬೆನಯ್ಯಾಸರ್ವಕೋರಿಕೆನಿರ್ವಯಲಾದುದ । ಏನೆಂಬೆನೇನೆಂಬೆನಯ್ಯಾ ಅಖಂಡೇಶ್ವರಾ ನಿಮ್ಮೊಳಗೆಯುನಗೆಸಮರಸಸೌಖ್ಯವುವು ಸಮ್ಮಂಧವಾದುದು ॥೧೯॥

ತನುವಿನಕಯ್ಯಲ್ಲಿ ಮೂರ್ತಿಗೊಂಡಿರ್ದ ಘನಮಹಾಲಿಂಗದೊಡನೆ ಮನಬಂದುಬೇಟವಮಾಡಲು । ತನುಮನವೆರಡುಉರಿಗೊಂಡಿರ್ದಕರ್ಪೂರದಂತೆಕಾಣಾ ಅಖಂಡೇಶ್ವರಾ ॥

ಅಂಗವುಲಿಂಗವಗ್ರಹಿಸಿತು.। ಲಿಂಗವುಮನವಗ್ರಹಿಸಿತು। ಪರಿಣಾಮಮನವುಅಜ್ಞಾನವಗ್ರಹಿಸಿತು । ಅಜ್ಞಾನವುನಪರಿಣಾಮವಗ್ರಹಿಸಿತು ।ವುಪರಿಪೂರ್ಣವಗ್ರಸಿಹಿತು। ಪರಿಣಾಮುವುಪರಿಪೂರ್ಣವಗ್ರಹಿಸಿತು ।ಪರಿಪೂರ್ಣವು ಪರಬ್ರಹ್ಮವಗ್ರಹಿಸಿತು । ಅಖಂಡೇಶ್ವರ ಶರಣಂಗೆ ಯಾವಬಂಧನವಿಲ್ಲಾ ॥ ೨೧ ॥

ನಾನಿಹಪರಿಯಂತರ ನೀನುನಂಟು । ನೀನಿಹಪರಿಯಂತರನಾನುಂಟು । ನಾನುನೀನೆಂಬುವವುಭಯದ ಸಂದವಳಿದಬಳಿಕ ಇನ್ನೇನುಂಟುಹೇಳಾಅಖಂಡೇಶ್ವರಾ॥ ॥ ೨೨ ॥

ತನುವಿನಪರಿಯಂತರನಿಮ್ಮ ಪೂಜಿಸದೆನಯ್ಯಾ। ಭಾವವಿಹಪರಿಯಂತರದಿನಿಮ್ಮ ಬಯಸಿದೆನಯ್ಯಾ । ಇಂತಿವೆಲ್ಲವುನಿಮ್ಮಲ್ಲಿಸಂಮ್ಮಂಧವಾದಬಳಿಕ। ಗಜಭುಕ್ತಕಪಿತ್ಥವಯ್ಯಾ ॥ಅ॥ ॥೨೩॥

ನಿಮ್ಮ ಪೂಜಿಸಿದವೆಂದಡೆ ತನುವಿಲ್ಲವಯ್ಯಾ। ಎನಗೆ ಅದೇನುಕಾರಣವೆಂದಡೆ,—ಯನ್ನತನುವೇನೀವೆಯಾದಿರಾಗಿ । ನಿಮ್ಮನೆನಹಿಪನೆಂದಡೆ । ಅರುಹಿಲ್ಲಮಯ್ಯಾ ಯನಗೆ । ಅದೇನು ಕಾರಣವೆಂದಡೆ ॥ ಆ ಅರುಹುನೀವೆಯಾಗಿ ಅಖಂಡೇಶ್ವರಾ ನಿಂಮೊಳಗೆನಾನು ಉರಿಗೊಂಡಕರ್ಪೂರದಂತಿರ್ದೆನಯ್ಯಾ ॥೨೪॥

ಯಂನಕಾಲಕಲ್ಪಿತಗಳುಹೊರಗಾದವಯ್ಯಾ । ಯುಗ್ಮನಭವಬಂಧನಂ

ಗಳುಹೊರಗಾದವಯ್ಯಾ । ಯಂನವುತ್ಪತ್ತಿಸ್ಥಿತಿಲಯಂಗಳುಹೊರಗಾದವ ಯ್ಯಾ । ಇಂತಿವೆಲ್ಲವುಹೊರಗಾದವಾಗಿ ಅಖಂಡೇಶ್ವರಾ ನಾನೊಬ್ಬನೇನಿಂ ವೊಳಗಾದೆನಯ್ಯಾ ॥ ೧ ॥

ಕಂನಡಿಯನೋಡುವಲ್ಲಿಪ್ರತಿಬಿಂಬಕಾಣಿಸುತಿರ್ದುದು । ಆನೋಟವ ಮರಳಿದಲ್ಲಿಪ್ರತಿರೂಪನಿಜರೂಪದಲ್ಲಿ ಅಡಗಿದಂತೆಅನುಪಮ ಬ್ರಹ್ಮದಲ್ಲಿನೆನ ಹುದೋರಿಚಿತ್ತನಿಸಿತು । ಆಚಿತ್ತಿನಿಂದಚಿನ್ನಾದಚಿದ್ಬಿಂದುಚಿತ್ಕಳೆಗಳುಅ ಮೂಲಚಿತ್ತ ಸ್ವರೂಪವಾದಶರಣಂಗೆ।ದೇಹಪ್ರಾಣಾತ್ಮಗಳಾಗಿಅಂಗಕ್ಕೆಪ ದಾರ್ಥಂಗಳಾಗಿರ್ದವು। ಆಪದಾರ್ಥವುಲಿಂಗಮುಖಕ್ಕೆಸಮರಸವೇದಿಸಿಅಖಿ ತ್ತುಚಿದ್ಘನವಬೆರೆಯಲು । ಪುನ್ನಿನಂತೆಐಕ್ಯವಾಯಿತಯ್ಯಾ ॥ ಅ ॥ ೧೬॥

ಅಹುದೆನಲೊಂವೆ । ಅಲ್ಲವೆನಲೊಂವೆಇಲ್ಲವೆನಲೊಂವೆ । ಬೇಕೆನ ಲೊವ್ವೆ । ಬೇಡೆನಲ್ವೊ । ಬೇಡೆನಲೊಂವೆಅಖಂಡೇಶ್ವರಾನೀವೆಂತಿರ್ದಂತೆ ಸಹಜವಾಗಿರ್ದೆನಯ್ಯಾ ॥ ೧೭ ॥

ನಾದನಿಜವೆಂಬೆನೇನಾದನಿಜವಲ್ಲ । ಬಿಂದುನಿಜವೆಂಬೆನೇಬಿಂದುನಿಜವ ಲ್ಲ । ಕಳೆನಿಜವೆಂಬೆನೇಕಳೆನಿಜವಲ್ಲ। ಅನಾದಬಿಂದುಕಳೆಕೆಳೆಂದೊರೆದಜಗವು ವುನಿಜವಲ್ಲ। ಆಜಗದಮಧ್ಯದಲ್ಲಿತೋರಿದಲೀಲೆನಿಜವೆಂಬೆನೇ ಆ ಲೀಲೆಯು ನಿಜವಲ್ಲ । ಇಂನಾವುದುನಿಜವೆಂಬಡೆ । ಅಲ್ಲಅಹುದುಯಿಲ್ಲವುಂಟುಬೇಕುಬೇ ಡೆಂಬಭಾವಕ್ಕೆ ಬಲ್ಲದೆತಾನಿದಿರೆಂಬ ಶಂಕೆದೋರದು ಅಖಂಡಪರಿಪೂರ್ಣನಾ ದಮಹಾಘನವೇನಿಂದುನಿಜದನಿಲುವಯ್ಯಾ ॥ಅ॥ ॥೧೮॥

ಆಮಹಾಘನಬೆಳಗಿನೊಳಗೆನಾನಂಬುದನರಿಯದಿರ್ದೆನಯ್ಯಾ । ಸ್ವಪ ನೇನುಅರಿಯದೆಮೌನದಿಂಮರದಿರ್ದೆನಯ್ಯಾ । ಅ॥ ॥ ೧೯ ॥

ಖಂಡಿತಭಯವಳಿದು। ಅಖಂಡಿತಪರಬ್ರಹ್ಮದಲ್ಲಿ। ಅವಿರಳಸಮರಸದಿಂ ದ। ಸತ್ಕ್ರಿಯೆಯೆಂಬುದೇನು। ಧ್ಯಾನಮೌನವೆಂಬುದೇನು । ನೇಮನಿತ್ಯವೆಂಬು ದೇನು। ತಪವೆಂಬುದೇನು। ಅರುಹುಆಚಾರವೆಂಬುದೇನು । ಗುರುಹುಪೂಜೆ ಯೆಂಬುದೇನು। ಇಂತಿಂಮರೆವುಳ್ಳನಕಾ ಭಿಂನಫಲದಪ್ರಾಪ್ತಿಯಲ್ಲದೆಅವಿರ ಳಸಮರಸಸೌಖ್ಯ ನಿರ್ವಾಯಲಿಕಡವುಯಿಲ್ಲಹುದೋ ಇದನರಿದು । ಇಂತಿ ವೆಲ್ಲಾಹಾಳಸಂಕಲ್ಪವಿಪರೀತವ ಭ್ರಾಂತಿಜ್ಞಾನವೇ ತನ್ನನಿಜವೇನಿಲವೆಂದು ತಿಳಿದುಧನ್ಯಾಯಿದಂತೆ ದೇಹವಿದ್ದೂ ನಿದ್ರೋಹಿಯಾಗಿರ್ದೆನಯ್ಯಾ ಅಖಂ ಡೇಶ್ವರಾ ॥ ॥೨೦॥

ಅನಂತಸಾಧನಂಗಳಕಲಿತಜಗಾರನುಅಭ್ಯಾಸವಕಲಿಸುವನಲ್ಲದೆಅತ್ತ ಮರಳಿ ಅಭ್ಯಾಸವಮಾಡುವನೆಅಯ್ಯಾ । ಅಖಂಡಪರಿಪೂರ್ಣಪರಬ್ರಹ್ಮವ

ನೊಡಗೂಡಿಮಹಾಘನ ಪರಶಿವಶರಣನು । ಸತ್ಕ್ರಿಯ್ಯವನಾಚರಿಸಿದಡು ಕೋಪಚಾರವಾಗಿ ಆಚರಿಸುವನಲ್ಲದೆ । ಮರಳಿತಾನು ಫಲವಹವುಕ್ತಿಯ ಪಡೆವನೆಂದು ಆಚರಿಹುವೇನಯ್ಯಾ। ಮರಳಿಯಿದುಕಾರಣನಿಮ್ಮ ಶರಣನು ಯಿಷ್ಟುಸತ್ಕ್ರಿಯವನಾಚರಿಸಿದರು । ಘೃತಸೋಕಿದರಸನನಂತನಿರ್ಲೇಪನಾಗಿಪ್ಪನಯ್ಯಾ ಆಖಂಡೇಶ್ವರಾ ॥

ಹಿಂದಣಸಂಚಿತವಹರಿದವುುಂದಣಭಯವವುರದು । ಪ್ರಭೆಯುಸಂಧಿಗತಿಯು । ಅಖಂಡಬ್ರಹ್ಮವೇತಾನಾದಶರಣಂಗೆಜನನವಿಲ್ಲ ಮರಣವಿಲ್ಲ ।ಕಾಲವಿಲ್ಲ ಕಲ್ಪಿತವಿಲ್ಲ ಸುಖವಿಲ್ಲ ದುಃಖವಿಲ್ಲ ಪುಣ್ಯವಿಲ್ಲ ಪಾಪವಿಲ್ಲ ಪ್ರಳಯವುಹಾಪ್ರಳಯಂಗಳನ್ನವೇಯಿಲ್ಲ। ಇದುಕಾರಣವಾಗಿ ಅನಂತಕೋಟಿಅಜಾಂಡವಳಿದು ಹೋದಡೆಯು।ಆಖಂಡೇಶ್ವರಾನಿಮ್ಮಶರಣನಿತ್ಯವಾಗಿವುಳಿವಿಹನು ಇಂದ್ರಚಂದ್ರರುಪ್ರಳಯವಾಗಿಹೋದರು । ಶರಣನೇನೆಂದು ಅರಿಯನುಅರಿವಿರಿಂಚಿಗಳುಪ್ರಳಯವಾಗಿಹೋದರು । ಶರಣನೇನೆಂದು ಆರಿಯನು ।ಮನುಮುನಿಗಳುಪ್ರಳಯವಾಗಿಹೋದರು । ಶರಣನೇನೆಂದು ಅರಿಯನು।ಪಂಚಾಶತ್ಕೋಟಿಬ್ರಹ್ಮಾಂಡಪ್ರಳಯವಾಗಿಹೋದರು ಶರಣನೇನೆಂದುಅರಿಯನು । ಅಖಂಡೇಶ್ವರಾ ನಿಮ್ಮಶರಣನೇನೆಂದುಅರಿಯ॥ ॥೩೦॥

ಘನಕ್ಕೆಘನವಾದವಸ್ತುವಿನಲ್ಲಿ । ಮನವಡಗಿದ ಮಹಾಮಹಿಮಂಗೆ ಮರಳಿನೆನೆಯಬೇಕೆಂಬದಿಲ್ಲನೆನದುಧ್ಯಾನಿಸಬೇಕೆಂಬದಿಲ್ಲ।ಧ್ಯಾನಿಸಿಕಾಣಬೆಕೆಂಬದಿಲ್ಲ । ಕಂಡುಕೂಡಬೇಕೆಂಬದಿಲ್ಲ ಅಖಂಡೇಶ್ವರನಿಮ್ಮನೊಡಗೂಡಿದ ಶರಣಂಗೆ ಯೇನೆಂದೆನೇಯಿಲ್ಲ ॥

ತೆರಹಿಲ್ಲತೆರಹಿಲ್ಲವಯ್ಯಾನಡೆನೋಟಕೆ । ತೆರಹಿಲ್ಲತೆರಹಿಲ್ಲವಯ್ಯಾ। ನುಡಿಗಡಣಕ್ಕೆ । ತೆರಹಿಲ್ಲತೆರಹಿಲ್ಲವಯ್ಯಾಮಹಾಜ್ಞಾನಕ್ಕೆ। ತೆರಹಿಲ್ಲತೆರಹಿಲ್ಲವಯ್ಯಾ ಭಾವಭಾವಕ್ಕೆ ಅಖಂಡೇಶ್ವರಾಯಲ್ಲವುನೀವೆಯಾಪಿರಾಗಿನಿಮ್ಮೊಳಗೆನೀವೇತಿಳಿವುತಿಪ್ಪಿರಿ। ನಿಮ್ಮೊಳಗೆನೀವೇಅರಿವುತಿಪ್ಪಿರಯ್ಯಾ॥ ॥೩೪॥

ಯಲ್ಲಿನೋಡಿದಲ್ಲಿನೀನೇದೇವಾ । ಯಲ್ಲಿಮುಟ್ಟಿರದಲ್ಲಿನೀನೇದೇವಾ ॥ ಯಲ್ಲಿಭಾವಿಸಿದಲ್ಲಿನೀನೇದೇವಾ । ಯಲ್ಲೆಡೆಯಲ್ಲಿ ನಿಮ್ಮಮಹಾಪ್ರಭೆಯೇ ಮುಸುಕಿತಾಗಿಅಖಂಡೇಶನಾನುನೀನೆಂಬುವದಕ್ಕೆ । ತೆರಹಿಲ್ಲದೇವಾ ॥೩೬॥

ಅಂಡಾಭರಣರುಘನವೆಂಬೆನೆ ಆಂಡಾಭರಣರಘನವಲ್ಲ। ರುಂಡಾಭರಣರು ಘನವೆಂಬೆನೆ ರುಂಡಾಭರಣರುಘನವಲ್ಲ । ಗಂಗಾಧರರುಘನವೆಂಬೆನೆ ಗಂಗಾಧರರುಘನವಲ್ಲ । ಗೌರೀವಲ್ಲಭರುಘನವೆಂಬೆನೆ ಗೌರೀವಲ್ಲಭರುಘನವಲ್ಲ। ಚಂದ್ರಶೇಖರರುಘನವೆಂಬೆನೆ ಚಂದ್ರಶೇಖರರುಘನವಲ್ಲ । ನಂದಿವಾ

ಹನರುಘನವೆಂಬೆನೆ ನಂದಿವಾಹನರುಘನವಲ್ಲ । ತ್ರಿಯಂಬಕರುಘನವೆಂಬೆನೆ ತ್ರಿಯಂಬಕರುಘನವಲ್ಲ। ತ್ರಿಪುರವೈರಿಗಳುಘನವೆಂಬೆನೆ ತ್ರಿಪುರವೈರಿಗಳುಘನವಲ್ಲ । ಪಂಚಮುಖರುಘನವೆಂಬೆನೆ ಪಂಚಮುಖರುಘನವಲ್ಲ ॥ ಫಣಿಕುಂಡಲರುಘನವೆಂಬೆನೆ ಫಣಿಕುಂಡಲರುಘನವಲ್ಲ । ಶೂಲಪಾಣಿಗಳಘನವೆಂಬೆನೆ ಶೂಲಪಾಣಿಗಳುಘನವಲ್ಲ । ನೀಲಲೋಹಿತರುಘನವೆಂಬೆನೆ ನೀಲಲೋಹಿತರುಘನವಲ್ಲ । ಅದೇನುಕಾರಣವೆಂದಡೆ ಇಂತಿನವರಾದಿಯಾಗಿ ಅನಂತಕೋಟಿರುದ್ರಗಣಂಗಳು ಶರಣನಸರ್ವಾಂಗದಲ್ಲಿ ಅಡಗಿಹರಾಗಿ। ಅಖಂಡೇಶ್ವರಾನಿಮ್ಮಶರಣರಘನಕ್ಕೆ ಘನವೆಂಬೆನಯ್ಯಾ ॥ ಪೃಥ್ವಿಅಡಗುವದಕ್ಕೆ ಅಪ್ಪುವೇಆಶ್ರಯವಾಗಿಪ್ಪುದು। ಅಪ್ಪುಅಡಗುವದಕ್ಕೆ ಅಗ್ನಿಯೇಆಶ್ರಯವಾಗಿರ್ಪುದು । ಆಅಗ್ನಿಅಡಗುವದಕ್ಕೆ ವಾಯುವೇಆಶ್ರಯವಾಗಿರ್ಪುದು । ವಾಯುಅಡಗುವದಕ್ಕೆ ಆಕಾಶವೇಆಶ್ರಯವಾಗಿರ್ಪುದು ।ಆಕಾಶಅಡಗುವದಕ್ಕೆ ಆತ್ಮವೇಆಶ್ರಯವಾಗಿರ್ಪುದು । ಆತ್ಮಅಡಗುವದಕ್ಕೆಆದಿಯೆ ಆಶ್ರಯವಾಗಿರ್ಪುದು.। ಆದಿಅಡಗುವದಕ್ಕೆ ಅನಾದಿಯೆ ಆಶ್ರಯವಾಗಿರ್ಪುದು ಅನಾದಿಅಡಗುವದಕ್ಕೆಶೂನ್ಯವೇಆಶ್ರಯವಾಗಿರ್ಪುದು । ಶೂನ್ಯಅಡಗುವದಕ್ಕೆ ನಿರ್ವಯವೇಆಶ್ರಯವಾಗಿರ್ಪುದು । ನಿರ್ವಯಲಡಗುವದಕ್ಕೆ ನಿಜವೇ ಆಶ್ರಯವಾಗಿರ್ಪುದು । ನಿಜವುಅಡಗುವದಕ್ಕೆಅಖಂಡೇಶ್ವರಾನಿಮ್ಮಶರಣರ ಪರಮಹೃದಯಕಮಲವೇ ಆಶ್ರಯವಾಗಿರ್ಪುದಯ್ಯಾ॥ ॥೩೮।

ಆನುಪಮಶರಣರನೆನಹಿನಕೊನೆಯಲ್ಲಿಘನಲಿಂಗವು। ಆಘನಲಿಂಗದನೆನೆಹಿನಕೊನೆಯಲ್ಲಿನಿರಾಳವು।ಆನಿರಾಳದಕೊನೆಯಲ್ಲಿ ಆದಿಮಹಾಘನಲಿಂಗವು। ಆಆದಿಮಹಾಘನಲಿಂಗದಕೊನೆಯಲ್ಲಿನೆನಹಿನಚಿಚ್ಛಕ್ತಿ । ಅಚಿಚ್ಛಕ್ತಿಯನೆನಹಿನಕೊನೆಯಲ್ಲಿ ಪರಮೇಶ್ವರನು । ಆಪರಮೇಶ್ವರನ ನೆನಹಿನಕೊನೆಯಲ್ಲಿಪರಶಕ್ತಿ । ಆಪರಶಕ್ತಿಯನೆನಹಿನಕೊನೆಯಲ್ಲಿಸದಾಶಿವನು । ಆ ಸದಾಶಿವನನೆನಹಿನಕೊನೆಯಲ್ಲಿ ಆದಿಶಕ್ತಿ । ಅ ಆದಿಶಕ್ತಿಯನೆನಹಿನಕೊನೆಯಲ್ಲಿ ಈಶ್ವರನು । ಆ ಈಶ್ವರನನೆನಹಿನಕೊನೆಯಲ್ಲಿ ಇಚ್ಛಾಶಕ್ತಿ । ಆಇಚ್ಛಾಶಕ್ತಿಯನೆನಹಿನಕೊನೆಯಲ್ಲಿ ಮಹೇಶ್ವರನು । ಆ ಮಹೇಶ್ವರನನೆನಹಿನಕೊನೆಯಲ್ಲಿ ಜ್ಞಾನಶಕ್ತಿ । ಆಜ್ಞಾನಶಕ್ತಿಯನೆನಹಿನಕೊನೆಯಲ್ಲಿ ಶ್ರೀರುದ್ರಮೂರ್ತಿ । ಆ ಶ್ರೀರುದ್ರಮೂರ್ತಿಯನೆನಹಿನಕೊನೆಯಲ್ಲಿ ಕ್ರಿಯಾಶಕ್ತಿ। ಆಕ್ರಿಯಾಶಕ್ತಿಯನೆನಹಿನಕೊನೆಯಲ್ಲಿ ವಿಷ್ಣು । ಆವಿಷ್ಣುವಿವನೆನಹಿನಕೊನೆಯಲ್ಲಿ ಲಕ್ಷ್ಮಿ ।ಆಲಕ್ಷ್ಮಿಯ ನೆನಹಿನಕೊನೆಯಲ್ಲಿಬ್ರಹ್ಮ ।ಆಬ್ರಹ್ಮನನೆನಹಿನಕೊನೆಯಲ್ಲಿ ಸರಸ್ವತಿ । ಆಸರಸ್ವತಿಯನೆನಹಿನಕೊನೆಯಲ್ಲಿ ಸಕಲ ಚರಾ

ಚರಂಗಳು । ಇಂತಿವೆಲ್ಲವು ಶರಣನನೆನಹು ದೋರಿದಲ್ಲಿಯೇ ತೋರುತಿರ್ಪ ವು । ಅದುಕಾರಣ ಅಖಂಡೇಶ್ವರಾ ನಿಮ್ಮಶರಣನು ಘನಕ್ಕೆಘನಮಹಿಮ । ಮಮುಕ್ಷ್ವನಕ್ಕೆಗೋಚರನು ವುಪಮಾತೀತನುನೋಡಾ ॥ ॥೩೯॥

ಆಕಾಶದಲ್ಲಿತೋರುವ ಇಂದ್ರಚಾಪವಡಗುವದಕ್ಕೆಆಕಾಶವೇಆಶ್ರಯ ವಲ್ಲದೇ । ಬೇರೆಮತ್ತೆಆಶ್ರಯವುಂಟೇ ಅಯ್ಯಾ । ಗಾಳಿಯಿಂದತೋರಿದಸು ಳಿಗಾಳಿಯಡಗುವದಕ್ಕೆ ಗಾಳಿಯೇಆಶ್ರಯವಲ್ಲದೆ । ಬೇರೆಮತ್ತೆ ಆಶ್ರಯ ವುಂಟೇಅಯ್ಯಾ । ಅಗ್ನಿಯಲ್ಲಿತೋರಿದ ಕಿಡಿಗಳಡಗುವದಕ್ಕೆಅಗ್ನಿಯೇ ಆಶ್ರಯವಲ್ಲದೆ ಬೇರೆಮತ್ತೇ ಆಶ್ರಯವುಂಟೇ ಅಯ್ಯಾ । ಆದಿಅನಾದಿಯಿಂ ದತತ್ವವಾದಪರವಸ್ತುವಿನಲ್ಲಿರೂಪಿಸಿ । ತೋರಿದನಿಜೈಕ್ಯವಡಗುವದಕ್ಕೆ ಆ ಪರವಸ್ತುವೇ ಆಶ್ರಯವಲ್ಲದೆ । ಬೇರೆಮತ್ತೆ ಆಶ್ರಯವುಂಟೇ ಅಖಂಡೇ ಶ್ವರಾ ॥ ॥೪೦॥

ಬಯಲುಬಯಲುಬೆರದಲ್ಲಿ ಮೇರೆಯುಂಟೆಅಯ್ಯಾ । ಕ್ಷೀರಕ್ಷೀರಕೂ ಡಿದಲ್ಲಿಮರಳಿರೂಹಿಸಿಹಿಡಿಯಲುಂಟೆಅಯ್ಯಾ । ನಿಮ್ಮೊಳಗೊಡವೆರದ ನಿಜೈ ಕ್ಯನಕುರುಹುಮರಳಿತೋರಲುಂಟೆ । ಅಯ್ಯಾ ಅಖಂಡೇಶ್ವರಾ ॥ ॥೪೧॥

ದಿನದಿನವುಕೂಡಿದಂತೆ ॥ ಬಯಲುಬಯಲುಬೆರದಂತೆ । ಮಾತುಮಾ ತುಕಲತಂತೆ । ಜ್ಯೋತಿಜ್ಯೋತಿಪಂದಾದಂತೆಅಖಂಡೇಶ್ವರಾ । ನಿಮ್ಮೊಳಡ ವೆರದನಿಜೈಕ್ಯನಕುರುಹುಯುಂತುಂಟಯ್ಯಾ ॥ ॥೪೨॥

ಕೇಳಿಕೇಳಿರಯ್ಯಾಮರ್ತ್ಯಲೋಕದಮಹಾಗಣಂಗಳುನೀವೆಲ್ಲಾ । ನಾ ವುನಮ್ಮಲಿಂಗದೊಳಗೆಲಿಂಗಸಹಿತಐಕ್ಯವಾಗುವಭಾವು ಯಿಂತೆಂದಡೆ, ಕೇಳಿ ರಯ್ಯಾಏಕಚಿತ್ತರಾಗಿಲಾಲಿಸಿರಯ್ಯಾ ಷಣ್ಮುಖನೆಂಬಗಣೇಶ್ವರನಹೃದಯ ಕಮಲದಲ್ಲಿ ಸಾನಂದನೆಂಬಗಣೇಶ್ವರನುಮೂರ್ತಿಗೊಂಡಿರ್ಪನುಸಾನಂದ ನೆಂಬಗಣೇಶ್ವರನಹೃದಯಕಮಲದಲ್ಲಿ ॥ ವಿಶ್ವತೋಮುಖನೆಂಬ ಗಣೇಶ್ವರ ನುಮೂರ್ತಿಗೊಂಡಿರ್ಪನು । ಆ ವಿಶ್ವತೋಮುಖನೆಂಬ ಗಣೇಶ್ವರನಹೃದ ಯಕಮಲದಲ್ಲಿ । ಅನಾದಿನಾಥನೆಂಬ ಗಣೇಶ್ವರನುಮೂರ್ತಿಗೊಂಡಿರ್ಪನು ಆ ಅನಾದಿನಾಥನೆಂಬಗಣೇಶ್ವರನ ಹೃದಯಕಮಲದಲ್ಲಿ ಗೋಳನಾಥನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು । ಆಗೋಳನಾಥನೆಂಬಗಣೇಶ್ವರನ ಹೃದಯಕಮಲದಲ್ಲಿ ಅಗಮ್ಯನೆಂಬಗಣೇಶ್ವರನು ಮೂರ್ತಿಗೊಂಡಿರ್ಪನು। ಆ ಅಗಮ್ಯನೆಂಬ ಗಣೇಶ್ವರನಹೃದಯಕಮಲದಲ್ಲಿ ಅಖಂಡೇಶ್ವರನೆಂಬ ಗ ಣೇಶ್ವರನು ಮೂರ್ತಿಗೊಂಡಿರ್ಪನು । ಆ ಅಭೇದ್ಯನೆಂಬಗಣೇಶ್ವರನ ಹೃದ ಯಕಮಲದಲ್ಲಿ ಅಪ್ರಮಾಣನೆಂಬಗಣೇಶ್ವರನು ಮೂರ್ತಿಗೊಂಡಿರ್ಪನು । ಪತಿ

ಜ್ಯೋತಿರ್ಮಯನೆಂಬ ಗಣೇಶ್ವರನ ಹೃದಯಕಮಲದಲ್ಲಿ ಅಭೇದ್ಯನೆಂಬ ಗಣೇಶ್ವರನು ಮೂರ್ತಿಗೊಂಡಿರ್ದನು । ಆ ಅಭೇದ್ಯನೆಂಬ ಗಣೇಶ್ವರನ ಹೃದಯಕಮಲದಲ್ಲಿ ಅಪ್ರಮಾಣನೆಂಬ ಗಣೇಶ್ವರನು ಮೂರ್ತಿಗೊಂಡಿರ್ದನು । ಆ ಅಪ್ರಮಾಣನೆಂಬ ಗಣೇಶ್ವರನ ಹೃದಯಕಮಲದಲ್ಲಿ । ಅವಾಚ್ಯಾತ್ಮಕನೆಂಬ ಗಣೇಶ್ವರನು ಮೂರ್ತಿಗೊಂಡಿರ್ದನು । ಆ ಅವಾಚ್ಯಾತ್ಮಕನೆಂಬ ಗಣೇಶ್ವರನ ಹೃದಯಕಮಲದಲ್ಲಿ ಶೂನ್ಯನಿರಾಲಂಬನೆಂಬ ಗಣೇಶ್ವರನು ಮೂರ್ತಿಗೊಂಡಿರ್ದನು । ಆ ಶೂನ್ಯನಿರಾಲಂಬನೆಂಬ ಗಣೇಶ್ವರನ ಹೃದಯಕಮಲದಲ್ಲಿ ನಮ್ಮ ಅಖಂಡೇಶ್ವರಲಿಂಗಸಹಿತ ನಿರವಯ ನಿರಾಲಂಬ । ನಿರ್ದ್ವೈತ ಬಾರದೇ ಇರ್ದವು ಕೇಳಿರಯ್ಯಾ ॥ ॥ ೪೩ ॥

ಶರಣನಿರ್ದಲ್ಲಿ ಸಕಲತೀರ್ಥಂಗಳಿರ್ದವು । ಶರಣನಿರ್ದಲ್ಲಿ ಕೈಲಾಸ ಮೇರು ಮಂದರ ಕುಲಶೈಲಂಗಳಿರ್ದವು । ಶರಣನಿರ್ದಲ್ಲಿ ಈರೇಳುಭುವನ ಹದಿನಾಲ್ಕುಲೋಕಂಗಳಿರ್ದವು । ನಮ್ಮ ಅಖಂಡೇಶ್ವರನ ಶರಣನಿದ್ದಲ್ಲಿ ಅನಂತಕೋಟಿ ಬ್ರಹ್ಮಾಂಡಗಳಿರ್ದವು ನೋಡಾ ॥ ॥೪೪॥

ಬಯಲಸ್ತ್ರೀಯಳ ನಿರವಯಲಪುರುಷ ಬಂದು ಕೂಡಲು । ಚಿದ್ಭಾವವೆಂಬ ಶಿಶುವು ಹುಟ್ಟಿತು । ಆ ಶಿಶುವಿನ ಮಹಾಭಾವವೆಂಬ ಬಯಲತೊಟ್ಟಿಲೊಳಗೆ ಮಲಗಿಸಿ ನಿರಾಳ ನಿಃಶೂನ್ಯಗಳೆಂಬ ನೇಣುಗಳ ಕಟ್ಟಿ ತೂಗಿ ಜೋಗುಳ ಪಾಡಲು । ಆ ಶಿಸುವು ತನ್ನಿಂದತಾನೆ ತಂದೆತಾಯಿಗಳಿಬ್ಬರನು ನುಂಗಿತು । ಆ ತಂದೆತಾಯಿಗಳ ನುಂಗಲೊಡನೆ ಜೋಗುಳವುಲುಹು ಅಡಗಿತು । ಆ ಜೋಗುಳವುಲುಹಡಗಲೊಡನೆ ನಿರಾಳ ನಿಃಶೂನ್ಯವೆಂಬ ನೇಣುಗಳು ಹರಿದವು ॥ ಆ ನಿರಾಳ ನಿಃಶೂನ್ಯವೇಣು ಹರಿಯಲೊಡನೆ ಆ ಶಿಶುವು ತೊಟ್ಟಿಲಸಹವಾಗಿ ಬಟ್ಟಬಯಲಾಯಿತು । ಆ ಶಿಶುವು ತೊಟ್ಟಿಲಸಹವಾಗಿ ಬಟ್ಟಬಯಲಾಗಲೊಡನೆ ಅಖಂಡೇಶ್ವರನೆಂಬ ಮಹಾಬಯಲು ಬಚ್ಚಬರಿಯ ಬಚ್ಚ ಘನಗಂಭೀರ ಮಹಾಬಯಲೊಳಗೆ ನಾನೆತ್ತ ಹೋದೆನೆಂದರಿಯೆನು ॥ ॥೪೫॥

ಸಾಕಾರವಿಲ್ಲದಬಯಲು । ನಿರಾಕಾರವಿಲ್ಲದಬಯಲು । ಪ್ರಕೃತಿಯಿಲ್ಲದಬಯಲು । ನಿವೃತ್ತಿಯಿಲ್ಲದಬಯಲು ಅಖಂಡೇಶ್ವರನೆಂಬ ಬಯಲೊಳಗೆ ನಾನೆತ್ತ ಹೋದೆನೆಂದರಿಯೆನು ॥ ॥೪೬॥

ಭಾವವಿಲ್ಲದಬಯಲು ಜೀವವಿಲ್ಲದಬಯಲು । ಜ್ಞಾನವಿಲ್ಲದಬಯಲು ಅಖಂಡೇಶ್ವರನೆಂಬ ಬಯಲೊಳಗೆ ನಿವೃತ್ತಿಯಾಗಿರ್ದೆನು ॥ ॥೪೭॥

ಆದಿಯಿಲ್ಲದಬಯಲು । ಅನಾದಿಯಿಲ್ಲದಬಯಲು । ಶೂನ್ಯವಿಲ್ಲದಬಯಲು

ಲು। ನಿಃಶೂನ್ಯವಿಲ್ಲದಬಯಲು। ನಿರಂಜನವಿಲ್ಲದಬಯಲು ನಿರಾಳವಿಲ್ಲದಬಯಲು। ನಾಮವಿಲ್ಲದಬಯಲು ನಿರವಯವಿಲ್ಲದಬಯಲು ಅಖಂಡೇಶ್ವರನೆಂಬ ಬಯಲಲ್ಲಿಯ ಬಯಲು ಮಹಾಘನಬಚ್ಚಬರಿಯ ಬಯಲೊಳಗೆ ಬಚ್ಚಬರವಾಗಿ ನಾನೆತ್ತ ಹೋದೆನೆಂದರಿಯೆನು॥ ॥೪೭॥

ಇತಿ ಅಖಂಡೇಶ್ವರ ವಚನಶಾಸ್ತ್ರವು

ಸಂಪೂರ್ಣ ಮಂಗಳಮಹಾ.

